# ಪ್ರಸಾದ

ದ್ವೈಮಾಸಿಕ

ಸಂಪುಟ ೩೭ ಸಂಚಿಕೆ ೪ ಜುಲೈ–ಆಗಸ್ಟ್ ೨೦೨೨




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಮೇರಿಲ್ಯಾಂಡ್‌ನ ಜೆಎಸ್‌ಎಸ್ ಸ್ಪಿರುಚ್ಯುಯಲ್ ಮಿಷನ್‌ನಲ್ಲಿ ಆಗಸ್ಟ್ 28ರಂದು ಜೆಎಸ್‌ಎಸ್ ಹಿಂದು ದೇವಾಲಯದ ಭೂಮಿಪೂಜೆಯು ಶ್ರೀ ಸುತ್ತೂರು ಮಠ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀಗಳವರಿಂದ ನೆರವೇರಿತು. ಶ್ರೀ ಉಮೇಶ್ ಜಿಮ್ ಶ್ರೀ ಕೆನ್ ರಿಚರ್ಡ್, ಶ್ರೀಮತಿ ಲಿಲಿ ಕ್ಯೂ , ಶ್ರೀ ಕೆಸ್‌ಮನ್, ಶ್ರೀಮತಿ ಅರುಣಾ ಮಿಲ್ಲರ್ ಶ್ರೀ ಮಾರ್ಕ್ ಎಲ್ರಿಚ್, ಶ್ರೀ ಅನ್ಮುಲ್ ಶರ್ಮಾ ಮೊದಲಾದವರುಗಳಿದ್ದಾರೆ (28 ಆಗಸ್ಟ್ 2022)




ಮೈಸೂರಿನ ಬೋಗಾದಿಯ ಬಾಪೂಜಿ ಬಡಾವಣೆಯಲ್ಲಿ ನೂತನ ಜೆಎಸ್‌ಎಸ್ ಬಾಲಕಿಯರ ಪದವಿಪೂರ್ವ ಕಾಲೇಜು ಹಾಗೂ ಕಟ್ಟಡವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಶ್ರೀ ಬಿ.ಸಿ. ನಾಗೇಶ್‌ರವರು ಉದ್ಘಾಟಿಸಿದರು. ಶ್ರೀ ಜಿ.ಡಿ. ಹರೀಶ್‌ಗೌಡ, ಶ್ರೀ ಅರುಣ್ ಶಹಾಪುರ, ಶ್ರೀಮತಿ ವೀಣಾ ನಾಗೇಶ್ ಹಾಗೂ ಡಾ. ಸಿ.ಜಿ. ಬೆಟಸೂರಮಠರವರಿದ್ದಾರೆ (29 ಜುಲೈ 2022)

# ಪ್ರಸಾದ

ಸಂಪುಟ 37 : ಸಂಚಿಕೆ 4 ಜುಲೈ–ಆಗಸ್ಟ್ 2022

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ

ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

---

ಮುಖಪುಟ ಚಿತ್ರ

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಕರ್ನಾಟಕದ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರು ಉದ್ಘಾಟಿಸಿದರು. ಮೇಯರ್ ಶ್ರೀಮತಿ ಸುನಂದ ಪಾಲನೇತ್ರ ಮತ್ತು ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರುಗಳಿದ್ದಾರೆ (18 ಆಗಸ್ಟ್ 2022)

**ದಶ ವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

## ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಶ್ರೀಮಠವನ್ನು ಕುರಿತು 10
**ಡಾ. ದೊಡ್ಡರಂಗೇಗೌಡ**

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು:
ವಿಶಾಲ ವಿದ್ಯಾವಟವೃಕ್ಷದ ರೂವಾರಿಗಳು 11
**ರಾಜ್ಯಪಾಲ ಶ್ರೀ ಥಾವರ್ ಚಂದ್ ಗೆಹ್ಲೋಟ್**
**ಅನು : ಡಾ. ಮೋಹನ್ ಸಿಂಗ್**

ಸಂತನ ಒಳಗ ಕಾಣಬೇಕು 14
**ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು**

ತಂಪು ನೆಳಲು–ಹಕ್ಕಿ ಸಾವಿರಾರು 21
**ಪ್ರೊ. ಜಿ.ಎಸ್. ಜಯದೇವ್**

ಹೀಗಿದ್ದರು ನಮ್ಮ ರಾಜೇಂದ್ರ ಬುದ್ದಿ 25
**ಡಾ. ಭ. ನಾಗರಾಜ್**

ಶ್ರೀಗಂಧದ ಕೊರಡು 30
**ಡಾ. ಎಚ್.ಟಿ. ಶೈಲಜ**

ವಾರ್ತಾವಿಹಾರ 36
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 67

## ಮನವಿ

ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1975 | ಮೂರನೇ ಸಂಚಿಕೆ |
| 7. | 1976 | ಮೂರನೇ ಸಂಚಿಕೆ |
| 8. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

ಧ್ಯಾನಕ್ಕೆ ನಿಮ್ಮ ಶ್ರೀಮೂರ್ತಿಯೆ ಮುಖ್ಯವಯ್ಯಾ
ಪೂಜೆಗೆ ನಿಮ್ಮ ಶ್ರೀಪಾದವೆ ಮುಖ್ಯವಯ್ಯಾ
ಮಂತ್ರಕ್ಕೆ ನಿಮ್ಮ ನಾಮಾಮೃತವೆ ಮುಖ್ಯವಯ್ಯಾ
ಮುಕ್ತಿಗೆ ನಿಮ್ಮ ಘನಕೃಪೆಯೆ ಮುಖ್ಯವಯ್ಯಾ
ನಿಮ್ಮಿಂದಧಿಕರನಾರನೂ ಕಾಣೆನಯ್ಯಾ
ಕೂಡಲಸಂಗಮದೇವಾ, ನೀವು ಜ್ಞಾನಗುರುವಾದ ಕಾರಣ

ಬಸವಣ್ಣನವರ ಈ ವಚನವನ್ನು ನೆನೆದಾಗಲೆಲ್ಲ ಪರಮಪೂಜ್ಯ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ನಮ್ಮ ಕಣ್ಣ ಮುಂದೆ ಬೆಳಗಿದಂತಾಗುತ್ತದೆ. ಬಸವಣ್ಣನವರಿಗೆ ಕೂಡಲಸಂಗಮದೇವ ಹೇಗೆ ಮೈಮನಗಳನ್ನು ವ್ಯಾಪಿಸಿದ್ದರೋ ಹಾಗೆ ಡಾ. ರಾಜೇಂದ್ರ ಶ್ರೀಗಳ ನೆನಪು ನಿರಂತರವಾಗಿರುತ್ತದೆ. ಏಕೆಂದರೆ ಪೂಜ್ಯರು ಆಶೀರ್ವಾದ ದಯಪಾಲಿಸಿದವರು ಹಾಗೂ ಶಿಕ್ಷಾಗುರುಗಳು, ಜ್ಞಾನಗುರುಗಳಾಗುವ ಮೂಲಕ 'ಅಂತರತಮಗುರು'ವಾಗಿ ಸದಾ ಎಚ್ಚರಿಸುತ್ತ, ಅಭಯಹಸ್ತ ನೀಡುತ್ತಾ ಅಂತರಂಗ ಹಾಗೂ ಬಹಿರಂಗಗಳನ್ನು ಹಸನುಗೊಳಿಸುತ್ತಿದ್ದಾರೆ. ಈ ಹಸನುಗೊಳಿಸುವ ಅಭೀಪ್ಸೆ ಅವರೊಳಗೆ ಪ್ರಜ್ವಲಿಸಿದ ಕಾರಣ, ಆ ಬೆಳಕು ಶ್ರೀಮಠವನ್ನು ಧಾರ್ಮಿಕ ಪ್ರಕ್ರಿಯೆಗಳ ಚೌಕಟ್ಟಿನಿಂದ ಆಚೆಗೂ ವಿಸ್ತರಿಸುವಂತೆ ಮಾಡಿ ಸಮಾಜಮುಖಿಯಾಗಿಸಿತು. ಈ ಸಮಾಜಮುಖಿ ಕಾರ್ಯಗಳನ್ನು ಅವರು ಸಮಷ್ಟಿಯ ಪೂಜೆ ಎಂದೇ ಭಾವಿಸಿದರು. "ಹರಿವ ನದಿಗೆ ಮೈಯೆಲ್ಲ ಕಾಲು, ಉರಿವ ಬೆಂಕಿಗೆ ಮೈಯೆಲ್ಲ ನಾಲಗೆ" ಎನ್ನುವ ರೀತಿಯಲ್ಲಿ, ಅವರ ಕಾಯ ವಾಕ್ಕು ಮನಸ್ಸುಗಳೆಲ್ಲವೂ ನೊಂದವರ, ಅಸಹಾಯಕರ, ಗ್ರಾಮೀಣ ಮುಗ್ಧ ಜನತೆಯ ಮಕ್ಕಳುಗಳ ಉತ್ಥಾನಕ್ಕಾಗಿ ಶ್ರಮಿಸಿದವು. ಕಪಿಲೆಯ ದಡದಲ್ಲಿ ಗುಪ್ತವಾಗಿ ಸಾಧನೆ ಮಾಡುತ್ತಾ, ವ್ಯಕ್ತವಾಗಿ ಅಸಹಾಯಕರ ಉದ್ಧಾರದ ಕನಸು ಕಾಣುತ್ತಾ ಶ್ರೀಪೀಠದ ಕಾರ್ಯಚಟುವಟಿಕೆಗಳನ್ನು ಅದಕ್ಕಾಗಿ ಸಜ್ಜುಗೊಳಿಸುತ್ತಲೇ ಬಂದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರಾದಿಯಾಗಿ ಸುತ್ತೂರು ಪರಂಪರೆಯ ಎಲ್ಲ ಗುರುವರೇಣ್ಯರ ಧೀಶಕ್ತಿಯು ಡಾ. ರಾಜೇಂದ್ರ ಶ್ರೀಗಳವರಲ್ಲಿ ಹರಳುಗಟ್ಟಿದಿಯೋ ಎಂಬಂತೆ ಅವರು ಶ್ರೀಮಠವನ್ನು ಆಧ್ಯಾತ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಬಹು ಎತ್ತರಕ್ಕೆ ಏರಿಸಿದರು.

ಇಂದು ಅವರು ನಮ್ಮೊಡನಿದ್ದಿದ್ದರೆ ಈಗ ಅವರಿಗೆ 107 ಸಂವತ್ಸರಗಳು. ಆದರೆ ಕಾಲದ ಕಟ್ಟಳೆ ಎನ್ನುವುದೊಂದು ಇರುತ್ತದಲ್ಲಾ ! ಹೀಗಿದ್ದೂ, ಅವರು ಹೊತ್ತಿಸಿದ ಜ್ಯೋತಿಯ ಪ್ರಭಾವಲಯ ಜನತೆಯ ಬಾಳನ್ನು ಅನವರತ ಬೆಳಗುತ್ತಿರುವುದಷ್ಟೇ ಮುಖ್ಯವಾಗಿ ಎಲ್ಲರ ಪಾಲಿನ ಪುಣ್ಯವಾಗಿದೆ. ಹಾಗೆ ನೋಡಿದರೆ ಮಹಾತ್ಮರು ಸಾಧನೆ ಮಾಡಿದ ಪ್ರದೇಶ ಕ್ಷೇತ್ರವಾಗುವುದೂ, ಅವರ ಗದ್ದುಗೆ ಶಕ್ತಿಸ್ಥಳವಾಗುವುದೂ ಈ ಕಾರಣಕ್ಕಾಗಿಯೇ. ಅವರು ಜನರ ಹೃದಯಗಳನ್ನು ಗೆದ್ದದ್ದು, ಅವರ ಮಾತೃಹೃದಯದ ಭಾವಸ್ಫುರಣದಿಂದ, ಎಲ್ಲರಿಗೂ ಲೇಸನೇ ಬಯಸುವ ವಿಶ್ವಮಾನವತೆಯ ಗುಣದಿಂದ. ಅಂತಹ ಪರಮಗುರುವಿನ ಸ್ಮರಣೆ ನಿರಂತರವಾಗಿ ಎಲ್ಲರ ಅಂತರಂಗ ಬಹಿರಂಗಗಳನ್ನು ಸದಾ ಮಡಿಯಾಗಿರಿಸಿದೆ. ಇದುವೆ ಸರ್ವರ ಸೌಭಾಗ್ಯ.

ಈ ಬಾರಿ ಅವರ ಜನ್ಮ ದಿನವನ್ನು 28.8.2022ರಂದು ಅಮೆರಿಕದ ಮೆರಿಲ್ಯಾಂಡ್‌ನಲ್ಲಿರುವ ನಮ್ಮ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ನಿನಲ್ಲಿ ಆಚರಿಸಲಾಗುತ್ತಿದೆ. ಇದು ಅಲ್ಲಿ ನೆಲೆಸಿರುವ ಶ್ರೀಮಠದ ಭಕ್ತರು, ಅಭಿಮಾನಿಗಳು ಹಾಗೂ ಹಿರಿಯ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡುತ್ತಿದೆ. ಶ್ರೀಮಠದ ತ್ರಿವಿಧ ದಾಸೋಹದಿಂದ ಅವರ ಬದುಕುಗಳನ್ನು ರೂಪಿಸಿಕೊಂಡು ಈಗ ಅಮೆರಿಕದಲ್ಲಿ ನೆಲೆಸಿರುವವರೆಲ್ಲ ಇಂತಹದೊಂದು ಅಪರೂಪದ ಪವಿತ್ರ ಸಂದರ್ಭವನ್ನು ಸಾಕ್ಷೀಕರಿಸುತ್ತಿರುವುದು ಅತೀವ ಸಂತೋಷ ತಂದಿದೆ.

ಇದೇ ಆಗಸ್ಟ್ 15 ರಂದು ನಡೆಯಲಿರುವ 75ನೇ ಸ್ವಾತಂತ್ರ್ಯೋತ್ಸವವನ್ನು ಇಡೀ ದೇಶ ಸಂಭ್ರಮ, ಸಡಗರಗಳಿಂದ ಆಚರಿಸುತ್ತಿದೆ. ಕೋಟಿಕೋಟಿ ಮನೆಗಳ ಮೇಲೆ ರಾಷ್ಟ್ರಧ್ವಜ ಹಾರಾಡಲು ಕಾರಣವಾದ 'ಹರ್ ಘರ್ ತಿರಂಗಾ' ಎನ್ನುವ ವಿನೂತನ ಕಾರ್ಯಕ್ರಮ ಇಡೀ ದೇಶದಲ್ಲಿ ಒಂದು ದೊಡ್ಡ ಸಂಚಲನವನ್ನುಂಟುಮಾಡಿದೆ. ರಾಷ್ಟ್ರಪ್ರೇಮ ಎನ್ನುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಬಹು ದೊಡ್ಡ ಮೌಲ್ಯ. ಅದು ಪ್ರತಿಯೊಬ್ಬರಲ್ಲೂ ಜಾಗೃತಗೊಂಡು ಭರತಖಂಡ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತಷ್ಟು ಬೆಳಗಬೇಕಾಗಿದ್ದು, ಆ ದಿಸೆಯಲ್ಲಿ ಚಿಂತಿಸುವುದು ಪ್ರಜೆಗಳೆಲ್ಲರ ಆದ್ಯ ಕರ್ತವ್ಯ.

ಈ ಸಂದರ್ಭದಲ್ಲಿ ಪರಮಪೂಜ್ಯ ರಾಜೇಂದ್ರ ಶ್ರೀಗಳ ಆಶೀರ್ವಾದ ಎಲ್ಲರಿಗೂ ಲಭಿಸಲೆಂದು ಆಶಿಸುತ್ತಾ, 75ನೇ ಸ್ವಾತಂತ್ರ್ಯದ ಅಮೃತಮಹೋತ್ಸವ ಸರ್ವರಲ್ಲೂ ನವಚೈತನ್ಯವನ್ನು ತುಂಬಲೆಂದು ಹಾರೈಸುತ್ತೇವೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಪ್ರತಿ ವರ್ಷ ಆಗಸ್ಟ್ 15 ಭಾರತೀಯರಿಗೆ ಬಹು ಸಂಭ್ರಮದ ದಿನ. ದುರ್ದೈವವಶಾತ್ ಭಾರತೀಯರು ಹೆಚ್ಚು ಕಾಲ ದಾಸ್ಯದಲ್ಲಿಯೇ ಬದುಕಿದವರು. ಫ್ರೆಂಚರು, ಡಚ್ಚರು, ಮುಸಲ್ಮಾನರು, ಬ್ರಿಟಿಷರು ಹೀಗೆ ಒಬ್ಬೊಬ್ಬರೂ ನಮ್ಮನ್ನು ಶತಮಾನಗಳ ಕಾಲ ಆಳಿದರು. ದೇಶದ ಸಂಪತ್ತನ್ನು ಲೂಟಿ ಮಾಡಿ ತಮ್ಮ ದೇಶಗಳಿಗೆ ಹಡಗುಗಟ್ಟಲೆ ಸಂಪತ್ತನ್ನು ಸಾಗಿಸಿದರು. ಇಲ್ಲಿ ಐದುನೂರಕ್ಕೂ ಹೆಚ್ಚಿಗೆ ಇದ್ದ ಸಣ್ಣ ಪುಟ್ಟ ರಾಜ್ಯಗಳನ್ನು ತಮ್ಮ ತಂತ್ರ, ಕುತಂತ್ರಗಳಿಂದ ಒಂದೊಂದಾಗಿ ವಶಪಡಿಸಿಕೊಂಡರು. ಬಹುಸಂಸ್ಕೃತಿ ಹಾಗೂ ಸಂಘಟನಾರಾಹಿತ್ಯವೇ ನಮ್ಮವರನ್ನು ಒಡೆದು ಆಳುವುದಕ್ಕೆ ಹೊರಗಿನವರಿಗೆ ಅನುಕೂಲ ಮಾಡಿಕೊಟ್ಟಿತು. ಕೊನೆಗೂ ಅಸಂಖ್ಯಾತ ದೇಶಪ್ರೇಮಿಗಳ ತ್ಯಾಗ, ಬಲಿದಾನಗಳಿಂದ ದೇಶ ಸ್ವಾತಂತ್ರ್ಯವನ್ನು ಪಡೆಯುವಂತಾದಾಗ ದೇಶದ ಭೂಪಟದಲ್ಲಿ ಬೆಳ್ಳಿರೇಖೆಯೊಂದು ಮೂಡಿತು. ಸ್ವಲ್ಪ ಮಂದಗತಿಯ ಪಯಣ ಎನಿಸಿದರೂ ಭಾರತ ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಗಮನಾರ್ಹ ಪ್ರಗತಿಯನ್ನು ಸಾಧಿಸಿರುವುದು ಹೆಮ್ಮೆಪಡಬೇಕಾದ ವಿಷಯವೇ. ಈಗ ಸ್ವಾತಂತ್ರ್ಯದ 'ಅಮೃತ ಮಹೋತ್ಸವ'ವನ್ನು (75 ವರ್ಷ) ದೇಶಾದ್ಯಂತ ಆಚರಿಸಲಾಗುತ್ತಿದೆ. ಈ ಸುದೀರ್ಘ ಹಾದಿಯನ್ನು ಒಮ್ಮೆ ತಿರುಗಿ ನೋಡಿದರೆ ಖಂಡಿತವಾಗಿಯೂ 'ಮೇರಾ ಭಾರತ್ ಮಹಾನ್' ಎಂಬ ಮಾತು ನಮ್ಮಲ್ಲಿ ಅಭಿಮಾನ ಹುಟ್ಟಿಸುತ್ತದೆ.

ಈ ನಡುವೆ 2019ರಲ್ಲಿ ಬಂದ ಕೊರೋನಾ ಸಾಂಕ್ರಾಮಿಕ ರೋಗ ಇಡೀ ಜಗತ್ತನ್ನು ತತ್ತರಗೊಳಿಸಿತು. ಸ್ಪ್ಯಾನಿಶ್ ಫ್ಲೂ, ದಡಾರ, ಪ್ಲೇಗ್, ಹಕ್ಕಿಜ್ವರ, ಸಿಡುಬು, ಪೋಲಿಯೊ ಈ ಎಲ್ಲವನ್ನೂ, ಕೊನೆಗೆ ಮಹಾಮಾರಿ ಕೊರೋನಾವನ್ನೂ, ಸಮರ್ಥವಾಗಿ ಎದುರಿಸಿದ ಹೆಮ್ಮೆ ನಮ್ಮದು.

ಇಷ್ಟೆಲ್ಲದರ ನಡುವೆಯೂ ಭಾರತ ಪ್ರಗತಿಪಥದಲ್ಲಿ ಸಾಗುತ್ತಿರುವುದು ನಿಚ್ಚಳವಾಗಿ

ಗೋಚರವಾಗುತ್ತಿದೆ. ದುಡಿಯುವ ಕೈಗಳಿಗಂತೂ ಕೆಲಸ ಇದ್ದೇ ಇದೆ. ಜಾಗತೀಕರಣದ ಎಲ್ಲ ಸವಾಲುಗಳನ್ನು ಎದುರಿಸುತ್ತಲೇ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ವಿದ್ಯಾಭ್ಯಾಸ, ಕೃಷಿ ಉತ್ಪನ್ನಗಳ ಹೆಚ್ಚಳ – ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಅಭೂತಪೂರ್ವ ಸಾಧನೆಯಾಗಿದೆ. ಇನ್ನೂ ಅಲ್ಲಲ್ಲಿ ಅಸ್ಪೃಶ್ಯತೆ, ಲಿಂಗ ಅಸಮಾನತೆ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಇವು ಇದ್ದರೂ ಅವೂ ಕ್ರಮೇಣ ಶಿಥಿಲಾವಸ್ಥೆಗೆ ತಲುಪುತ್ತಿವೆ. ರಾಜಕೀಯ ಕ್ಷೇತ್ರವೊಂದು ಮಾತ್ರ ಸಮಗ್ರ ಶುದ್ಧೀಕರಣಕ್ಕೆ ಒಳಗಾಗಬೇಕಾಗಿದೆ. ಪತ್ರಿಕಾ ವರದಿಯೊಂದರ ಪ್ರಕಾರ, ನಮ್ಮ ಪ್ರತಿನಿಧಿಗಳ ಪೈಕಿ ಶೇ.40ರಷ್ಟು ಜನ ಅಪರಾಧಿ ಹಿನ್ನೆಲೆ ಇರುವವರೆಂಬುದು ಒಂದು ದೊಡ್ಡ ದುರಂತ. ಪಾಪ, ಇದು ಅವರ ತಪ್ಪಲ್ಲ, ಮತದಾರರ ಪ್ರಜ್ಞಾವಂತಿಕೆಯಲ್ಲಿರುವ ದೋಷವಷ್ಟೆ! ಇಷ್ಟೆಲ್ಲಾ ಇದ್ದಾಗ್ಯೂ 'ಮೇರಾ ಭಾರತ್ ಮಹಾನ್' ಎಂದು ನಾವು ಎದೆ ತಟ್ಟಿ ಹೇಳಿಕೊಳ್ಳುವ ಸಂದರ್ಭ ಈ 75ನೇ ಸ್ವಾತಂತ್ರ್ಯೋತ್ಸವ.

ಈ ಸಂತಸದ ಜೊತೆಗೆ ನಮ್ಮ ಸಂತೋಷಕ್ಕೆ ಮತ್ತೊಂದು ಪ್ರಮುಖ ಕಾರಣವೆಂದರೆ ಇದೇ ಆಗಸ್ಟ್ 29ರಂದು ನಡೆಯುತ್ತಿರುವ ಜಗದ್ಗುರು ಶ್ರೀ ರಾಜೇಂದ್ರ ಶ್ರೀಗಳವರ 107ನೇ ಜಯಂತಿ ಮಹೋತ್ಸವದ ಆಚರಣೆ. ಬಸವಾದಿ ಪ್ರಮಥರು ಹಾಕಿಕೊಟ್ಟ ಹಾದಿಯಲ್ಲಿ ನಡೆಯುವುದೇ ಬದುಕಿನ ನಿಜವಾದ ಪೂಜೆ, ನಿಜವಾದ ಕಾಯಕ ಎಂದು ತಿಳಿದು ಅದನ್ನೊಂದು ವ್ರತವಾಗಿ ಸ್ವೀಕರಿಸಿದವರು, ರಾಜೇಂದ್ರ ಶ್ರೀಗಳವರು. ಅವರ ದಿವ್ಯ ಸಂಕಲ್ಪದಿಂದ ಕರ್ನಾಟಕದ ಅನೇಕ ಶಕ್ತಿಸ್ಥಳಗಳಲ್ಲಿ ಇಂದು ಶ್ರೀ ಸುತ್ತೂರು ಮಠವೂ ಒಂದಾಗಿದೆ.

ಈ ದೃಷ್ಟಿಯಿಂದ ಪರಮಪೂಜ್ಯ ರಾಜೇಂದ್ರ ಶ್ರೀಗಳು ನಡೆಸಿದ ದಾಸೋಹಕೈಂಕರ್ಯ ಉಲ್ಲೇಖನೀಯ. ಮಠಗಳೆಂದರೆ ಕೇವಲ ಧರ್ಮ ಮತ್ತು ತತ್ವಜ್ಞಾನದ ಸೂಕ್ಷ್ಮಗಳನ್ನು ವ್ಯಾಖ್ಯಾನಿಸುವ, ನೊಂದು ಬಂದ ಮನಸ್ಸುಗಳಿಗೆ ಸಾಂತ್ವನ ಹೇಳುವ ಕೇಂದ್ರಗಳಾಗಿರುವುದರ ಜೊತೆಗೆ ಆಯಾ ಕಾಲಕ್ಕೆ ತಕ್ಕಂತೆ, ಅದರಾಚೆಗೂ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳಬೇಕಾದುದು ಅನಿವಾರ್ಯ. ಏಕೆಂದರೆ, ಧರ್ಮಸಂಬಂಧಿ ಜಿಜ್ಞಾಸೆಗಳು ಬೇರೆ ಬೇರೆ ಆಯಾಮವನ್ನು ಪಡೆದುಕೊಳ್ಳುತ್ತಿರುವ ಇಂದಿನ ದಿನಮಾನಗಳಲ್ಲಿ ಇದು ಅಗತ್ಯವೂ, ಅನಿವಾರ್ಯವೂ ಆಗಿದೆ. ಇದನ್ನು ಆಗಲೇ ಕ್ರಾಂತದೃಷ್ಟಿಯಿಂದ ಗ್ರಹಿಸಿದ್ದ ಪೂಜ್ಯ ರಾಜೇಂದ್ರ ಶ್ರೀಗಳವರು ಸಮಾಜಮುಖಿ

ಮಾರ್ಗದಲ್ಲಿ ಕ್ರಮಿಸಿ, ಮಠಪರಂಪರೆಗೆ ಒಂದು 'ಮಹಾಮಾರ್ಗ'ವನ್ನು ನಿರ್ಮಿಸಿದ್ದು ನಿಜಕ್ಕೂ ದೊಡ್ಡ ಕ್ರಾಂತಿಯೇ ಸರಿ.

ಅಂತಹ ಪೂಜ್ಯರ 107ನೇ ಜಯಂತಿ ಹಾಗೂ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆ ಈ ಎರಡೂ ಒಂದರೊಳಗೊಂದು ಬೆರೆತು ವಿಶೇಷ ಅರ್ಥಪರಿವೇಷವನ್ನು ಧ್ವನಿಸುವಂತಿವೆ.

**ಪ್ರೊ. ಮಲೆಯೂರು ಗುರುಸ್ವಾಮಿ**
**ಸಂಪಾದಕ**

## ಮತ್ತೆ ಮಾತುಂಟೆ ?

**ಪ್ರೊ. ಮ.ಗಂ. ರೇಣುಕ ಪ್ರಸನ್ನ**

ಮಾತೆಲ್ಲ ಕೃತಿಯಾಗಿ
ಕೃತಿಯೇ ಮಾತಾಗಿ
ನುಡಿ ನಡೆ ಒಂದಾಗಿ
ಕಡೆ ಜನ್ಮ ಸಾಧಿಸಿದ
ಓ ರಾಜೇಂದ್ರ ಗುರುವೇ
ಮತ್ತೊಮ್ಮೆ ನಿನ್ನಡಿಗೆ
ಮುಡಿಯಿಡುತ
ನೀನಿಟ್ಟ ಹೆಜ್ಜೆಯಲಿ
ಹೆಜ್ಜೆಯಿಕ್ಕುವ ಯತ್ನದಲಿ
ಮೌನದಲ್ಲೇ
ಮತ್ತೊಮ್ಮೆ
ಮಗುದೊಮ್ಮೆ
ನಮೋ ನಮೋ ಎಂಬುದಲ್ಲದೆ
ಮತ್ತೆ ಮಾತುಂಟೆ ?
ಮಾತುಂಟೆ ಗುರುವೇ?

# ಶ್ರೀಮಠವನ್ನು ಕುರಿತು

ಡಾ. ದೊಡ್ಡರಂಗೇಗೌಡ
ಹಿರಿಯ ಕವಿಗಳು

ಜನಮನವ ಸೆಳೆದ, ದಿವ್ಯ ದೇಗುಲ ಮೆರೆದ
ಸುತ್ತೂರು ಮಠವ ನೋಡೋ ;
ಶಿವರಾತ್ರೀಶ್ವರ ಮಹಾಸ್ವಾಮಿಯು ತೆರೆದ
ಶ್ರೀಮಠದ ಚರಿತೆ ಹಾಡೋ ! ॥ ಪ ॥

ಅನುಗಾಲವಿಲ್ಲಿ ಅನುಭಾವದಲ್ಲಿ
ಬೆಳಕಾದ ಶರಣರ ನೆನೆಯೋ...
ಕಲ್ಪವೃಕ್ಷದಂತೆ ಕಾಮಧೇನುವಂತೆ
ದಾಸೋಹ ಉಂಡು ತಣಿಯೋ ! ॥ 1 ॥

ಇತಿಹಾಸ ತಿಳಿವ ಆಸೆ ಇದ್ದರೆ ನಿನಗೆ...
ಶಿಲಾಶಾಸನ ಓದಿ ನಲಿಯೋ ;
ಪರಂಪರೆಯ ಅರಿತು ಗುರುದೇವಗೆ ನಮಿಸಿ
ಮಠದ ಹಿರಿಮೆ ಕಂಡು ಕುಣಿಯೋ ! ॥ 2 ॥

"ಶಿವಮಂತ್ರ ಮಹಿಮೆ" ಒಳಹೊಕ್ಕು ನೋಡಿ
ಸ್ತೋತ್ರ ಗೀತ ಪಠಿಸಿ ನಡೆಯೋ,
'ಓಂ ನಮಃ ಶಿವಾಯ' ಮಹಾಮಂತ್ರ ಜಪಿಸಿ
ಕೈವಲ್ಯದ ಹಾದಿ ಹಿಡಿಯೋ ! ॥ 3 ॥

ಶ್ರೀ ಸನ್ನಿಧಿಯಲ್ಲಿ ನಿತ್ಯ ನಿತ್ಯ ಬಾಗಿ
'ಮಂತ್ರಮಹರ್ಷಿ' ಸ್ಮರಿಸಿ ಸಾಗೋ
ಗುರುದೇವರ ನೆನೆದು ನಿನ್ನ ಕಾಯಕ ಎಸಗಿ
ಶರಣನಾಗಿ ಬದುಕ ಬೆಳಗೋ ! ॥ 4 ॥

# ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು: ವಿಶಾಲ ವಿದ್ಯಾವಟವೃಕ್ಷದ ರೂವಾರಿಗಳು

**ರಾಜ್ಯಪಾಲ ಶ್ರೀ ಥಾವರ್ ಚಂದ್ ಗೆಹ್ಲೋಟ್**
**ಅನು : ಡಾ. ಮೋಹನ್ ಸಿಂಗ್**

ಎಲ್ಲರಿಗೂ ನಮಸ್ಕಾರ. ಮೊದಲಿಗೆ ನಾನು ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ಹಾಗೂ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳವರಿಗೆ ಗೌರವಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ. ಶ್ರೀ ಸುತ್ತೂರು ಮಠದ 23ನೆಯ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿಯ ಸಂದರ್ಭದಲ್ಲಿ ನಾನು ಮಠದ ಎಲ್ಲಾ ಗುರುಗಳು, ಆಚಾರ್ಯರು, ವಿದ್ವಾಂಸರು ಹಾಗೂ ಮಠದ ಮಹಾನ್ ಪರಂಪರೆ ಹಾಗೂ ಕಾರ್ಯಗಳಿಗೆ ನಮಿಸುತ್ತೇನೆ. ಈ ಸಮಾರಂಭದಲ್ಲಿ ಉಪಸ್ಥಿತರಿರುವ ಕರ್ನಾಟಕ ಸರ್ಕಾರದ ಮಾನ್ಯ ಮಂತ್ರಿಗಳಾದ ಶ್ರೀ ಎಸ್.ಟಿ. ಸೋಮಶೇಖರ್‌ರವರೇ, ಮೈಸೂರಿನ ಮಾನ್ಯ ಮೇಯರ್‌ರವರಾದ ಶ್ರೀಮತಿ ಸುನಂದಾರವರೇ, ಮಾನ್ಯ ಭಕ್ತವೃಂದವರೇ, ತಮ್ಮೆಲ್ಲರಿಗೂ ಹಾರ್ದಿಕವಾಗಿ ವಂದಿಸುತ್ತೇನೆ. ಇಂದು ಸುತ್ತೂರು ಶ್ರೀಮಠದ 23ನೇ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವಕ್ಕೆ ಆಗಮಿಸಿ ತಮ್ಮ ಸಾನ್ನಿಧ್ಯದಲ್ಲಿ ಇರುವುದು ನನ್ನ ಸೌಭಾಗ್ಯ. ಇದಕ್ಕೆ ಮೊದಲು ನಾನು ಈ ಮಠಕ್ಕೆ ಪ್ರಧಾನಮಂತ್ರಿಗಳವರ ಜೊತೆಯಲ್ಲಿ ಒಂದು ಸಮಾರಂಭಕ್ಕೆ ಬಂದಿದ್ದೆ. ಅಂದಿನಿಂದಲೇ ನಾನು ಶ್ರೀಮಠದ ಕುರಿತು ಮಾಹಿತಿ ಪಡೆದು ಅತ್ಯಂತ ಸಂತಸಗೊಂಡಿದ್ದೇನೆ. ನಾನು ಇಂದು ತಮ್ಮೆಲ್ಲರ ನಡುವೆ ಬಂದು ಅತ್ಯಂತ ಸಂತೋಷಗೊಂಡಿದ್ದೇನೆ, ಧನ್ಯನಾಗಿದ್ದೇನೆ. ಅಧ್ಯಾತ್ಮಿಕತೆ, ಧರ್ಮಪರಾಯಣತೆ ಹಾಗೂ ಸಕಾರಾತ್ಮಕಶಕ್ತಿಯ ನೆಲೆಯಾದ ಶ್ರೀ ಸುತ್ತೂರು ಮಠ ದೇಶದ ಪ್ರಸಿದ್ಧ ಮಠಗಳಲ್ಲಿ ಒಂದಾಗಿದೆ. ಇದಕ್ಕೆ ಒಂದು ಸಾವಿರ ವರ್ಷಗಳಿಗೂ ಮಿಗಿಲಾದ ಇತಿಹಾಸವಿದೆ. ಶ್ರೀಮಠವು ಬಹು ಆಯಾಮದ ಸಂಸ್ಥಾನವಾಗಿರುವ ಕಾರಣ, ಸಾಮಾಜಿಕ ಪ್ರಗತಿಯಲ್ಲಿ ಈ ಮಠದ ಕೊಡುಗೆ ಮಹತ್ವಪೂರ್ಣವಾಗಿದೆ.

---

ದಿನಾಂಕ 18.8.2022 ರಂದು ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಮಾಡಿದ ಭಾಷಣ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಧರ್ಮ, ಸಂಸ್ಕೃತಿ ಹಾಗೂ ಅಧ್ಯಾತ್ಮದ ಸಂರಕ್ಷಕರಾಗಿದ್ದುದರ ಜೊತೆಗೆ ವಿಚಾರಶೀಲರು ಹಾಗೂ ಸಂವೇದನಾಶೀಲರಾಗಿದ್ದರು. ಸಮಾಜದಲ್ಲಿ ಅಸಮಾನತೆ, ಬಡತನ ಹಾಗೂ ನಿರಕ್ಷರತೆಯ ಸಮಸ್ಯೆಯನ್ನು ನಿವಾರಿಸಲು ಅನೇಕ ಸಕಾರಾತ್ಮಕ ಹೆಜ್ಜೆಗಳನ್ನಿರಿಸಿದ್ದರು. ಪ್ರಾರಂಭದಲ್ಲಿ ಮೈಸೂರಿನಲ್ಲಿ, ಅಗತ್ಯವಿರುವ ವಿದ್ಯಾರ್ಥಿಗಳಿಗಾಗಿ ತಮ್ಮ ನಿವಾಸದಲ್ಲಿಯೇ ಒಂದು ವಿದ್ಯಾರ್ಥಿನಿಲಯವನ್ನು (ನಿರಂಜನಾಲಯ) ಸ್ಥಾಪನೆ ಮಾಡಿದ್ದರು. ಈ ಕಾರ್ಯವು ಮುಂದುವರಿದು ಜೆಎಸ್‌ಎಸ್ ಮಹಾವಿದ್ಯಾಪೀಠದ ರೂಪದಲ್ಲಿ ಇಂದು ವಿಶಾಲ ವಟವೃಕ್ಷದ ರೂಪದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಾಮಾಜಿಕ, ಆರ್ಥಿಕ ಪರಿವರ್ತನೆಯನ್ನುಂಟುಮಾಡಿ, ಸಮಾಜ ಸ್ವಾವಲಂಬಿಯಾಗಲು, ಸಾಮುದಾಯಿಕ ಸಮಾನತೆ, ಸಮರಸವನ್ನು ಸ್ಥಾಪಿಸಲು; ಸಮೃದ್ಧಿ, ಉತ್ಕೃಷ್ಟತೆ, ಸಶಕ್ತೀಕರಣ, ಉದ್ಯಮಶೀಲತೆ ಹಾಗೂ ಎಲ್ಲರಿಗೂ ಮೌಲ್ಯಾಧಾರಿತ ಶಿಕ್ಷಣ ನೀಡುವ ಉದ್ದೇಶದಿಂದ ಜೆಎಸ್‌ಎಸ್ ಮಹಾವಿದ್ಯಾಪೀಠ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಯದಲ್ಲಿ ಅಕ್ಷರದಾಸೋಹಕ್ಕಾಗಿ ಶಾಲಾಕಾಲೇಜುಗಳನ್ನು, ಅನ್ನದಾಸೋಹಕ್ಕಾಗಿ ಬೋರ್ಡಿಂಗ್ ಹಾಗೂ ಆಶ್ರಯಕ್ಕಾಗಿ ವಿದ್ಯಾರ್ಥಿನಿಲಯಗಳನ್ನು ಹಾಗೂ ಆರೋಗ್ಯ ದಾಸೋಹಕ್ಕಾಗಿ ಅನೇಕ ಆಸ್ಪತ್ರೆಗಳನ್ನು ಸ್ಥಾಪಿಸಿದ್ದಾರೆ.

ಮೈಸೂರು ರಾಜ್ಯದಲ್ಲಿ ಅರಸರಾಗಿದ್ದ ಮಾನ್ಯ ಶ್ರೀ ಜಯಚಾಮರಾಜ ಒಡೆಯರ್‌ರವರು 1953ರಲ್ಲಿ ಪರಮಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ, ಸಮಾಜಕ್ಕೆ ಅವರು ನೀಡಿದ ಕೊಡುಗೆಗಾಗಿ, "ರಾಜಗುರುತಿಲಕ' ಎಂಬ ಬಿರುದನ್ನು ನೀಡಿ ಸನ್ಮಾನಿಸಿದ್ದರು. 1989ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಪೂಜ್ಯರಿಗೆ ಮರಣೋತ್ತರವಾಗಿ "ಗೌರವ ಡಾಕ್ಟರೇಟ್" ಪದವಿಯನ್ನು ನೀಡಿ ಗೌರವಿಸಿತ್ತು. ವಿದ್ಯಾರ್ಥಿಗಳ ಪ್ರಾಚೀನ ಜ್ಞಾನಪ್ರಸಾರದ ಕಾರ್ಯವಾಗಿರಲಿ ಅಥವಾ ಆಧುನಿಕ ತಂತ್ರಜ್ಞಾನದ ಶಿಕ್ಷಣದ ಪ್ರಸಾರದ ಕಾರ್ಯವಾಗಿರಲಿ, ಅದಕ್ಕಾಗಿ ಸುತ್ತೂರು ಮಠವು ದೇಶವಿದೇಶಗಳಲ್ಲಿ ಅನೇಕ ಸಂಸ್ಥೆಗಳನ್ನು ಮುನ್ನಡೆಸುತ್ತಿದೆ. ಶೈಕ್ಷಣಿಕ ಹಾಗೂ ಇನ್ನಿತರ ಸಂಸ್ಥೆಗಳ ಮೂಲಕ ಶ್ರೇಷ್ಠ ಕಾರ್ಯ ಮಾಡುತ್ತಿದೆ. ಅವಶ್ಯಕತೆ ಇರುವ ಹಾಗೂ ಬಡ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡುವುದರಲ್ಲಿ ಶ್ರೀಮಠವು ಸದಾ ಮುಂಚೂಣಿಯಲ್ಲಿದೆ. ಸಾವಿರಾರು ವಿದ್ಯಾರ್ಥಿಗಳಿಗಾಗಿ ಇಲ್ಲಿ ಉಚಿತ ಊಟ ಹಾಗೂ ವಸತಿಯ ವ್ಯವಸ್ಥೆ ಮಾಡಲಾಗುತ್ತಿದೆ ಹಾಗೂ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಪ್ರಸ್ತುತ 24ನೆಯ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ತಮ್ಮ ಗುರುಪರಂಪರೆಯ ದೂರದೃಷ್ಟಿ ಹಾಗೂ ಸದ್ಭಾವನೆ, ಮಠದ ಮಹಾನ್ ಪರಂಪರೆ ಹಾಗೂ ಕಾರ್ಯಗಳನ್ನು ಅಭಿವೃದ್ಧಿಪಡಿಸುತ್ತಾ ಶ್ರೀಮಠದ ಸೇವಾಭಾವನೆ ಹಾಗೂ ಖ್ಯಾತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಜಾಗತಿಕ ಆಯಾಮಗಳಲ್ಲಿ ಈ ಸಂಸ್ಥಾನವನ್ನು ಮುಂದುವರೆಸುತ್ತಿದ್ದಾರೆ.

ಸಾಧುಸಂತರು ಹಾಗೂ ಗುರುಗಳ ಜನ್ಮಸಮಾರಂಭಗಳನ್ನು ಆಚರಿಸುವುದು ನಮ್ಮ ಕರ್ತವ್ಯವಾಗಿದೆ. ಅದು ಈ ರಾಷ್ಟ್ರದ ಮಹಾನ್ ಸಂಸ್ಕೃತಿ ಹಾಗೂ ಸಾಮಾಜಿಕತೆಯ ಒಂದು ಅಭಿನ್ನ ಅಂಗವಾಗಿದೆ. ಸಾಧುಸಂತರು ನಮ್ಮ ದೇಶದ ಏಕತೆ, ಅಖಂಡತೆ ಮತ್ತು ಸನಾತನ ಧರ್ಮದ ಪರಂಪರೆಯನ್ನು ಸಮೃದ್ಧಗೊಳಿಸುವಲ್ಲಿ ಬಹಳ ಮಹತ್ತರ ಕೊಡುಗೆಯನ್ನು ನೀಡಿದ್ದಾರೆ. ತುಂಬ ಪ್ರಾಚೀನವಾದ ಭಾರತೀಯ ಸಂಸ್ಕೃತಿಯ ರಕ್ಷಣೆಯನ್ನು ಅನಾದಿಕಾಲದಿಂದ ನಮ್ಮ ಸಾಧುಸಂತರು ಮಾಡುತ್ತಾ ಬಂದಿದ್ದಾರೆ. ನಮ್ಮ ಸಂಸ್ಕೃತಿ ಸದಾ ವಿಶ್ವ ಸಹೋದರತ್ವ, ವಿಶ್ವಶಾಂತಿ, ಸಮಾನತೆ ಮತ್ತು ಸಮರಸದ ಭಾವನೆಗಳಿಗೆ ಪ್ರೇರಣೆ ನೀಡುತ್ತಿದೆ. ಸಾಧುಸಂತರು, ಆಚಾರ್ಯರು ಹಾಗೂ ವಿದ್ವಾಂಸರು ಧರ್ಮ, ಸಂಸ್ಕೃತಿ ಹಾಗೂ ಅಧ್ಯಾತ್ಮದ ಪತಾಕೆಯನ್ನು ವಿಶ್ವಮಟ್ಟದಲ್ಲಿ ಹಾರಿಸಿದ್ದಾರೆ. ಇಂದು ಪ್ರಪಂಚದ ಅನೇಕ ದೇಶಗಳು ಈ ವಿಷಯದಲ್ಲಿ ಭಾರತದ ಸಾರ್ವಭೌಮತೆಯನ್ನು ಸ್ವೀಕರಿಸಲು ಬದ್ಧವಾಗಿವೆ.

ಇಂದು ವಿಶ್ವದ ಅನೇಕ ದೇಶಗಳು ಆಧ್ಯಾತ್ಮಿಕ ಹಾಗೂ ಮಾನಸಿಕ ಪ್ರಗತಿಗಾಗಿ ಭಾರತದೆಡೆಗೆ ನೋಡುತ್ತಿವೆ. ಅವರ ನಿರೀಕ್ಷೆಯಂತೆ ಭಾರತದ ಋಷಿಮುನಿಗಳಿಂದ, ಸಾಧುಸಂತರಿಂದ ಪ್ರಣೀತವಾದ ವಿಶ್ವಕಲ್ಯಾಣ ಹಾಗೂ ವಸುಧೈವ ಕುಟುಂಬಕಮ್‌ನ ಭಾವನೆಯನ್ನು ಪೂರ್ಣಗೊಳಿಸುವ ಜವಾಬ್ದಾರಿ ಭಾರತೀಯರ ಮೇಲಿದೆ. ಇಂದು ರಾಜೇಂದ್ರ ಶ್ರೀಗಳ 107ನೇ ಜನ್ಮದಿನದಂದು ನಾನು ಇಂತಹ ಮಹಾಪುರುಷರ, ಮಹಾಋಷಿಗಳ ಚರಣಗಳಲ್ಲಿ ಮತ್ತೊಮ್ಮೆ ನಮಿಸುತ್ತಾ ಶ್ರದ್ಧೆ, ಗೌರವಗಳನ್ನು ಸಮರ್ಪಿಸುತ್ತೇನೆ. ನಾವೆಲ್ಲರೂ ಅವರು ತೋರಿದ ಮಾರ್ಗದಲ್ಲಿ ನಡೆಯುತ್ತಾ ದೇಶದ ಹೆಸರಿಗೆ ಪ್ರಪಂಚದಲ್ಲಿ ಗೌರವ ತರುವಂಥ ಕಾರ್ಯವನ್ನು ಮಾಡಬೇಕಾಗಿದೆ. ಅವರ ಆದರ್ಶಗಳನ್ನು ಅನುಸರಿಸುತ್ತಾ, ಅವರ ಕನಸುಗಳನ್ನು ಸಾಕಾರಗೊಳಿಸುವ ಆಶಯವನ್ನು ವ್ಯಕ್ತಪಡಿಸುತ್ತೇನೆ. "ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ" ಎಂಬ ಪ್ರಾರ್ಥನೆಯೊಂದಿಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಹಾಗೂ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿಯವರ ಆಶೀರ್ವಾದವನ್ನು ಬಯಸುತ್ತೇನೆ. ನಾನು ತುಮಕೂರಿನ ಸಿದ್ದಗಂಗಾ ಆಶ್ರಮಕ್ಕೂ ಹೋಗಿದ್ದೆ. ಅಲ್ಲಿಗೆ ಹೋಗಿ ನಾನು ಬಹಳ ಧನ್ಯತಾಭಾವವನ್ನು ಅನುಭವಿಸಿದೆ. ಅಲ್ಲಿ ಹತ್ತು ಸಾವಿರಕ್ಕೂ ಹೆಚ್ಚಿನ ಮಕ್ಕಳಿಗೆ ಊಟ, ವಸತಿ, ಶಿಕ್ಷಣವನ್ನು ನಿಷ್ಕಲ್ಮಷವಾಗಿ ನೀಡಲಾಗುತ್ತಿದೆ ಎಂದು ತಿಳಿದು ಬಹಳ ಸಂತೋಷ, ಆಶ್ಚರ್ಯ ಉಂಟಾಯಿತು. ಜೊತೆಗೆ ಅಲ್ಲಿ ಸಾಮೂಹಿಕ ವಿವಾಹದ ಸೌಲಭ್ಯವನ್ನೂ ನೀಡಲಾಗುತ್ತಿದೆ. ನಾನು ಅಲ್ಲಿಗೆ ಹೋಗಿ ಆಶ್ಚರ್ಯಚಕಿತನಾಗಿದ್ದೆ. ಈ ಮಠಕ್ಕೆ ಬಂದು ಇಲ್ಲಿಯೂ ಸಹ ಧನ್ಯನಾಗಿದ್ದೇನೆ, ಆಶ್ಚರ್ಯಚಕಿತನಾಗಿದ್ದೇನೆ. ನನಗೆ ಮಹಾಸ್ವಾಮೀಜಿಯವರು ಆದೇಶ ನೀಡುವ ಹಾಗೂ ನಿರ್ದೇಶನಗಳನ್ನು ಪಾಲನೆ ಮಾಡುವ ಭರವಸೆ ನೀಡುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಜೈ ಹಿಂದ್.

□

# ಸಂತನ ಒಳಗ ಕಾಣಬೇಕು

**ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು**
ಶ್ರೀ ಜ್ಞಾನಯೋಗಾಶ್ರಮ, ವಿಜಯಪುರ

**ಈ** ನಾಡಿನ ಲಕ್ಷಾಂತರ ಜನತೆ ಶ್ರದ್ಧೆಯಿಂದ ನೆನೆವಂತ ದಿನ ಇದು. ಶ್ರೇಷ್ಠ ಜ್ಞಾನಿಗಳನ್ನು ನಾವು ಹೊರಗಿನಿಂದ ನೋಡುವುದಕ್ಕೆ ಆಗುತ್ತದೆ. ಒಳಗಿನಿಂದಲೂ ನೋಡುವುದಕ್ಕೆ ಆಗುತ್ತದೆ. ಹೊರಗಿನ ಸಂಗತಿಗಳು ಬಹುಶಃ ಎಲ್ಲರ ಕಣ್ಣಿಗೂ ಕಾಣುತ್ತದೆ. ಆದರೆ ಸಂತರ ಅಂತರಂಗ ಕಾಣುವುದು ಬಹಳ ಕಠಿಣವಾದ ಕಾರ್ಯ. ಒಬ್ಬ ಶ್ರೀಮಂತನನ್ನು ಗುರುತಿಸುವುದು ಬಹಳ ಸುಲಭ. ಆತನ ಸಮೀಪ ಹಣ ಎಷ್ಟಿದೆ ಎನ್ನುವುದನ್ನು ನೋಡಿ ಈತ ಲಕ್ಷಾಧೀಶ, ಕೋಟ್ಯಾಧೀಶ ಎಂದು ಹೇಳುವುದು ಬಹಳ ಸುಲಭ. ಯಾಕೆಂದರೆ ಶ್ರೀಮಂತನ ಹಣ ಎಲ್ಲ ಹೊರಗೆ ಇರುತ್ತದೆ, ಒಳಗೆ ಇರುವುದಿಲ್ಲ. ಆ ಹೊರಗಿನ ಧನ ತೆಗೆದು ಹಾಕಿಬಿಟ್ಟರೆ ಆತ ಬಡವಾಗಿ ಬಿಡುತ್ತಾನೆ. ಹಾಗೆ ಇನ್ನೂ ಅನೇಕ ಸಂಗತಿಗಳು ನಮಗೆ ಗೊತ್ತಿದೆ. ಎಲ್ಲ ಹೊರಗಿರುತ್ತವೆ. ಆದರೆ ಒಳಗಿನ ಸಂಗತಿಗಳನ್ನು ನೋಡಿ ಈ ಮನುಷ್ಯ ಇಂತಹವನೆಂದು ಹೇಳಲು ಆಗುವುದಿಲ್ಲ. ಆದರೆ ಒಬ್ಬ ಮಹಾನುಭಾವ ಇದ್ದಾನೆ, ಆಗ ಹೊರಗೆಲ್ಲ ನೋಡಲಿಕ್ಕೆ ಆತನ ಮಾತಿನಲ್ಲಿ ರಸಭಾವ ಇರಬಹುದು, ಇರಲಿಕ್ಕಿಲ್ಲ, ಆತನ ಸಂಪತ್ತು ಇರಬಹುದು, ಇರಲಿಕ್ಕಿಲ್ಲ.

ಆದರೆ ಸಂತರಾಗಬೇಕಾದರೆ ಇವುಗಳ ಅವಶ್ಯಕತೆನೇ ಇರುವುದಿಲ್ಲ. ಸಂತರಾಗಬೇಕು ಅಂದರೆ ಇಷ್ಟು ಗಳಿಸಬೇಕು ಅಂತ ಇಲ್ಲ. ಶ್ರೀಮಂತರಾಗಬೇಕು ಅಂದರೆ ಇಷ್ಟು ಗಳಿಸಬೇಕು ಎಂಬ ನಿಶ್ಚಿತತೆ ಇದೆ. ಸಂತನಿಗೆ ಇದು ಅವಶ್ಯಕ, ಇದು ಅನಾವಶ್ಯಕ ಎಂಬ ವಿಚಾರವಿಲ್ಲ. ಅಂದರೆ ಒಬ್ಬ ಸಂತನಾಗಬೇಕಾದರೆ ಇಷ್ಟು ಗಳಿಸಬೇಕು ಅಂತ ಇಲ್ಲ. ಇಷ್ಟು ಕಲಿಯಬೇಕು ಅಂತಲೂ ಇಲ್ಲ. ಯಾಕೆಂದರೆ ಸಂತತನ ಬರುವುದು ಅವು ಬೇರೆ ಕಾರಣಕ್ಕಾಗಿಯೇ ವಿನಃ ಬಾಹ್ಯ ಕಾರಣಕ್ಕಾಗಿ ಅಲ್ಲ. ಈಗ ಶ್ರೇಷ್ಠರಾದಂತಹ ರಾಜೇಂದ್ರ ಜಗದ್ಗುರುಗಳನ್ನು ನಾವು ಎರಡೂ ರೀತಿಯಲ್ಲಿ ನೋಡುವುದರಲ್ಲಿ ಇದ್ದೀವಿ. ಹೊರಗೆ ಲಕ್ಷಾಂತರ ಜನ ವಿದ್ಯಾರ್ಥಿಗಳಿಗೆ ಆಶ್ರಯ ಕೊಟ್ಟು ನೂರಾರು ಸಂಘ ಸಂಸ್ಥೆಗಳನ್ನು ಮಾಡಿದರು, ದೀನದಲಿತರ ಕಣ್ಣೀರನ್ನು ಅವರು ಒರೆಸಿದರು. ಇದು ಬಾಹ್ಯ ಸಂಗತಿ. ಬರೇ ಇಷ್ಟರಿಂದಲೇ ಆ ಜಗದ್ಗುರುಗಳ ಹಿರಿಮೆ ಗರಿಮೆಯನ್ನು ಕಾಣುವುದು ಬಹಳ ಕಷ್ಟ. ಯಾಕೆಂದರೆ ಅವರ ದೊಡ್ಡತನ

ಇರುವುದು ಅಂತರಂಗದಲ್ಲಿ ವಿನಃ ಬಹಿರಂಗದಲ್ಲಿ ಅಲ್ಲ. ಹೊರಗೆ ಏನು ಕಾಣಿಸುತ್ತದೆಯೋ ಅದು ಬರೀ ಅಂತರಂಗದ ಸಾಧನೆಯ ಪರಿಣಾಮವೇ ವಿನಃ ಅಂತರಂಗವನ್ನು ತಿಳಿಸುವ ಅವಶ್ಯವಾದ ಸಂಗತಿ ಅಲ್ಲ.

ಪುಷ್ಪ ತನ್ನಷ್ಟಕ್ಕೆ ತಾನೇ ಅರಳುತ್ತದೋ ಹಾಗೆ ಅದರ ಸುವಾಸನೆ ಹರಡುತ್ತದೆ. ಪುಷ್ಪ ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಪುಷ್ಪ ಸುಮ್ಮನೆ ಅರಳುತ್ತದೆ. ಆದರೆ ಸುವಾಸನೆ ಸುತ್ತಮುತ್ತಲೆಲ್ಲ ಹರಡುತ್ತದೆ. ಹೀಗಿರುವ ಒಬ್ಬ ಸಂತ ಸಂತನಾಗಿ ಬಿಡುತ್ತಾನೆ. ಆತನ ಹೃದಯ ಅರಳುತ್ತದೆ. ಹೃದಯದಿಂದ ಒಂದು ಇಚ್ಛಾಶಕ್ತಿ ಸಾಮರ್ಥ್ಯ ಹೊರಹೊಮ್ಮುತ್ತದೆ, ಅದು ಅನೇಕ ಕಾರ್ಯಗಳಿಗೆ ಬೋಧನೆ ನೀಡಿ, ಇಂಥ ಸಾವಿರ ಸಾವಿರ ಕಾರ್ಯಗಳು ತಮ್ಮಷ್ಟಕ್ಕೆ ತಾವೇ ಸಾಗಿ ಹೋಗುತ್ತವೆ. ಅವರು ಮಾಡಬೇಕು ಅಂತ ಇಲ್ಲ, ಮಾಡಬಾರದು ಅಂತಲೂ ಇಲ್ಲ. ನಮಗೆ ಹಾಗಲ್ಲ. ಒಂದು ಕಾರ್ಯ ಮಾಡಬೇಕು ಅಂತ ಹೋಗುತ್ತೀವಿ ಅಥವಾ ಮಾಡಬಾರದು ಅಂತಲೇ ನಿರ್ಧರಿಸುತ್ತೀವಿ. ನಮ್ಮ ರೀತಿಯೇ ಬೇರೆ, ಸಂತರ ರೀತಿ ಬೇರೆ. ಸಂತರು ತಮ್ಮಷ್ಟಕ್ಕೆ ತಾವು ಸಾಧನೆ ಮಾಡುತ್ತಾರೆ. ಈ ಜಗತ್ತಿನೊಳಗೆ ಅವರ ಕಾರ್ಯಗಳು ಅರಳುತ್ತವೆ. ಆದ್ದರಿಂದ ಅಂತಹ ಕಾರ್ಯಗಳನ್ನು ಬರೇ ಜನ ಮೆಚ್ಚುವುದಷ್ಟೆ ಅಲ್ಲ, ಸಾಕ್ಷಾತ್ ಭಗವಂತ ಕೂಡ ಮೆಚ್ಚಬೇಕಾಗುತ್ತದೆ. ನಮಗೆ ಸಂತರ ಬದುಕಿನ ರೀತಿ ಆಶ್ಚರ್ಯವನ್ನುಂಟುಮಾಡುತ್ತದೆ. ಅವರು ಗಳಿಸಿಕೊಳ್ಳುವ ವಸ್ತು ಯಾವುದೆಂದರೆ ಅದು ನಮ್ಮ ಕೈಗೆ ಸಿಕ್ಕುವಂತಹ ವಸ್ತುವಲ್ಲ. ಅದು ನಮ್ಮ ಕಣ್ಣಿಗೆ ಕಾಣುವ ವಸ್ತುವೂ ಅಲ್ಲ. ಅವರಿಗೆ ಸಿಗುವಂತಹ ವಸ್ತು ನಮ್ಮ ಕಣ್ಣಿಗೆ ಕಾಣುವುದೂ ಇಲ್ಲ. ಅದು ಎಂತಹ ವಸ್ತುವೆಂದು ನಮಗೆ ಗೊತ್ತಾಗುವುದೂ ಇಲ್ಲ. ಅವರು ಗಳಿಸುವ ವಸ್ತು ಒಂದೊಮ್ಮೆ ನಮಗೆ ದೊರಕಿ ಬಿಟ್ಟರೆ, ನಮ್ಮ ಮಾತು ಮೌನವಾಗುತ್ತದೆ. ಕಣ್ಣಿನಲ್ಲಿ ಆಸೆಗಳು ಮೂಡುವುದಿಲ್ಲ. ಜಗತ್ತಿನ ವೈಭವಗಳಿಗೆ ಮನಸ್ಸು ತೆರೆದುಕೊಳ್ಳುವುದಿಲ್ಲ. ಅಂತರಂಗದೊಳಗೆ ಇಂತಹ ಅದ್ಭುತ ವಸ್ತುವನ್ನು ಸಂತ ಗಳಿಸುತ್ತಿರುತ್ತಾನೆ. ಬಸವಣ್ಣ, ಅಲ್ಲಮ ಇವರೆಲ್ಲಾ ಅಂತಹ ಸಂತರು. ಬಸವಣ್ಣ ಹೊರಗೆ ಭಂಡಾರಿ, ಅಲ್ಲಮ ಸಾಮಾನ್ಯ ಜಂಗಮ. ಅದೇ ಅಂತರಂಗದೊಳಗೆ ಬಸವಣ್ಣನಿಗೆ ಅಲ್ಲಮ ಗುರು. ಅಲ್ಲಮನಿಗೆ ಬಸವಣ್ಣ ಗುರು. ಅಲ್ಲಮ-ಬಸವನಿಗೆ ಶರಣು ಎಂದರೆ ಬಸವಣ್ಣ ಅಲ್ಲಮನಿಗೆ 'ಶರಣು ಶರಣಾರ್ಥಿ' ಎನ್ನುತ್ತಾನೆ. ಹೊರಗಿನದನ್ನು ನೋಡದೇ ಶುದ್ಧವಾದ ಅಂತರಂಗವನ್ನು ಕಂಡವರಿಗೆ ಮಾತ್ರ ಭವ್ಯವಾದ ರೂಪು ಗೋಚರಿಸುತ್ತದೆ. ಅದಕ್ಕೇ ಅವರು ಪರಸ್ಪರ ವಂದಿಸಿದರು. ನಾವು ಜಗದ್ಗುರುಗಳನ್ನೂ ಹಾಗೆಯೇ ನೋಡಬೇಕು. ಆಗ ನಮಗೆ ಅವರ ನೈಜವಾದದ್ದರ ಹಿರಿಮೆ ತಿಳಿಯುತ್ತದೆ. ಆದರೆ ನಾವು ಹೊರಗಿನದನ್ನು ಮಾತ್ರ ನೋಡುತ್ತೇವೆ. ನಮಗೆ ಅವರಿಂದ ಸಹಾಯ ಸಿಕ್ಕಿತು ಎಂದರೆ ಕೊಂಡಾಡುತ್ತೇವೆ. ಸಹಾಯ ಸಿಕ್ಕಿಲ್ಲವೆಂದರೆ ಕೊಂಡಾಡುವುದಿಲ್ಲ. ಇದು ಜಗತ್ತಿನಲ್ಲಿ ಸಹಜವಾಗಿ ನಡೆಯುವ ಕ್ರಿಯೆ.

ಜಗತ್ತು ಒಮ್ಮೆ ಕೊಂಡಾಡುತ್ತದೆ. ಜನ ಹೊಗಳಲಿ ಒಂದು ಜನಾಂಗವೇ ಹೊಗಳಲಿ ಸಂತರು ತಲೆಕೆಡಿಸಿಕೊಳ್ಳುವುದಿಲ್ಲ. ಉದಾಹರಣೆಗೆ ಸಾಕ್ರಟೀಸನನ್ನು ಇಡೀ ಗ್ರೀಕ್ ದೇಶ ಕೊಂಡಾಡಿತು. ಆದರೆ ಅದೇ ದೇಶ ಅವನಿಗೆ ವಿಷಪ್ರಾಶನವನ್ನೂ ಮಾಡಿತು. ಆದ್ದರಿಂದ ಈ ಜನ, ಈ ಜಗತ್ತು ಯಾವಾಗ ಏನು ಮಾಡುತ್ತದೆ ಎಂದು ತಿಳಿಯುವುದಿಲ್ಲ. ಇಂತಹ ಜಗತ್ತಿನಲ್ಲಿ ಸಂತರು ಹೇಗೆ ಬದುಕುತ್ತಾರೆ? ಅವರಿಗೆ ಮಾನ ಬಂದರೂ ಅಷ್ಟೆ, ಅಪಮಾನ ಬಂದರೂ ಅಷ್ಟೆ. ನಿರ್ಲಿಪ್ತವಾಗಿ ಬದುಕುತ್ತಾರೆ.

ಜಗದ್ಗುರುಗಳು ಜನ ಮುಂದೆ ಹೊಗಳುತ್ತಾರೆ ಎಂಬುದನ್ನು ತಲೆಗೆ ಹಚ್ಚಿಕೊಳ್ಳುವುದಿಲ್ಲ. ಬೈದರೂ ಅದನ್ನು ತಲೆಗೆ ಹಾಕಿಕೊಳ್ಳುವುದಿಲ್ಲ. ಸಿರಿಸಂಪತ್ತು ತಮ್ಮ ಬಳಿಗೆ ಹರಿದು ಬಂದರೂ ಇಲ್ಲ ತಮ್ಮ ಕೈಬಿಟ್ಟು ಹೋದರೂ ತಾವು ನಿಂತ ಸ್ಥಾನದಿಂದ ಅವರು ಸ್ವಲ್ಪವೂ ಕದಲುವುದಿಲ್ಲ. ಅದೇ ಅವರ ನಿರ್ಧಾರ, ಮಾನಸಿಕವಾಗಿ ದೃಢರಾಗಿರುತ್ತಾರೆ. ಮರಣ ಇಂದು ಬರಲಿ, ಯುಗಾಂತರಕ್ಕೆ ಬರಲಿ ಅದಕ್ಕೆ ಹೆದರದಂತಹ ಅದ್ಭುತವಾದ ಶಕ್ತಿ-ಸಾಮರ್ಥ್ಯವನ್ನು ಅಂತರಂಗದಲ್ಲಿ ಹೊಂದಿರುತ್ತಾರೆ. ಇಂತಹ ಧ್ಯಾನಿಗಳಾದ ರಾಜೇಂದ್ರ ಶ್ರೀಗಳನ್ನು (ಜ್ಞಾನಿ) ಲಕ್ಷ ಲಕ್ಷ ಜನ ನಾವು ಇಂದು ನೆನೆಸಿಕೊಳ್ಳುತ್ತಲಿದ್ದೀವಿ. ಯಾಕೆ ನೆನೆಸಿಕೊಳ್ಳುತ್ತೀವಿ ಅಂದರೆ ಅವರು ನಮಗೆ ಸಹಾಯ ಮಾಡಿದರು ಅಂತ ಅಲ್ಲ. ಪರಮ ಧ್ಯಾನಿ/ಜ್ಞಾನಿಗಳ ಸಾನ್ನಿಧ್ಯದಲ್ಲಿ ನಾವು ಹೀಗೆಲ್ಲಾ ಬದುಕುದ್ದೀವಿ ಎಂದು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀವಿ. ಈ ಜ್ಞಾನಿಗಳು ಏನು ಮಾಡಿದರು? ಏನು ಹೇಳಿದರು? ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಜಗದ್ಗುರುಗಳು, ಸಂನ್ಯಾಸಿಗಳು, ಗುರುಗಳು ಏನು ಮಾಡಿದ್ದಾರೆ? ನಾವು ಏನು ಮಾಡಿದ್ದೀವಿ. ಅವರು ಹ್ಯಾಗೆ ಇದ್ದಾರೆ? ನಾವ್ಯಾಕೆ ಹೀಗೆ ಇದ್ದೀವಿ? ಇವುಗಳಿಗೆ ಕಾರಣವಿದೆ. ಅದೇನೆಂದರೆ ಅವರಿಗೆ ಜಗತ್ತಿನ ಒಂದು ದೊಡ್ಡ ವಸ್ತು ಗೊತ್ತಾಗಿದೆ. ಅಂದರೆ ಜಗತ್ತಿನಲ್ಲಿ ಯಾವುದು ಸತ್ಯವೋ ಅದು ನಿಜವಾಗಿ ಅವರಿಗೆ ಗೊತ್ತಾಗಿದೆ. ಅದೇ ನಮಗೆ ಯಾವುದು ನಿಜವಾಗಿ ಸತ್ಯವಲ್ಲ, ಅದು ನಿಜವಾಗಿ ಸತ್ಯವೆಂದು ತಿಳಿದುಬಂದಿದೆ. ಇದೇ ಅವರಿಗೂ ನಮಗೂ ಇರುವ ಅಂತರ. ಸಾಕ್ರಟೀಸ್ ಮತ್ತು ಅವನ ಗೆಳೆಯ ಒಂದು ಮರದ ಕೆಳಗೆ ಕುಳಿತು ಒಮ್ಮೆ ಮಾತನಾಡುತ್ತಿದ್ದರು. ಮಧ್ಯಾಹ್ನದ ಬಿಸಿಲು ಏರುತ್ತಿದ್ದಂತೆಯೇ ಮರದ ತಂಗಾಳಿ ಹಿತವೆನಿಸಿ ಇಬ್ಬರಿಗೂ ಮಂಪರು ಹತ್ತಿ, ನಿದ್ದೆಗೆ ಜಾರಿದರು. ಸಾಕ್ರಟೀಸ್‌ನ ಗೆಳೆಯ ಬಹಳ ಜಾಣ. ಅರ್ಧ ತಾಸಿನ ಬಳಿಕ ಸಾಕ್ರಟೀಸನನ್ನು ಎಬ್ಬಿಸಿ ಒಂದು ಪ್ರಶ್ನೆಯನ್ನು ಕೇಳಿದ. ಹೇಳು ಸಾಕ್ರಟೀಸ್, ನೀನು ನಿಜವಾಗಿಯೂ ಮನುಷ್ಯನೊ ಅಥವಾ ಮಂಗನೊ ಎಂದು ಕೇಳಿದ. ಸಾಕ್ರಟೀಸನಿಗೆ ಆಶ್ಚರ್ಯವಾಯಿತು. ಆತ ಒಂದು ಗಳಿಗೆ ವಿಚಾರ ಮಾಡಿದ. ಬಹುಶಃ ಗೆಳೆಯನಿಗೆ ಕನಸು ಬಿದ್ದಿರಬೇಕು. ಕನಸಿನಲ್ಲಿ ನಾನು ಮಂಗನಂತೆ ಮರದ ಮೇಲೆ ಕೂತಂತೆ ಕಂಡಿರಬೇಕು. ಅದಕ್ಕೆ ಅವನು ನನ್ನನ್ನು ಈ ಪ್ರಶ್ನೆ ಕೇಳುತ್ತಿದ್ದಾನೆ ಎಂದುಕೊಂಡ. ಅದೇ

ನಾವು ಅವನ ಜಾಗದಲ್ಲಿದ್ದರೆ ಸತ್ಯವನ್ನು ವಿಚಾರ ಮಾಡದೆ ಜಗಳ ತೆಗೆದುಬಿಡುತ್ತಿದ್ದೆವು. ನಮಗೆ ಗೊತ್ತಿರುವುದು ಅದು ಮಾತ್ರ. ಸತ್ಯವನ್ನರಿತ ಸಾಕ್ರಟೀಸ್ ಗೆಳೆಯನಿಗೆ ಬಹಳ ಸುಂದರವಾದ ಉತ್ತರವನ್ನು ಕೊಟ್ಟ. ಗೆಳೆಯ ನೀನು ಮಲಗಿದ್ದಾಗ ನಾನು ಮನುಷ್ಯ ಅಲ್ಲ, ನೀನು ಎದ್ದಾಗ ನಾನು ಮಂಗ ಅಲ್ಲ. ನಾನು ಮಂಗನೊ ಮನುಷ್ಯನೊ ಎನ್ನುವುದು ನೀನು ಮಲಗುವುದು ಮತ್ತು ಏಳುವುದನ್ನು ಅವಲಂಬಿಸಿದೆ. ಆದರೆ ನಾನು ಬೇರೆಯೆ ಇದ್ದೀನಿ. ನಿನ್ನ ಸಾಕ್ರಟೀಸ್ ನಾನು ಅಲ್ಲ. ಮಂಗ ಎಂದು ನೀನು ಹೇಳುವಾಗಲೂ ನಾನು ಇದ್ದೀನಿ. ಮನುಷ್ಯ ಎಂದು ಹೇಳುವಾಗಲೂ ನಾನು ಇದ್ದೀನಿ. ಅಷ್ಟೇ ಅಲ್ಲ, ಮಂಗ ಅಲ್ಲಿದ್ದಾಗಲೂ ನಾನು ಇದ್ದೀನಿ, ಮನುಷ್ಯ ಅಲ್ಲಿದ್ದಾಗಲೂ ನಾನು ಇದ್ದೀನಿ. ಅಂದ ಬಳಿಕ ನಾನು ನಾನೇ ಎಂಬುದು ಮಾತ್ರ ಸತ್ಯ. ಮನುಷ್ಯ ಎಂದು ನೋಡುವುದೂ ಸುಳ್ಳು, ಮಂಗ ಎಂದು ನೋಡುವುದೂ ಸುಳ್ಳು. ಇದು ಶಾಶ್ವತವಾದ ಸುಳ್ಳು. ಇದು ಸಾಪೇಕ್ಷಿತ ಸತ್ಯ. ನಿನ್ನ ದೃಷ್ಟಿಯಿಂದ ಸತ್ಯ. ಆದರೆ ನೈಜವಾದ ನನ್ನ ದೃಷ್ಟಿಯಿಂದ ಮಂಗನೂ ಅಲ್ಲ, ಮನುಷ್ಯನೂ ಅಲ್ಲ ಎಂದು ತಿಳಿದುಕೊಂಡಂತಹ ಸಾಕ್ರಟೀಸನ ಸ್ಥಿತಿ ಯಾವುದೋ ಹಾಗೆ ಎಲ್ಲಾ ಸಂನ್ಯಾಸಿಗಳ ಸ್ಥಿತಿ ಅದು. ನೀವೆಲ್ಲ ಈ ಗುರುಗಳನ್ನು ಕರೆತಂದು ಇಲ್ಲಿ ಕೂರಿಸಿದ್ದರಿಂದ ಅವರೆಲ್ಲ ಇಲ್ಲಿ ಕೂತಿದ್ದಾರೆ. ನೀವುಗಳು ಅವರನ್ನು ಇಲ್ಲಿಂದ ಹೊರಟುಹೋಗಿ ಎಂದರೆ ಅಷ್ಟೇ ನಿರ್ಲಿಪ್ತವಾಗಿ ಎದ್ದು ಹೊರಟುಹೋಗುತ್ತಾರೆ. ಏಕೆಂದರೆ ಅವರಿಗೆ ಸತ್ಯ ಗೊತ್ತಿದೆ ಕುರ್ಚಿ ಸ್ಥಿರವಲ್ಲ ಎಂದು. ಅದೇ ನಮಗೆ ಈ ಸತ್ಯ ತಿಳಿದಿಲ್ಲ. ಇದನ್ನೇ ಖರೇ ಎಂದು ತಿಳಿದುಕೊಳ್ಳುತ್ತೇವೆ. ಕನಸಿನಲ್ಲಿ ಕಂಡದ್ದೂ ಖರೆಯೇ, ನನಸಿನಲ್ಲಿ ಕಂಡದ್ದೂ ನಮಗೆ ಖರೆಯೇ. ಹೀಗೆ ತಿಳಿದುಕೊಂಡ ನಮಗೆ ಅವರ ಸ್ಥಿತಿ ಅರ್ಥವಾಗುವುದು ಹೇಗೆ ಸಾಧ್ಯ?

ಅದಕ್ಕೇ ರಾಜೇಂದ್ರ ಶ್ರೀಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಬರೀ ಇವರಷ್ಟೇ ಅಲ್ಲ ಜಗತ್ತಿನ ಸಂತನನ್ನು ಮಹಂತನನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಮ್ಮ ನಮ್ಮ ದೃಷ್ಟಿಯಲ್ಲಿ ಅವರನ್ನು ಅರ್ಥ ಮಾಡಿಕೊಳ್ಳುವ ಹಾಗಿಲ್ಲ. ಯಾರು ಏನಾಗಿದ್ದಾರೆ ಎಂಬ ಅರಿವು ನಮಗಿರಬೇಕಾಗುತ್ತದೆ. ಅಂದರೆ ಅವರ ಅಂತರಂಗದೊಳಗೆ ಅವರ ಅಸ್ತಿತ್ವದೊಳಗೆ ಮುಳುಗಿ ಏಳಬೇಕಾಗುತ್ತದೆ. ಆಗ ಅವರು ಮನುಷ್ಯರಾಗಿ ಏನಾಗಿದ್ದಾರೆ ಎಂದು ತಿಳಿದುಬರುತ್ತದೆ. ಆದರೆ ನಾವು ಇದನ್ನು ಮಾಡದೆ ಮ್ಯಾಲೆ ಮಾತ್ರ ನೋಡುತ್ತೀವಿ. ಮ್ಯಾಲೆ ಹರಿದ ಬಟ್ಟೆ ಇದ್ದರೆ ಬಡವ ಎಂದುಕೋತೀವಿ, ಚಲೋ ಬಟ್ಟೆ ತೊಟ್ಟಿದ್ದರೆ ಶ್ರೀಮಂತ ಅನ್ಕೋತ್ತೀವಿ. ಆದರೆ ಅವ ಏನಿದ್ದಾನೆ ಎಂಬುದನ್ನು ನಾವು ಗುರುತು ಹಚ್ಚುವುದಿಲ್ಲ. ಅದು ನಮಗೆ ಗೊತ್ತೇ ಇಲ್ಲ.

ಹೀಗೆ ಒಮ್ಮೆ ಒಬ್ಬ ಮನುಷ್ಯ ಒಂದು ಸೇತುವೆ ಮೇಲೆ ನಡೆದು ಹೋಗುತ್ತಿದ್ದ. ಕೆಳಗೆ ಪವಿತ್ರವಾದ ಕಾವೇರಿ ನದಿ ಹರಿಯುತ್ತಿತ್ತು. ಮನುಷ್ಯನಿಗೆ 80 ವರ್ಷ ವಯಸ್ಸು. ಅವನಿಗೆ ಇದ್ದಕ್ಕಿದ್ದಂತೆ ನದಿಗೆ 10 ಪೈಸೆಯನ್ನು ಎಸೆಯಬೇಕು ಅನಿಸ್ತು. ಜೇಬಿನಲ್ಲಿ ತಡಕಾಡಿದ

10 ಪೈಸೆ ಇರಲಿಲ್ಲ. 1 ರೂಪಾಯಿ ನಾಣ್ಯವಿತ್ತು. ಗಡಿಬಿಡಿಯಲ್ಲಿ 1 ರೂಪಾಯಿ ನಾಣ್ಯವನ್ನೇ ಎಸೆದುಬಿಟ್ಟ. ಆದರೆ ತಕ್ಷಣಕ್ಕೆ ಅವನಿಗೆ ಗಾಬರಿಯಾಯಿತು. 10 ಪೈಸೆ ಎಸೆಯೋ ಬದಲು 90 ಪೈಸೆ ಹೆಚ್ಚು ಬೀಳಿಸಿಬಿಟ್ಟೆನಲ್ಲ ಎಂದು ಆಘಾತವಾಯಿತು. ಯಾವ ಕಾವೇರಿ ನೀರಿನಿಂದಲೇ ಇವನು ಲಕ್ಷಾಧೀಶನಾಗಿದ್ದನೋ, ಆ ಕಾವೇರಿ ನದಿಗೆ 90 ಪೈಸೆ ಹೆಚ್ಚು ಬೀಳಿಸಿದ್ದಕ್ಕೆ ಬಹಳ ಮರುಗಲು ಹತ್ತಿದ. ಆಮೇಲೆ ಅದನ್ನು ವಿಚಾರ ಮಾಡಿದ. ಇದು ಮಳೆಗಾಲದ ಹೊಳೆ ಅಲ್ಲ. ಜನವರಿ-ಫೆಬ್ರವರಿ ಹೊಳೆ, ನೀರು ಕಡಿಮೆ ಇದೆ. ಸ್ವಚ್ಛವೂ ಇದೆ. 90 ಪೈಸೆ ಕಳೆದುಕೊಳ್ಳಬಾರದು ಎಂದು ನಿಶ್ಚಯಿಸಿ, ಸಾಧ್ಯವಾದರೆ ನೀರಿನಲ್ಲಿ ಮುಳುಗಿ ಅದನ್ನು ತೆಗೆಯಬೇಕು ಎಂದುಕೊಂಡ. 80 ವರ್ಷದ ಮುದುಕ, ಆಯುಷ್ಯದ ಪರಿವೆಯೇ ಇಲ್ಲ. ಮನುಷ್ಯ ಕೆಳಗೆ ಬಂದ. ಸಾಯಂಕಾಲದ ಹೊತ್ತಾಗಿತ್ತು. ಥಂಡಿ ಹೆಚ್ಚಾಗುತ್ತಿತ್ತು. ಜನವರಿ-ಫೆಬ್ರವರಿ ಥಂಡಿ ಹೆಚ್ಚಾಗಿ ಬೀಳುತ್ತಿತ್ತು. ಅದರಲ್ಲಿ 80 ವರ್ಷದವ. ಅಂದಮೇಲೆ ಅವನ ಕಾಲುಗಳಲ್ಲಿ ನಡುಕ ಹೆಚ್ಚಾಯಿತು. ಮೇಲೆ ಅಂಗಿಯನ್ನು ಕಳಚಿದ. ಥಂಡಿ ಇನ್ನೂ ಹೆಚ್ಚಾಯಿತು. ದೇಹ ಹೇಳಿತು ಏನಂತಾ. "You cannot collect money. you are 80 years old. the water is very cold" ಇಳೀಬೇಡ ಒಳಗೆ ಅಂತು. ಅದೇ ಮನಸ್ಸು ಹೇಳುತ್ತಿತ್ತು. 90 ಪೈಸೆ ಕಳಕೋತಿಯಲ್ಲೋ, ಬರೋಬ್ಬರಿ 90 ಪೈಸೆ ಕಳಕೋತಿಯಲ್ಲೋ ಅಷ್ಟೂ ಕಳಕೋತಿಯೇನೋ. ಕಾಣೋಕೆ ಹತ್ತದೆ ಅಲ್ಲಿ. ಯಾಕೆ ಬಿಡತೀಯೋ ಲಕ್ಷ್ಮಿಯನ್ನು ತಿರಸ್ಕಾರ ಮಾಡುತೀಯೇನೋ ಎಂತು. ದೇಹ ಹೇಳುತ್ತಿತ್ತು. ಆ ಮನಸ್ಸಿನ ಮಾತನ್ನು ಕೇಳಬೇಡಪ್ಪಾ ಅದರ ಮಾತು ಕೇಳಿದ್ದಕ್ಕೆ ನಾನು ಹೀಗೆ ನಡಗಾಕ್ಕ ಹತ್ತೀನಿ. ಇನ್ನೂ ಮಾತು ಕೇಳಿದರೆ ನನ್ನ ಪರಿಸ್ಥಿತಿ ಏನಾಗಬೇಡ, ವಿಚಾರಮಾಡು ಎಂದು. ಅದೇ ಮನಸ್ಸು ಹೇಳಿತು -ಬೆನ್ಹತ್ತಿ ಬಂದಾತು. ಮುಳುಗಿ ಹೊರಬಂದರೆ ಕಾಸು. ಕಳೆದುಹೋದ 90 ಪೈಸೆ ಸಿಕ್ಕುತ್ತದೆ. ಬೇರೆ ನೀನು ಗಳಿಸ ಬಹುದು. ಆದರೆ ಇದೇ 90 ಪೈಸೆಯನ್ನು ಹೇಗೆ ಗಳಿಸುತ್ತೀ? ಆದರೆ ಮನುಷ್ಯ ಮನಸ್ಸಿನ ಗುಲಾಮನಾಗಿ ಬಿಟ್ಟಿದ್ದ. Man was slave of his own mind. ಮನಸ್ಸಿನ ಆಸೆಯ ಭೂತ ಏರಿತ್ತು. ಆಸೆಯ ಭೂತ ಹೊಕ್ಕಿದ್ದ 80 ವರ್ಷ ವಯಸ್ಸಿನ ಮುದುಕ ನೀರಿಗೆ ಮುಳುಗಿದ. ಒಳಗೆ ಹುಡುಕಾಡಿದ ಕೈಗೆ ಸಿಕ್ಕಿದ ಪೈಸೆಯನ್ನು ಹಿಡಿದು ಹೊರಗೆ ಬಂದು ನೋಡಿದ. ಸಿಕ್ಕಿದ್ದು 10 ಪೈಸೆ. ಅವ ಅಂದುಕೊಂಡ ಒಂದು ಸಲ ಮುಳುಗಿದ್ದಕ್ಕೆ 10 ಪೈಸೆ ಸಿಕ್ಕಿತಲ್ಲ. ಇನ್ನೊಂದು ಬಾರಿ ಮುಳುಗಿದರೆ...? ಹೀಗೆ ಯೋಚಿಸಿ ಒಂದು ಬಾರಿ ಮುಳುಗಿದ 10 ಪೈಸೆ ಸಿಕ್ಕಿತು. ಮತ್ತೊಂದು ಬಾರಿ ಯೋಚಿಸಿ ಮತ್ತೆ ಹತ್ತು ಪೈಸೆ ಸಿಕ್ಕಿತು. ಹೀಗೆಯೇ 8ನೇ ಬಾರಿ ಇಳಿದಾಗಲೂ 10 ಪೈಸೆಯೇ ಸಿಕ್ಕಿತು. ಅಷ್ಟು ಹೊತ್ತಿಗಾಗಲೇ ದೇಹ ಜರ್ಝರಿತವಾಗಿತ್ತು. ಶರೀರ ಅಸ್ತವ್ಯಸ್ತವಾಗಿತ್ತು. He was almost tired. ಇಷ್ಟಾದರೂ ಮನಸ್ಸು ಮಾತ್ರ ಇನ್ನು ಒಂದೇ ಸಲ ಇಳಿದರೆ ಒಂದು ರೂಪಾಯಿ ಸಿಕ್ಕಬಹುದು ಅಥವಾ 10 ಪೈಸೆಯೇ ಸಿಕ್ಕಬಹುದು. ಹೀಗೆಂದುಕೊಂಡು ನೀರಿನಲ್ಲಿ ಮುಳುಗಿ

ಹೊರಗೆ ಬಂದು ನೋಡುತ್ತಾನೆ! ಸಿಕ್ಕಿದ್ದು 1 ರೂಪಾಯಿ! ಎಷ್ಟು ಆನಂದವಾಯಿತು? ಅದ್ಭುತ ಆನಂದವಾಯಿತು. ಹೊಳೆಯುವ ಒಂದು ರೂಪಾಯಿ ನಾಣ್ಯವನ್ನು ನೋಡಿ ಸಂಭ್ರಮದಿಂದ ಈಸಿ, ಈಸಿ ದಡಕ್ಕೆ ಬಂದು ಕೈಚಾಚುವಷ್ಟರಲ್ಲಿ ಮುದುಕನ ಹೃದಯ ನಿಂತುಹೋಗಿತ್ತು. ಮುದುಕನಿಗೆ ರೊಕ್ಕವೇನೋ ಸಿಕ್ಕಿತು. ಆದರೆ ಮುದುಕನೇ ಇರಲಿಲ್ಲ! ಮುದುಕನನ್ನು ಕೊಂದಿದ್ದು ಯಾರು? ಮುದುಕನನ್ನು ನೀರು ಕೊಂದಿರಲಿಲ್ಲ, ಶರೀರ ಕೊಂದಿರಲಿಲ್ಲ, ರೊಕ್ಕ ಕೊಂದಿರಲಿಲ್ಲ. ಆದರೆ ಮುದುಕನ ಮನಸ್ಸನ್ನು ಏರಿದ್ದ ಆಸೆ ಅವನನ್ನು ಕೊಂದು ಹಾಕಿತ್ತು. 80 ವರ್ಷದ ಮುದುಕನನ್ನು 90 ಪೈಸೆಯ ಆಸೆ ಕೊಂದ್ಹಾಕಿತ್ತು. ಇನ್ನು ನಮ್ಮಂತಹ ದರಿದ್ರ ಜನ ಲಕ್ಷ ಲಕ್ಷ ಆಸೆಗಳನ್ನು ಇಟ್ಟುಕೊಂಡು ಬದುಕುವುದು ಹೇಗೆ? ಈ ಆಸೆಗಳು ನಮ್ಮನ್ನು ಎಷ್ಟು ಸಲ ಕೊಂದ್ಹಾಕಬಹುದು? ತೀರಾ ಒಂದು ಸಣ್ಣ ಹಕ್ಕಿ ಆಸೆಪಡಲ್ಲ, ಪ್ರಾಣಿ ಆಸೆಪಡಲ್ಲ, ಒಂದು ಗಿಡ/ಮರ ಆಸೆಪಡಲ್ಲ. ಆದರೆ ಮನುಷ್ಯ ಮಾತ್ರ ಆಸೆಪಡುತ್ತಾನೆ. ಹೊರಗೆ ಕಾಣುವ ಎಲ್ಲ ವಸ್ತುವನ್ನೂ ಅವನು ಆಸೆಪಡುತ್ತಾನೆ. ಅವನ ಕೈಯಲ್ಲಿ ಯಾವಾಗಲೂ ಭಿಕ್ಷಾಪಾತ್ರೆಯೇ. ಅವನ ಹೃದಯವೇ ಆಸೆಪಡುವ ಭಿಕ್ಷಾಪಾತ್ರೆ! ಇವನ ಆಸೆಗೆ ದೊಡ್ಡ ಕಾಡು ಸಾಲದು, ಪಕ್ಷಿಗಳು ಸಾಲದು, ಪ್ರಾಣಿಗಳು ಸಾಲದು, ಸಾವಿರ ಸಾವಿರ ನಿಷ್ಪಾಪಿ ಪ್ರಾಣಿಗಳು ಸಾಲದು. ಭೂಮಿ ದಣಿದು ದಣಿದು ಮನುಷ್ಯನಿಗೆ ಒಂದು ಪಟ್ಟು ಕೊಡ್ತು, ಎರಡು ಪಟ್ಟು ಕೊಡ್ತು, ಮೂರು ಪಟ್ಟು ಕೊಡ್ತು, ನಾಲ್ಕು ಪಟ್ಟು ಕೊಡ್ತು. ಈಗ ಭೂಮಿಯೇ ಸಾಯುವುದಕ್ಕೆ ಹತ್ತಿದೆ. ಆದ್ರೂ ಮನುಷ್ಯನ ಪಾತ್ರೆ ಮಾತ್ರ ತುಂಬಲಿಲ್ಲ. ಈಗ ನಾವು ವಿಚಾರ ಮಾಡಬೇಕು.

ನಿಜವಾಗಿಯೂ ಭಗವಂತ ಬಹಳ ದುಃಖಿಯಾಗಿದ್ದಾನೆ. ಯಾಕಂದ್ರೆ "ನಾನು ಬಹಳ ಚಲೋ ಮನುಷ್ಯಾಂತ ಮಾಡಿ ಭೂಮಿಗೆ ಕಳಿಸಿದೆ. ಅವನು ಚೆನ್ನಾಗಿ ಬಾಳ್ತಾನಂತ ಅಂದುಕೊಂಡಿದ್ದೆ. ಆದ್ರೆ ಅವನು ಭಿಕ್ಷಾ ಬೇಡುವುದಕ್ಕೆ ತಲುಪಿದ್ದಾನಲ್ಲ. ಈ ಜಗತ್ತಿನಾಗ ಒಂದು ದಿವಸ ಈ ಮನುಷ್ಯನಿಗೆ ಸಮಾಧಾನ ಕೊಡಬೇಕು. ಶಾಂತಿ ಕೊಡಬೇಕು. ಈತನಿಗೆ ದಿವ್ಯಜ್ಞಾನ ಕೊಡಬೇಕು. ಜೀವನದ ತುಂಬೆಲ್ಲಾ ಬೆಳಕು ಕೊಡಬೇಕು ಅಂತ ತಿಳಿದುಕೊಂಡು ಭಗವಂತ ದಾರಿ ಕಾಯುತ್ತ ಕಾಯುತ್ತ ಕುಳಿತಿದ್ದಾನೆ. ಅವನು ಯಾವ ಕೆಲಸವನ್ನೂ ಮನುಷ್ಯನಿಗೆ ಕೊಟ್ಟಿಲ್ಲ ನಿಜ. ಆದರೆ ಬಸವಣ್ಣ ಹೇಳಿದಂತೆ "ನೆರೆ ಶರೀರ ಗೂಡು ಹೋಗುವ ಮುನ್ನ ಒಪ್ಪ ಅರಿಯದ ಬದುಕ ಮೃತ್ಯು ಮುಟ್ಟುವ ಮುನ್ನ ಪೂಜಿಸು ನಮ್ಮ ಕೂಡಲಸಂಗಮದೇವನ". ಕನಿಷ್ಠ ಯಾವಾಗಾರ ಪೂಜೆ ಮಾಡು. ಯಾವಾಗ ತಲೆ ಬೆಳ್ಳಗಾದ ಬಳಿಕ ಅಂತ ಹೇಳಿಲ್ಲ. ತಲೆ ಬೆಳ್ಳಗಾಗುವ ಮೊದಲು ಪೂಜೆ ಮಾಡು. ಮರಣಸ್ಪರ್ಶ ಮಾಡುವ ಮೊದಲು ಪೂಜೆ ಮಾಡು. ಮುಪ್ಪು ಮೈಗೇರುವ ಮೊದಲು, ನೆರೆಗಳು ದೇಹವೇರುವ ಮೊದಲು ಪೂಜೆ ಮಾಡು. ಮನುಷ್ಯನೇ ಒಂದಿಷ್ಟು ಭಗವಂತನ ಆರಾಧನೆ ಮಾಡು. ಆರಾಧನೆ ಅಂದಕೂಡಲೇ ಮತ್ತ ನೀವು ಏನೇನೋ ತಿಳೀಬ್ಯಾಡ್ರಿ. ಆರಾಧನೆ

ಎಂದರೆ ನಿನ್ನ ಬಿಟ್ಟು ಒಂದು ಜಗತ್ತು ಅದೆ. ಆ ಜಗತ್ತಿನ ಹಿಂದೆ ಒಂದು ದಿವ್ಯ ಸತ್ಯ ವಸ್ತು ಹರವಿದೆ. ಆ ಭವ್ಯ ವಸ್ತುವಿನ ಕಾಣಿಕೆ ಈ ಸಮಸ್ತ ಜಗತ್ತು ಎನ್ನುವ ಭಾವವನ್ನು ಒಂದಷ್ಟು ಮನಸ್ಸಿನಲ್ಲಿ ತುಂಬಿಕೊ. ನಾನು, ನನ್ನದು ಎಂಬ ಭಾವವನ್ನು ಬಿಡಬೇಕು. ನಾನು ಯಾವುದಾದರೂ ವಸ್ತುವನ್ನು ನನ್ನದು ಎಂದುಕೊಂಡರೆ ನಾನು ಸನ್ಯಾಸಿಯಾಗುವುದಿಲ್ಲ. ಹಾಗಾದರೆ ಮನುಷ್ಯ ಹೇಗಿರಬೇಕು? ಹಿಡೀಬೇಕು, ಹೀಡಿದರು ಹಾಗಿರಬೇಕು. ಅದಕ್ಕೇ ಪ್ರಸಾದ ಅಂತಂದರು ಶರಣರು. ಪೂಜ್ಯ ರಾಜೇಂದ್ರ ಶ್ರೀಗಳು ನಿಜವಾಗಿಯೂ ಪ್ರಸಾದಿಗಳು.

ಕೊನೆಗೆರಡು ಮಾತು ಹೇಳಿ ಮುಗಿಸುತೀನಿ. ರವೀಂದ್ರನಾಥ ಟ್ಯಾಗೂರ್ ನಿಮಗೆ ಗೊತ್ತಿರಬೇಕು. ಅವರು ಬಹಳ ಚಂದ ಮಾತು ಹೇಳಿದ್ದಾರೆ. ನಮ್ಮದು ಯಾಕೆ ಹೀಗಾಗ್ತದೆ, ಅವರದು ಯಾಕೆ ಹಂಗಾಗ್ತದೆ. ಅವರು ಒಂದು ಹಣ್ಣು ಕೊಟ್ಟರೆ ಪ್ರಸಾದ ಯಾಕೆ ಆಗ್ತದೆ. ಅವರು ಮಾಡಿದ ಕಾರ್ಯಗಳು ಯಾಕೆ ಪ್ರಾಸಾಧಿಕ ಆಗ್ತವೆ. ನಾವು ಮಾಡಿದ ಒಂದು ಸಣ್ಣಪುಟ್ಟ ಮನೆಯೂ ನಮಗೆ ಯಾಕೆ ತಲೆಗೆ ನೋವುಂಟು ಮಾಡ್ತದೆ? ನಾವು ಒಂದು ಸಣ್ಣಮನೆ ಕಟ್ಟಿರುತ್ತೇವೆ. ಒಂದೋ ಎರಡೋ ಮಕ್ಕಳು. ಒಂದು ಹೆಂಡತಿ, ಮಕ್ಕಳ ಸಾಕೋಕೆ ಪಗಾರ. ಇಷ್ಟು ಇದ್ದರೂ ಸಹಿತ ಮನೆ ನಡಸೋದಕ್ಕೆ ಎಷ್ಟು ನರಳುತ್ತೆ. ಅವರಿಗೆ ಇಷ್ಟೆಲ್ಲ ಕುಟುಂಬ, ಇಡೀ ನಾಡೇ ಕುಟುಂಬ. ದಿನಾ ಸಾವಿರ ಸಾವಿರ ಸಮಸ್ಯೆಗಳು. ಈ ವಯಸ್ಸಿನೊಳಗೆ ಇಷ್ಟಿದ್ದರೂ ಸಹಿತ ಅವರು ತಲೆಗೆ ತಾಕುವಂತಿಲ್ಲ. ಪೂಜ್ಯ ರಾಜೇಂದ್ರ ಶ್ರೀಗಳ ಜೀವನ ನನಗೆ ಬಹಳ ಹಿಡಿಸಿತ್ತು. ಗುರುಗಳು ಜಗದ್ಗುರುಗಳಾಗಿದ್ದಾರೆ ಅಂತ ಹಿಡಿಸಿಲ್ಲ. ಗುರುಗಳು ಗುರುಗಳಾಗಿದ್ದಾರೆ, ಗುರುಗಳು ನನಗೆ ಯಾಕೆ ಹಿಡಿಸ್ತಾರೆ ಅಂದರೆ ಗುರುಗಳಲ್ಲಿ ಇಷ್ಟೆಲ್ಲಾ ಕಾರ್ಯವ್ಯಾಪ್ತಿಗಳಿದ್ದರೂ ಅವರ ತಲೆಗೇರಲಿಲ್ಲ. ಇದನ್ನು ನೋಡಿ ಕಲಿಯುವಂತಹದ್ದು. ಒಂದು ಸ್ವಲ್ಪ ನೋವಾದರೆ, ಪಗಾರ ಒಂದೆರಡು ದಿವಸ ತಡವಾದರೆ ನಮ್ಮ ಮುಖ ನೋಡಬೇಕು. ಆದರೆ ಜಗದ್ಗುರುಗಳು ನಗನಗತಾ ಬಗೆ ಹರಿಯುವಂತಹ ರೀತಿ ಅದ್ಭುತ. ಇಂಥ ಗುರುಗಳಲ್ಲಿನ ಪ್ರಸನ್ನತೆಯನ್ನು ಕಂಡಾಗ ನಾನಷ್ಟೇ ಅಲ್ಲ, ಸಾಕ್ಷಾತ್ ಭಗವಂತ ಕೂಡ ಸಂತೋಷಪಡುತ್ತಾನೆ.

□

# ತಂಪು ನೆಳಲು-ಹಕ್ಕಿ ಸಾವಿರಾರು

ಪ್ರೊ. ಜಿ.ಎಸ್. ಜಯದೇವ್

1976ರ ಸಮಯ. ಆಗ ನಾನು ಕೆಲಸಕ್ಕಾಗಿ ಅಲ್ಲಿ ಇಲ್ಲಿ ಅರ್ಜಿ ಹಾಕುತ್ತ ಅಲೆಯುತ್ತಿದ್ದೆ. ತಂದೆಯವರು (ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ) ನನ್ನ ಈ ಸಮಸ್ಯೆ ತಮಗೆ ಯಾವ ರೀತಿಯಲ್ಲೂ ಸಂಬಂಧಿಸಿಲ್ಲವೇನೋ ಎಂಬಂತೆ ಕಾಲೇಜು, ಅಧ್ಯಯನದಲ್ಲಿ ಮುಳುಗಿ ಹೋಗಿದ್ದರು. ಇದು ನನ್ನ ಪಾಲಿಗೆ ತುಂಬಾ ಅನಿರೀಕ್ಷಿತ ಸಂಗತಿಯೇನು ಆಗಿರಲಿಲ್ಲ. ಆದರೆ ನನ್ನ ತಂದೆಯವರ ವಿದ್ಯಾರ್ಥಿಗಳು, ಸ್ನೇಹಿತರು ನನ್ನ ಸಮಸ್ಯೆಗೆ ಸ್ಪಂದಿಸುತ್ತ ನೆರವಿಗೆ ಬರುತ್ತಿದ್ದರು. ಪುಣ್ಯಕ್ಕೆ ಹಿರಿಯ ಕವಿಗಳಾದ ಶ್ರೀಯುತ ಕೆ.ಸಿ. ಶಿವಪ್ಪನವರು ಸುತ್ತೂರು ಸ್ವಾಮೀಜಿಯವರು ಬನಶಂಕರಿಯ ಗೆಸ್ಟ್‌ಹೌಸ್‌ಗೆ ಬರುತ್ತಾರೆಂದು ತಂದೆಯವರ ಜೊತೆ ಹೋಗಿ ಅವರನ್ನು ಭೇಟಿಯಾದರೆ ನನಗೆ ಕೆಲಸ ಸಿಗಬಹುದೆಂದು ಸೂಚಿಸಿದರು. ಬಡಪೆಟ್ಟಿಗೆ ಬಗ್ಗದ ನನ್ನ ತಂದೆಯವರನ್ನು ಅವರೇ ಒಪ್ಪಿಸಿದರು. ನನಗೆ ಬಹಳ ಆನಂದವಾಯಿತು; ಕೆಲಸ ಸಿಕ್ಕೇಬಿಟ್ಟಿತು ಎಂದು ಭಾವಿಸುತ್ತ ನಿಗದಿತ ದಿನದಂದು ಬನಶಂಕರಿ ದೇವಸ್ಥಾನದ ಎದುರಿಗೆ ಇದ್ದ ಗೆಸ್ಟ್‌ಹೌಸ್‌ಗೆ ನಮ್ಮ ಸ್ಟ್ಯಾಂಡರ್ಡ್ ಹೆರಾಲ್ಡ್ ಕಾರಿನಲ್ಲಿ ಹೋದೆವು.

ಸ್ವಾಮೀಜಿಯವರಿಗೆಂದು ಒಂದಷ್ಟು ಹಣ್ಣು, ಹೂ ತೆಗೆದುಕೊಂಡು ಹೋಗಿದ್ದೆವು. ಆ ಗೆಸ್ಟ್‌ಹೌಸ್ ಒಂದು ಸಾಧಾರಣ ಮನೆಯಂತೆ ಇತ್ತು. ಸ್ವಾಮೀಜಿಯವರು ಒಂದು ದೊಡ್ಡ ಕುರ್ಚಿಯ ಮೇಲೆ ಕುಳಿತಿದ್ದರು. ನಮ್ಮನ್ನು ಕಂಡವರೆ ಪ್ರೀತಿಯಿಂದ ನಸುನಗುತ್ತ ಸ್ವಾಗತಿಸಿದರು. ಸ್ವಾಮೀಜಿಯವರ ಬಗ್ಗೆ ನನಗೆ ಇದ್ದ ಭಯ, ಆತಂಕಗಳು ಆ ಕ್ಷಣವೇ ಮಾಯವಾದವು. ಅವರ ನಿಷ್ಕಲ್ಮಶವಾದ ಪ್ರೇಮಭರಿತ ನಗೆ 'ನೀನು ನನ್ನವನು' ಎಂದು ಹೇಳುತ್ತಿತ್ತು. ಅವರ ಈ ಸ್ವೀಕಾರ, ಆ ಪ್ರೀತಿಯ ನಗೆ ಅವರ ಜೀವನದ ಕೊನೆಯವರೆಗೂ ಜೀವಂತವಾಗಿತ್ತು. ಎಂತಹ ತೀಕ್ಷ್ಣಮತಿಯ ವಿಮರ್ಶಾಬುದ್ಧಿಯನ್ನೂ ಬಳಸಿ ಒಳಮನೆಗೆ ಪ್ರವೇಶಿಸಿ ಹೃದಯವನ್ನು ತಟ್ಟುತ್ತಿತ್ತು. ಹಾಗಾಗಿ ಅವರನ್ನು ಟೀಕಿಸಬಲ್ಲ ತೀಕ್ಷ್ಣಮತಿಗಳು ಅವರ ಎದುರು ನಿಂತಾಗ ಗರುಡರೇಖೆಯಡಿ ಸರ್ಪ ಸುಮ್ಮನಾಗುವಂತೆ ವಿನಮ್ರರಾಗಿಬಿಡುತ್ತಿದ್ದರು.

ಸರಿ, ನಾವು ಬಂದ ಉದ್ದೇಶವನ್ನು ವಿವರಿಸಿದೆವು. ನಾನು ಎಂ.ಎಸ್ಸಿಯಲ್ಲಿ ಫಸ್ಟ್‌ಕ್ಲಾಸ್ ತೆಗೆದುಕೊಂಡಿರುವುದಾಗಿ ನಮ್ಮಪ್ಪ ಹೇಳಿದರು. ಸ್ವಾಮೀಜಿಯವರು ಖಚಿತಪಡಿಸಿಕೊಳ್ಳಲು ನನ್ನನ್ನು ಪುನಃ ಕೇಳಿದರು. "ಫೈನಲ್ ಇಯರ್‌ನಲ್ಲಿ ಫಸ್ಟ್‌ಕ್ಲಾಸ್ ಆದರೆ ಫಸ್ಟ್ ಇಯರ್‌ನಲ್ಲಿ

ಸೆಕೆಂಡ್ ಕ್ಲಾಸ್" ಎಂದೆ. "ಓ ಹಾಗೋ ವಿಷಯ" ಎಂದು ಉದ್ಗರಿಸಿದರು. ಆದರೆ ನಾನು ಇದ್ದದ್ದನ್ನು ಇದ್ದ ಹಾಗೆ ಹೇಳಿದ್ದರಿಂದ ಅವರಿಗೆ ಸಂತೋಷವೇ ಆಗಿದ್ದು ಕಂಡುಬಂತು. ರಸ್ತೆಯಲ್ಲಿ ನಿಲ್ಲಿಸಿದ್ದ ನಮ್ಮ ಕಾರು ಅವರು ಕುಳಿತಲ್ಲಿಗೆ ಕಾಣುತ್ತಿತ್ತು. 'ಯಾರು ಕಾರನ್ನು ಡ್ರೈವ್ ಮಾಡಿದ್ದು' ಎಂದರು. ಬಹಳ ಹೆಮ್ಮೆಯಿಂದ 'ಸ್ವಾಮೀಜಿ ನಾನೇ ಕಾರ್ ಡ್ರೈವ್ ಮಾಡಿದ್ದು ಎಂದೆ'. ನಸುನಗುತ್ತ ಮತ್ತೆ ಮೆಚ್ಚುಗೆ ವ್ಯಕ್ತಪಡಿಸಿದರು. ಆ ವಯಸ್ಸಿನ ಹುಡುಗರಿಗೆ ಡ್ರೈವಿಂಗ್ ಮಾಡುವುದೇ ಒಂದು ದೊಡ್ಡ ಹೆಮ್ಮೆಯ ವಿಷಯ ಎಂದು ಸ್ವಾಮೀಜಿಯವರಿಗೆ ತಿಳಿದಿತ್ತು. ಹೀಗೆ ನಾನು ಭೇಟಿಯಾದ ಅನೇಕ ಸಂದರ್ಭಗಳಲ್ಲಿ ಒಂದಲ್ಲ ಒಂದು ಕಾರಣಕ್ಕೆ ನನ್ನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಿದ್ದರು.

ಕೆಲಸ ಸಿಗುವುದು ಇನ್ನೂ ದೂರವಿದೆ ಎಂದು ನನಗೆ ನಿಧಾನವಾಗಿ ಅರಿವಾಗತೊಡಗಿತು. ಮೈಸೂರಿಗೆ ಬಂದು ಸ್ವಾಮೀಜಿಯವರನ್ನು ಕಂಡು ನಮ್ಮಪ್ಪ ಕೊಟ್ಟ ಕಾಗದವನ್ನು ಕೊಟ್ಟೆ. ಅದರಲ್ಲಿ ತಮ್ಮ ಮಗನಿಗೆ ಕೆಲಸ ಕೊಡಬೇಕೆಂದು ವಿನಯಪೂರ್ವಕವಾಗಿ ಬರೆದಿದ್ದರು. ಆದರೆ ಸ್ವಾಮೀಜಿಯವರು ಕಾಗದ ನೋಡುತ್ತಲೆ ನಿಮ್ಮ ತಂದೆಯವರು ಏಕೆ ಬರಲಿಲ್ಲ ಎಂದರು. ನನ್ನ ಬಳಿ ಉತ್ತರ ಇರಲಿಲ್ಲ. 'ಹೇಳಿ ಕಳಿಸ್ತೀನಿ' ಎಂದರು. ನಾನು ಪುನಃ ಹಿಂದಕ್ಕೆ ಹೋದೆ. ಅನಂತರ ಕೆ.ಸಿ. ಶಿವಪ್ಪನವರಿಗೆ ವಿಷಯ ತಿಳಿಸಿದೆ. 'ಛೇ, ತಂದೆಯವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕಾಗಿತ್ತು' ಎಂದರು. ಇದಾದ ಕೆಲವು ದಿನಗಳ ಬಳಿಕ ಕೆ.ಸಿ. ಶಿವಪ್ಪನವರು ಸ್ವಾಮೀಜಿಯವರನ್ನು ತಮ್ಮ ಮನೆಗೆ ಪಾದಪೂಜೆಗೆಂದು ಕರೆದಿದ್ದಾಗ ನನ್ನ ಕೆಲಸದ ಬಗ್ಗೆ ಪ್ರಸ್ತಾಪಿಸಿದರು. ಇಷ್ಟು ಸಾಲದೆಂಬಂತೆ ನಾನು ಪುನಃ ಮೈಸೂರಿಗೆ ಹೋಗಿ ನಮ್ಮ ತಂದೆಯವರ ಆಪ್ತ ಸ್ನೇಹಿತರಾದ ಮೇ. ರಾಜೇಶ್ವರಯ್ಯ ಅವರನ್ನು ಸ್ವಾಮೀಜಿಯವರ ಬಳಿ ಕರೆದುಕೊಂಡು ಹೋದೆ. ಆಗಲೂ ಸ್ವಾಮೀಜಿಯವರು "ನೀವೆಲ್ಲ ಈ ಹುಡುಗನಿಗಾಗಿ ಬರ್‍ತಾ ಇದ್ದೀರಿ, ಇವರ ತಂದೆ ಏಕೆ ಬರುತ್ತಿಲ್ಲ" ಎಂದರು. ಆನಂತರ ನಾನು ಏನೋ ಕಾರಣಕ್ಕೆ ತ.ಸು. ಶಾಮರಾಯರ ಮನೆಗೆ ಹೋದೆ, ನನ್ನ ಕಷ್ಟ ಹೇಳಿಕೊಂಡೆ. 'ಶಿವರುದ್ರಪ್ಪ ಬರದೇ ಇದ್ರೆ ಏನು, ನಾನೇ ಬರ್‍ತೀನಿ ಬಾ' ಎಂದು ಹೇಳುತ್ತ ಅವರೇ ನನ್ನನ್ನು ಸ್ವಾಮೀಜಿಯವರ ಬಳಿಗೆ ಕರೆದುಕೊಂಡು ಹೋಗಿ 'ಈ ಹುಡುಗನಿಗೆ ಕೆಲಸ ಕೊಡಲೇಬೇಕೆಂದು ಆಗ್ರಹದಿಂದ ಕೇಳಿಕೊಂಡರು'. ಆಗಲೂ ಸ್ವಾಮೀಜಿಯವರು ಹೇಳಿಕಳಿಸ್ತೀನಿ ಎಂದು ಹೇಳಿ ನಮ್ಮನ್ನು ಕಳುಹಿಸಿಕೊಟ್ಟರು. ಒಂದೆರಡು ದಿನಗಳಲ್ಲಿ ಸ್ವಾಮೀಜಿಯವರು ಹೇಳಿಕಳುಹಿಸಿರುವುದಾಗಿಯೂ ನಾನು ತಕ್ಷಣ ಸ್ವಾಮೀಜಿಯವರನ್ನು ಹೋಗಿ ಕಾಣಬೇಕೆಂದು ಶ್ರೀ ಶಿವಪ್ಪನವರು ತಿಳಿಸಿದರು. ತಕ್ಷಣವೇ ನಾನು ಸುತ್ತೂರು ಮಠಕ್ಕೆ ಬಂದೆ. ಸ್ವಾಮೀಜಿಯವರು ಒಂದು ಸಣ್ಣದಾದ ಚೀಟಿಯಲ್ಲಿ 'ಕೆಲಸ ಕೊಡುವುದು' ಎಂದು ಬರೆದು ನನ್ನ ಕೈಗೆ ಕೊಟ್ಟು ಚಾಮರಾಜನಗರಕ್ಕೆ ಹೋಗು ಎಂದು ಹೇಳಿದರು.

ಆ ಚೀಟಿ ಪವಾಡಸದೃಶವಾದ ಕೆಲಸ ಮಾಡಿತು. ಚಾಮರಾಜನಗರದ ಕಾಲೇಜಿನಲ್ಲಿ ಯಾವ ಅಡಚಣೆಯೂ ಇಲ್ಲದೆ ನನಗೆ ಪ್ರವೇಶ ದೊರೆಯಿತು. ನಾನು ಆ ಕಾಲೇಜಿನ

ಪ್ರಾಣಿಶಾಸ್ತ್ರದ ಉಪನ್ಯಾಸಕನಾಗಿ ನೇಮಕಗೊಂಡೆ. ಆಗಿನ ಪ್ರಾಂಶುಪಾಲರಾದ ಶ್ರೀ ಮಲ್ಲಿನಾಥಯ್ಯನವರ ಮನೆಯಲ್ಲೇ ತಾತ್ಕಾಲಿಕವಾಗಿ ಇರಲು ಸ್ಥಳವೂ ಸಿಕ್ಕಿತ್ತು. ಬಹಳ ಬೇಗ ಚಾಮರಾಜನಗರದ ವಾತಾವರಣಕ್ಕೆ ಹೊಂದಿಕೊಂಡುಬಿಟ್ಟೆ. ಆದರೆ ತಿಂಗಳುಗಳು ಕಳೆದರೂ ನನಗೆ ಸಂಬಳ ಬರುತ್ತಿಲ್ಲ, ದುಡ್ಡೂ ಇರಲಿಲ್ಲ. ನನ್ನ ತಂದೆಯವರ ಬಳಿ ತೆಗೆದುಕೊಂಡು ಬಂದ ಹಣವೆಲ್ಲಾ ಖರ್ಚಾಗಿಹೋಯಿತು. ಏನು ಮಾಡುವುದು ಎಂದು ಚಿಂತಿಸುವಾಗ ನನ್ನ ಸಹೋದ್ಯೋಗಿಗಳು ಸ್ವಾಮೀಜಿಯವರ ಬಳಿ ಹೋಗಿ ಚೀಟಿ ತಂದು ಕಾಲೇಜಿನ ಸೂಪರಿಂಟೆಂಡೆಂಟ್‌ರ ಬಳಿ ಹಣ ಪಡೆಯುತ್ತಿದ್ದುದು ಗೊತ್ತಾಯಿತು. ನಾನೂ ಇದೇ ವಿಧಾನ ಅನುಸರಿಸಬೇಕೆಂದು ಸ್ವಾಮೀಜಿಯವರನ್ನು ಕಾಣಲು ಹೋದೆ. ಈ ವೇಳೆಗಾಗಲೇ ಸ್ವಾಮೀಜಿಯವರ ಬಳಿ ಹಠಹಿಡಿದು ಕುಳಿತುಕೊಳ್ಳದೇ ಇದ್ದರೆ ಕೆಲಸವಾಗುವುದಿಲ್ಲ ಎಂಬ ವಿಷಯ ತಿಳಿದಿತ್ತು. ಹಾಗಾಗಿ ನಾನು ದೃಢನಿರ್ಧಾರ ಮಾಡಿ ಸ್ವಾಮೀಜಿಯವರ ಎದುರು ಹಠಹಿಡಿದು ಕುಳಿತುಕೊಳ್ಳಬೇಕೆಂದು ನಿರ್ಧರಿಸಿದ್ದೆ. ಸ್ವಾಮೀಜಿಯವರಿಗೆ ನಾನು ಏಕೆ ಬಂದಿದ್ದೇನೆ ಎಂದು ಮೊದಲೇ ತಿಳಿದುಹೋಯಿತು. ಆದರೂ 'ಏನು ಬಂದೆ' ಎಂದರು. ನಾನು ಖರ್ಚಿಗೆ ದುಡ್ಡಿಲ್ಲ, ಹಣ ಬೇಕು ಎಂದೆ. 'ನಿಮ್ಮಪ್ಪನ ಹತ್ರ ಇಸ್ಕೊಂಡಿರು ಇನ್ನೊಂದು ಸ್ವಲ್ಪ ದಿನ ಆದಮೇಲೆ ಸಂಬಳ ತಾನಾಗೆ ಬರುತ್ತೆ' ಎಂದರು. ನಾನು ನಮ್ಮಪ್ಪ ಕೊಡೋದಿಲ್ಲ ಸ್ವಾಮೀಜಿ, ನೀವೇ ಒಂದು ಚೀಟಿ ಕೊಡಿ ಸೂಪರಿಂಟೆಂಡೆಂಟ್‌ರವರ ಹತ್ತಿರ ದುಡ್ಡು ತಗೋತಿನಿ ಎಂದೆ. ಅವರಿಗೆ ಸ್ವಲ್ಪ ಸಿಟ್ಟೇ ಬಂತು. ಯಾವ ಚೀಟಿನೂ ಕೊಡಲ್ಲ ಎಂದರು. ಸರಿ ನಾನು ಮೊದಲೇ ನಿರ್ಧಾರ ಮಾಡಿಕೊಂಡಂತೆ ನನಗೆ ಸ್ವಲ್ಪವಾದರೂ ತಿಂಗಳ ಖರ್ಚಿಗೆ ದುಡ್ಡು ಕೊಡಲೇಬೇಕೆಂದು ಹಠ ಹಿಡಿದು ಕುಳಿತೆ. ಅವರಿಗೆ ಮತ್ತಷ್ಟು ಸಿಟ್ಟು ಬಂತು. 'ಬುದ್ಧಿ ಇಲ್ಲ ನಿನಗೆ, ದಡ್ಡ ನೀನು, ಎದ್ದು ನಡೀತಾ ಇರು' ಎಂದು ಗದರಿಸಿದರು. ಸರಿ ನನ್ನ ಬೇಳೆ ಯಾಕೋ ಬೇಯ್ತಾ ಇಲ್ಲ, ಚೀಟಿನೂ ಇಲ್ಲ ಎಂದ ಮೇಲೆ ದುಡ್ಡೂ ಇಲ್ಲ ಎಂದು ಭಾವಿಸುತ್ತ ಹಿಂತಿರುಗಿದೆ. ಆದರೆ ಆಶ್ಚರ್ಯ ಕಾದಿತ್ತು. ಮರುದಿನ ಕಾಲೇಜಿನ ಸೂಪರಿಂಟೆಂಡೆಂಟರು ನನ್ನನ್ನು ಕರೆದು 'ಬುದ್ಧೋರು ನಿಮಗೆ ದುಡ್ಡು ಕೊಡಾಕೆ ಹೇಳಿದಾರೆ' ಎಂದು ಹೇಳಿ ಹಣ ಕೊಟ್ಟರು. ನನಗೆ ಬಹಳ ಸಂತೋಷವಾಯಿತು.

ಮತ್ತೊಂದು ಬಾರಿ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಬಳಿ ವಿಲಕ್ಷಣವಾದ ಒಂದು ಬೇಡಿಕೆಯನ್ನು ಇಟ್ಟೆ. ಏನೆಂದರೆ ಬಿಳಿಗಿರಿರಂಗನ ಬೆಟ್ಟದಲ್ಲಿ ಗಿರಿಜನರಿಗಾಗಿ ಸ್ವಯಂಸೇವಾ ಕೆಲಸ ಮಾಡಲು ಒಂದು ವರ್ಷ ರಜಾ ಬೇಕೆಂದು ಕೇಳಿದೆ. ಸಾವಧಾನವಾಗಿ ನನ್ನ ಅಹವಾಲನ್ನೆಲ್ಲಾ ಕೇಳಿಸಿಕೊಂಡರು. ನನ್ನ ಈ ಯೋಜನೆಯ ಬಗ್ಗೆ ಅವರಿಗೆ ಸಹಮತ ಸಹಾನುಭೂತಿಗಳಿದ್ದುದು ನನ್ನ ಅರಿವಿಗೆ ಬಂತು. 'ಕಾಲೇಜ್ನಲ್ಲಿ ನೆಟ್ಟಗೆ ಪಾಠ ಮಾಡೋದು ಬಿಟ್ಟು ಏನೇನೋ ಮಾಡೋಕೆ ಹೋಗ್ತಾನೆ' ಎಂದು ಅನೇಕರು ನನ್ನನ್ನು ಹೀಯಾಳಿಸಿದ್ದುಂಟು. ಆದರೆ ಸ್ವಾಮೀಜಿಯವರ ಪ್ರತಿಕ್ರಿಯೆ ಬೇರೆಯೇ ಆಗಿತ್ತು. ಕೆಲವೇ ದಿನಗಳಲ್ಲಿ ನನಗೆ ರಜೆ ಸಿಕ್ಕೇ ಬಿಟ್ಟಿತು. ಮತ್ತೆ ಹಲವು ವರ್ಷಗಳು ಪಾಠ ಮಾಡಿದ ಬಳಿಕ

ಪುನಃ ಒಂದು ವರ್ಷದ ಸಂಬಳವಿಲ್ಲದ ರಜೆಯನ್ನು ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಯವರು ನನಗೆ ನೀಡಿದರು. ಈ ಬಾರಿ ನಾನು ರಜೆ ತೆಗೆದುಕೊಂಡದ್ದು ದಾವಣಗೆರೆಯ ರಾಮಕೃಷ್ಣಾಶ್ರಮದಲ್ಲಿ ನನ್ನ ಗುರುಗಳ ಸನ್ನಿಧಿಯಲ್ಲಿ ಸಾಧನೆ ಮಾಡಲು. ಪೂಜ್ಯ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ನನ್ನ ಈ ಉದ್ದೇಶವನ್ನು ಮೆಚ್ಚಿ ರಜೆ ಮಂಜೂರು ಮಾಡಿದರು. ಅಲ್ಲದೆ ಪೂಜ್ಯರಿಗೆ ನನ್ನ ಸಮಾಜ ಕಾರ್ಯದ ಅಭಿರುಚಿ ಸಾಮರ್ಥ್ಯಗಳೆರಡೂ ತಿಳಿದಿತ್ತು. ಹಾಗಾಗಿ ಅವರು ಶಕ್ತಿಧಾಮ ಸಂಸ್ಥೆ ಪ್ರಾರಂಭವಾದಾಗ 'ಜಯದೇವ್ ನೀವೇ ಈ ಸಂಸ್ಥೆಯ ಕಾರ್ಯದರ್ಶಿಯಾಗಿ ಕೆಲಸ ಮಾಡಬೇಕು' ಎಂದು ಹೇಳಿದರು. ಗಣ್ಯಾತೀಗಣ್ಯರೇ ಸೇರಿ ಹುಟ್ಟುಹಾಕಿದ ಈ ಸಂಸ್ಥೆಯಲ್ಲಿ ಮುಂಚೂಣಿ ಯಲ್ಲಿದ್ದುಕೊಂಡು ಕೆಲಸ ಮಾಡಲು ನನಗೆ ಸ್ವಲ್ಪ ಭಯವೇ ಆಯಿತು. ಆದರೂ ಪೂಜ್ಯ ಶ್ರೀಯವರ ಪ್ರೋತ್ಸಾಹದಿಂದ ಈ ಕೆಲಸವನ್ನೂ ಕೈಗೆತ್ತಿಕೊಂಡೆ. ಸ್ವಾಮೀಜಿಯವರು ನನ್ನನ್ನು ಮೈಸೂರಿಗೆ ವರ್ಗ ಮಾಡಿ ಕಾಲೇಜಿನ ಕೆಲಸದಲ್ಲಿ ಸ್ವಲ್ಪ ರಿಯಾಯಿತಿಯನ್ನು ಮಾಡಿ ಕೊಟ್ಟರು. ಹಾಗಾಗಿ ಅತ್ಯುತ್ತಮವಾದ ಸಮಾಜಕಾರ್ಯ ಮಾಡಲು ನನಗೆ ಸಾಧ್ಯವಾಯಿತು.

ಪರಮಪೂಜ್ಯ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಹೃದಯವಂತಿಕೆ ಮತ್ತು ಪ್ರೀತಿಯನ್ನು ಮಠದ ಸಂಸ್ಥೆಗಳಲ್ಲಿ ಕೆಲಸ ಮಾಡುವ ಎಲ್ಲರೂ ಅನುಭವಿಸಿದ್ದಾರೆ. ಮಕ್ಕಳ ಊಟಕ್ಕಾಗಿ ಚಿನ್ನದ ಕರಡಿಗೆಯನ್ನೇ ಅಡವಿಟ್ಟ ವಿಚಾರ ಅಥವಾ ನಾಯಿಮರಿಯೊಂದು ವಾಚ್‌ಮನ್ ಅಚಾತುರ್ಯದಿಂದ ಕೊಠಡಿಯಲ್ಲಿ ಬಂಧಿಯಾದಾಗ ಸ್ವಾಮೀಜಿಯವರ ಹೃದಯವಂತಿಕೆ ಎಲ್ಲರಿಗೂ ಅರ್ಥವಾಗುವ ವಿಷಯ. ಸ್ವಾಮೀಜಿಯವರ ಒಳ್ಳೆಯತನವನ್ನು ಶೋಷಣೆ ಮಾಡಿದವರೂ ಇರಬಹುದು. ಆದರೂ ಎಲ್ಲರ ಮೇಲೂ ಅವರ ತಂಪು ನೆಳಲು ಸಮಾನವಾಗಿ ಬೀಳುತ್ತಿತ್ತು. ನನ್ನ ಮಟ್ಟಿಗೆ ಹೇಳುವುದಾದರೆ ನಾನು ಮಾಡಿರುವ ಎಲ್ಲಾ ಒಳ್ಳೆಯ ಕೆಲಸಗಳಿಗೂ ಸುತ್ತೂರು ಶ್ರೀಗಳೇ ಬಹಳಮಟ್ಟಿಗೆ ಕಾರಣ. ಪೂಜ್ಯ ರಾಜೇಂದ್ರ ಸ್ವಾಮೀಜಿಯವರಾಗಲಿ ಅಥವಾ ಪೂಜ್ಯ ಶ್ರೀ ದೇಶಿಕೇಂದ್ರ ಸ್ವಾಮೀಜಿಯವರಾಗಲಿ ನನ್ನ ಕೆಲಸಕ್ಕೆ ಅನುವು ಮಾಡಿಕೊಡದೆ ಇದ್ದಿದ್ದರೆ ನಾನು ನನ್ನ ಪಾಠಪ್ರವಚನಗಳನ್ನು ಮಾತ್ರ ಮಾಡಿ ಜೀವನದ ಅಧ್ಯಾಯವನ್ನು ಮುಗಿಸಬೇಕಾಗಿತ್ತು. ಪೂಜ್ಯ ಶ್ರೀ ದೇಶಿಕೇಂದ್ರ ಸ್ವಾಮೀಜಿಯವರು ನಾನು ವಾಲೆಂಟರಿ ರಿಟೈರ್ಮೆಂಟ್ ತೆಗೆದುಕೊಳ್ಳುವ ಇಚ್ಛೆ ವ್ಯಕ್ತಪಡಿಸಿದಾಗಲೆಲ್ಲಾ 'ಏಕೆ ಕೆಲಸ ಬಿಡುತ್ತೀರಿ, ನೀವು ನಿಮ್ಮ ಸಂಬಳವನ್ನು ಅನಾಥ ಮಕ್ಕಳಿಗೆ ತಾನೇ ಖರ್ಚು ಮಾಡುವುದು' ಎಂದು ಹೇಳುತ್ತಿದ್ದರು. ಆದರೆ ಸಂಸ್ಥೆಗಳ ಕೆಲಸದ ಒತ್ತಡದ ನಡುವೆ ಪಾಠ-ಪ್ರವಚನಗಳಿಗೆ ತೊಂದರೆಯಾಗುತ್ತಿತ್ತು. ಹಾಗಾಗಿ ನಾನು ಇನ್ನೂ ಹತ್ತು ವರ್ಷ ಸರ್ವೀಸ್ ಇರುವಾಗಲೇ ವಾಲೆಂಟರಿ ರಿಟೈರ್ಮೆಂಟ್ ತೆಗೆದುಕೊಂಡೆ. ನನಗೆ ಬರುತ್ತಿದ್ದ ಪೆನ್ಷನ್ ಆರ್ಥಿಕ ಸ್ವಾವಲಂಬನೆಯನ್ನೂ ತಂದುಕೊಟ್ಟಿತು. ಹಾಗಾಗಿ ಜೆಎಸ್‌ಎಸ್ ಸಂಸ್ಥೆಯ ನೌಕರನಾಗಿದ್ದಕ್ಕೆ ನಾನು ಹೆಮ್ಮೆಪಡುತ್ತೇನೆ. ಪೂಜ್ಯ ಶ್ರೀ ರಾಜೇಂದ್ರ ಸ್ವಾಮೀಜಿಯವರ ತಂಪು ನೆಳಲನ್ನು ಇಂದಿಗೂ ಅನುಭವಿಸುತ್ತಿದ್ದೇನೆ.

□

# ಹೀಗಿದ್ದರು ನಮ್ಮ ರಾಜೇಂದ್ರ ಬುದ್ದಿ

**ಡಾ. ಭ. ನಾಗರಾಜ್**

**ಭಾ**ನುವಾರ ಬೆಳಗ್ಗೆ ನಾನು ಇನ್ನೂ ಹಾಸಿಗೆಯಲ್ಲಿದ್ದೆ. ಬಾಗಿಲು ತಟ್ಟಿದ ಶಬ್ದಕ್ಕೆ ಎಚ್ಚರವಾಗಿ,

"ಯಾರು?" ಎಂದು ಬಾಗಿಲು ತೆರೆದೆ.

"ನೀವು ಅರ್ಜೆಂಟಾಗಿ ಶ್ರೀ ಕೃಷ್ಣ ಆಲನಹಳ್ಳಿಯವರನ್ನು ನೋಡಬೇಕಂತೆ" ಎಂದು ಒದರಿದ ಆ ಹುಡುಗ. ಏನು ಎತ್ತ ಅಂಥ ವಿಚಾರಿಸುವ ಮೊದಲೇ ಅಲ್ಲಿಂದ ಕಾಲು ಕಿತ್ತಿದ್ದ. ಹಲ್ಲುಜ್ಜಿ, ಮುಖ ತೊಳೆದು ಮಿತ್ರ ಆಲನಹಳ್ಳಿಯ ರೂಮಿನತ್ತ ಸೈಕಲ್ ತಿರುಗಿಸಿದೆ. 1967-68ರ ದಿನಗಳು. ನಾನು ಮೈಸೂರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದೆ. ಊಟ ಸುತ್ತೂರು ಹಾಸ್ಟೆಲ್‌ನ ಮೇನ್ ಬಿಲ್ಡಿಂಗ್‌ನಲ್ಲಿ. ವಾಸ ಗಣೇಶ ಟಾಕೀಸ್ ಪಕ್ಕದ ಪಾರ್ಕ್ ಎದುರಿಗೆ ಇದ್ದ ನಿವೃತ್ತ ವೈದ್ಯ ಡಾ. ನಾಗಭೂಷಣರಾವ್ ಅವರ ಮನೆಯ ಕಾಂಪೌಂಡ್‌ನಲ್ಲಿದ್ದ ಪುಟ್ಟ ರೂಂನಲ್ಲಿ. ವಿದ್ಯಾರ್ಥಿ, ಕೃಷ್ಣ ಆಲನಹಳ್ಳಿ, ಗೀತಾ ರಸ್ತೆಯ ಪೋಸ್ಟ್ ಆಫೀಸ್ ಎದುರು ಮನೆಯ ಕಾಂಪೌಂಡಿನಲ್ಲಿದ್ದ ಒಂದು ರೂಮಿನಲ್ಲಿ ವಾಸಿಸುತ್ತಿದ್ದರು. ಅವರು ಆಗ ತಾನೆ ಬಿ.ಎ. ಮುಗಿಸಿ ಎಂ.ಎ. ಸೇರಿದ್ದರು. ಆಗಲೇ ಅವರು ತಮ್ಮ ಚೊಚ್ಚಲ ಕವನ ಸಂಕಲನ "ಮಣ್ಣಿನ ಹಾಡು" ಪ್ರಕಟಿಸಿದ್ದರು. ಅದಕ್ಕೆ ಗೋಪಾಲಕೃಷ್ಣ ಅಡಿಗರು ಮೆಚ್ಚುಗೆಯ ಮುನ್ನುಡಿ ಬರೆದಿದ್ದರು. ಹೀಗಾಗಿ ಕೃಷ್ಣ ಆಲನಹಳ್ಳಿ ಸಾಹಿತ್ಯಾಸಕ್ತರ ಕಣ್ಣಲ್ಲಿ ಹೀರೋ ಆಗಿ ಮಿಂಚುತ್ತಿದ್ದರು. ಅಲ್ಲದೆ ಅವರು "ಸಮೀಕ್ಷಕ" ಎನ್ನುವ ಸಾಹಿತ್ಯ ಮಾಸಿಕವನ್ನು ಪ್ರಕಟಿಸುತ್ತಿದ್ದರು.

ನಾನು ನನ್ನ ಸೈಕಲ್ ಮೇಲೆ ಅವರ ರೂಮಿಗೆ ಹೋದೆ. ಕೃಷ್ಣ ಹಾಸಿಗೆಯಲ್ಲಿ ಮಲಗಿದ್ದರು. ಅವರಿಗೆ ವಿಪರೀತ ಜ್ವರ ಬಂದು ನಡುಗುತ್ತಿದ್ದರು. ನನ್ನನ್ನು ನೋಡುತ್ತಲೆ "ಡಾಕ್ಟ್ರೇ ನನಗೆ ಎರಡು ದಿನಗಳಿಂದ ಜ್ವರ. ಇವತ್ತು ಅದು ಜಾಸ್ತಿಯಾಗಿದೆ. ನನಗೆ ಔಷಧಿ ತಂದುಕೊಡುತ್ತೀರಾ?" ಎಂದರು. ಅವರ ಹಣೆ ಮುಟ್ಟಿ ನೋಡಿದೆ. ಅದು ಸುಡುತ್ತಿತ್ತು.

"ಆಯ್ತು ಕಾಸು ಕೊಡಿ" ಎಂದೆ.

"ನನ್ನ ಹತ್ತಿರ ಚಿಕ್ಕಾಸು ಇಲ್ಲ, ನಿಮ್ಮ ಹತ್ತಿರ ಎಷ್ಟಿದೆ?" ಎಂದು ಕೇಳಿದರು. ನನ್ನ ಹತ್ತಿರವೂ ಚಿಕ್ಕಾಸು ಇರಲಿಲ್ಲ.

"ಒಂದು ಕೆಲಸ ಮಾಡಿ, ನಾನು ಸುತ್ತೂರು ಹಾಸ್ಟೆಲ್‌ಗೆ ಉಚಿತ ಊಟಕ್ಕೆ ಅರ್ಜಿ ಹಾಕಿದ್ದೆ. ಆದರೆ ಮೊನ್ನೆ ಪ್ರಕಟಿಸಿದ ಲೀಸ್ಟ್‌ನಲ್ಲಿ ನನ್ನ ಹೆಸರು ಇಲ್ಲ. ಎರಡನೇ ಲಿಸ್ಟ್‌ನಲ್ಲಿ ಬರಬಹುದು ಎಂದಿದ್ದೆ. ಈಗ ನನಗೆ ಹಣದ ಅವಶ್ಯಕತೆ ಇರುವುದರಿಂದ ನೀವು ಅಲ್ಲಿಗೆ ಹೋಗಿ ನಾನು ಅರ್ಜಿಯ ಜೊತೆಯಲ್ಲಿ ಕಟ್ಟಿದ್ದ ಡಿಪಾಜಿಟ್ ಹತ್ತು ರೂಪಾಯಿಗಳ ರಿಫಂಡ್ ತೆಗೆದುಕೊಂಡು ಬನ್ನಿ. ನಾನು ನಿಮಗೆ ರಿಫಂಡ್‌ಗೆ ಅರ್ಜಿ ಕೊಡುತ್ತೇನೆ" ಎಂದು ಹೇಳಿ ಕಷ್ಟಪಟ್ಟು ಎದ್ದು ಕುಳಿತು ಅರ್ಜಿ ಬರೆದರು. ಆ ಅರ್ಜಿಯನ್ನು ಕೈಯಲ್ಲಿ ಹಿಡಿದು ನಾನು ಕೇಳಿದೆ-

"ಅಲ್ಲಿ ಸೀಟ್ ಸಿಕ್ಕರೆ ಸೇರುತ್ತೀರಾ?"

"ಅರ್ಜಿ ಹಾಕಿರುವುದೇ ಎರಡು ವರ್ಷಗಳ ಉಚಿತ ಊಟಕ್ಕೆ. ಸೀಟು ಸಿಕ್ಕರೆ ಬೇಡ ಅನ್ನುತ್ತೇನೆಯೇ?" ಆ ಜ್ವರದಲ್ಲೂ ನಕ್ಕು ಹೇಳಿದರು ಕೃಷ್ಣ. ನಾನು ಸುತ್ತೂರು ಮಠಕ್ಕೆ ಸೈಕಲ್ ತುಳಿದೆ. ನನ್ನ ಅಥವಾ ಕೃಷ್ಣನ ಅದೃಷ್ಟಕ್ಕೆ ರಾಜೇಂದ್ರ ಬುದ್ಧಿ ಮಠದಲ್ಲೇ ಇದ್ದರು. ನಾನು ಅವರನ್ನು ಸಮೀಪಿಸಿ ಸಾಷ್ಟಾಂಗ ನಮಸ್ಕಾರ ಹಾಕಿ,

"ನಾನು ಬುದ್ಧೀ..." ಎನ್ನುತ್ತಿದ್ದ ಹಾಗೆ ಪೂರ್ತಿ ಮಾಡುವ ಮೊದಲೇ "ಗೊತ್ತು, ಗೊತ್ತು ನಾಗ್ರಾಜ್ ಅಲ್ಲವೆ? ಏನು ಮಠದಲ್ಲಿ ಊಟ ಸರಿಯಿಲ್ಲವೇ?" ಎಂದು ನಕ್ಕರು. ನಾನು ಅತ್ಯಂತ ಸಂಕೋಚಗೊಂಡು,

"ಬುದ್ಧೀ, ನನ್ನ ಸ್ನೇಹಿತ ಕೃಷ್ಣ ಆಲನಹಳ್ಳಿಯಂತ ಒಬ್ಬನಿದ್ದಾನೆ. ಆತ ಸಾಹಿತಿ. ಮುಂದೊಂದು ದಿನ ಆತ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಲಿದ್ದಾನೆ. ಈಗ ಆತ ಎಂ.ಎ. ವಿದ್ಯಾರ್ಥಿ. ಆತ ನಮ್ಮ ಹಾಸ್ಟೆಲ್ ಸೀಟಿಗೆ ಅರ್ಜಿ ಹಾಕಿದ್ದ. ಆತನಿಗೆ ಸೀಟು ಸಿಕ್ಕಿಲ್ಲ. ಇಂಥ ವ್ಯಕ್ತಿ ನಮ್ಮ ಹಾಸ್ಟೆಲ್‌ನಲ್ಲಿದ್ದ ಎಂದರೆ ಅದು ನಮಗೂ ಒಂದು ಹೆಮ್ಮೆಯ ವಿಷಯ" ಎಂದೆ. ಕೃಷ್ಣನ ಬಗೆಗೆ ನನಗೆ ಇದ್ದ ಅಭಿಮಾನ ನನ್ನಿಂದ ಇಂಥ ಧಾರ್ಷ್ಟ್ಯದ ಮಾತುಗಳನ್ನು ಆಡಿಸಿತ್ತು.

"ಹೌದೇ, ಅವನು ಅಷ್ಟು ದೊಡ್ಡ ಮನುಷ್ಯನೇ?" ಎಂದು ವಿನೋದವಾಗಿ ನಕ್ಕರು ಬುದ್ಧಿಯವರು.

"ಹೌದು ಬುದ್ಧಿ" ಎಂದೆ ವಿನೀತನಾಗಿ.

"ಆತನದು ಯಾವ ಊರು?" ಎಂದು ಕೇಳಿದರು.

ನಾನು "ಹೆಗ್ಗಡದೇವನಕೋಟೆ ತಾಲ್ಲೂಕಿನ ಆಲನಹಳ್ಳಿ ಬುದ್ಧಿ" ಎಂದೆ. (ಹೆಗ್ಗಡದೇವನಕೋಟೆಯಂತಹ ಸೀಮೆಯಲ್ಲಿ ಇಂಥ ಪ್ರತಿಭೆ ಅರಳಿದೆಯಾ? ಎಂದು ಅಡಿಗರು ಕೃಷ್ಣನ 'ಮಣ್ಣಿನ ಹಾಡಿ'ನಲ್ಲಿ ಮುನ್ನುಡಿಯಲ್ಲಿ ಬರೆದಿದ್ದರು.)

"ಆಯ್ತು, ಸೀಟು ಕೊಡೋಣ. ಆದರೆ ಮೊದಲು ಸೀಟು ಇಲ್ಲ ಎಂದು, ಈಗ ಕೊಡುತ್ತೇವೆ ಎಂದರೆ, ಆ ದೊಡ್ಡ ಮನುಷ್ಯ; 'ಬೇಡ ನನಗೆ' ಎಂದು ತಿರಸ್ಕರಿಸಿದರೆ ಏನು ಮಾಡುವುದು?" ಎಂದು ನಕ್ಕರು. ನಾನು ಆವೇಶದಲ್ಲಿ, ಅಗತ್ಯಕ್ಕಿಂತ ಹೆಚ್ಚಾಗಿ ಕೃಷ್ಣನನ್ನು ಹೊಗಳಿದ್ದೆ. ಅವರ ಮಾತಿನಿಂದ ಸಂಕೋಚಗೊಂಡು, ನಾನು ನನ್ನ ಧ್ವನಿಯನ್ನು ತಗ್ಗಿಸಿ,

"ಇಲ್ಲ ಬುದ್ಧಿ ಆತನಿಗೆ ಸೀಟು ಬೇಕಾಗಿದೆ; ಕಷ್ಟದಲ್ಲಿದ್ದಾನೆ" ಎಂದೆ.

"ಆಯ್ತು, ಸೀಟು ಕೊಡೋಣ. ಆತನಿಂದ ನನಗೆ ಸೀಟು ಬೇಕು, ಕೊಟ್ಟರೆ ಸೇರುತ್ತೇನೆ ಅಂತ ಬರೆಸಿಕೊಂಡು ಬಾ" ಎಂದರು. ಅವರಿಗೆ ನನ್ನ ಬಾಲಿಶ ಮಾತುಗಳು ವಿನೋದವಾಗಿ ಕಂಡದ್ದಕ್ಕೆ ನನ್ನ ಭಾವಾವೇಶದ ಮಾತುಗಳು ಕಾರಣವಾಗಿದ್ದವು. ಅವರ ಮಾತುಗಳಿಂದ ಹರ್ಷಿತನಾದ ನಾನು, ಅವರಿಗೆ ನಮಸ್ಕರಿಸಿ ಕೃಷ್ಣನ ರೂಮಿಗೆ ಬಂದು, ನಡೆದ ಮಾತುಗಳನ್ನು ಹೇಳಿ,

"ಬುದ್ಧಿಯವರು ಸೀಟು ಕೊಡಲು ಒಪ್ಪಿದ್ದಾರೆ. ನೀವು ಸೀಟು ಕೊಟ್ಟರೆ ಹಾಸ್ಟೆಲ್ ಸೇರುತ್ತೇನೆ ಅಂತ ಬರೆದುಕೊಡಬೇಕಂತೆ" ಎಂದೆ.

"ತಮಾಷೆಗೆ ಹಾಗೆ ಹೇಳಿರಬೇಕು" ಎಂದು ನಕ್ಕ ಕೃಷ್ಣ.

"ಇಲ್ಲಾರಿ, ಖಂಡಿತ ಸೀಟು ಕೊಡುತ್ತಾರೆ, ನೀವು ಅರ್ಜಿ ಕೊಡಿ" ಎಂದೆ.

"ಅಲ್ಲಾರಿ, ಬುದ್ಧಿಯವರು ಹೋಗಿ ಹೋಗಿ ತಮ್ಮ ಹಾಸ್ಟೆಲ್‌ನ ಒಬ್ಬ ವಿದ್ಯಾರ್ಥಿಯ ಮಾತಿಗೆ, ಸೀಟು ರಿಜೆಕ್ಟಾದ ನನಗೆ ಸೀಟು ಕೊಟ್ಟುಬಿಡುತ್ತಾರೋ? ನಿಮ್ಮ ಹುಚ್ಚು ಮಾತುಗಳಿಂದ ಅವರು ಹಾಗೆ ಪ್ರತಿಕ್ರಿಯಿಸಿದ್ದಾರೆ ಅಷ್ಟೆ. ಸುಮ್ಮನೆ ಹೋಗಿ ರಿಫಂಡ್ ತೆಗೆದುಕೊಂಡು ಅದರಲ್ಲಿ ಜ್ವರದ ಮಾತ್ರೆ, ಒಂದಿಷ್ಟು ಬ್ರೆಡ್ ತಗೆದುಕೊಂಡು ಬನ್ನಿ" ಎಂದರು ಕೃಷ್ಣ. ನನಗೂ ಕೃಷ್ಣನ ಮಾತು ಕೇಳಿ ಇದ್ದರೂ ಇರಬಹುದು ಅನಿಸಿ ಪೆಚ್ಚಾಯ್ತು.

ಆದರೂ "ನೋಡಿ ಕೃಷ್ಣ, ಅವರು ದೊಡ್ಡವರು. ಹಾಗೆಲ್ಲ ತಮಾಷೆ ನನ್ನ ನಿಮ್ಮಂಥವರು ಮಾಡುತ್ತೇವೆ ಅಷ್ಟೆ. ಅಲ್ಲಿಗೂ ನೀವು ಕಳೆದುಕೊಳ್ಳುವುದು ಏನು? ಹೇಗೂ ನನಗೆ ಸೀಟು ಸಿಕ್ಕಿಲ್ಲ ಅಂತ ನಿಮಗೆ ಗೊತ್ತಾಗಿದೆ. ಅರ್ಜಿ ಕೊಟ್ಟು ನೋಡಿ" ಎಂದೆ. ಕೃಷ್ಣ ನನ್ನ ಮಾತಿಗೆ ಕಟ್ಟುಬಿದ್ದು ಅರ್ಜಿ ಬರೆದು ಕೊಟ್ಟರು. ಮತ್ತೆ ನಾನು ಮಠದ ಕಡೆಗೆ ಸೈಕಲ್ ತಿರುಗಿಸಿದೆ. ನಮ್ಮ ಅದೃಷ್ಟಕ್ಕೆ ಬುದ್ಧಿಯವರು ಇನ್ನೂ ಮಠದಲ್ಲೇ ಇದ್ದರು. ನಾನು ಸಾಷ್ಟಾಂಗ ನಮಸ್ಕಾರ ಮಾಡಿ ಕೃಷ್ಣನ ಅರ್ಜಿಯನ್ನು ಅವರಲ್ಲಿ ಸಲ್ಲಿಸಿದೆ. ಅದನ್ನು ಓದಿದ ಬುದ್ಧಿಯವರು ಅದರ ಕೆಳಭಾಗದ ಮೂಲೆಯಲ್ಲಿ ಇವನಿಗೆ ಸೀಟು ಕೊಡುವುದು ಎಂದು ಗೀಚಿ ಮಹಂತದೇವರಿಗೆ ಈ ಚೀಟಿ ಕೊಡು ಎಂದು ಕೊಟ್ಟರು. ಮಹಂತದೇವರು ಹಾಸ್ಟಲ್‌ನ ಮ್ಯಾನೇಜರ್ ಆಗಿದ್ದರು. ಈ ಮೂರು ಪದಗಳ ಅವರ ಗೀಚು, ಬ್ರಹ್ಮ ಬರೆವ ಅದೃಷ್ಟ ರೇಖೆಗಳಿಗಿಂತ ಹೆಚ್ಚಿನ ವರವಾಗಿರುತ್ತಿತ್ತು ಎನ್ನುವುದು ಅವರನ್ನು ಬಲ್ಲ ಎಲ್ಲರಿಗೂ ಗೊತ್ತು. ಇದನ್ನು

ಟೈಪು ಮಾಡುತ್ತಿರುವ ನನ್ನ ಕಣ್ಣುಗಳಲ್ಲಿ ನನಗೆ ತಿಳಿಯದೆ ಕಣ್ಣೀರು ತುಂಬಿಕೊಂಡಿವೆ...ಎಂಥಾ ಕಾರುಣ್ಯ! ಎಂಥಾ ವಾತ್ಸಲ್ಯ! ಹೀಗಿದ್ದರು ನಮ್ಮ ರಾಜೇಂದ್ರ ಬುದ್ಧಿಯವರು.

ಸಂಭ್ರಮಿತನಾದ ನಾನು ಮತ್ತೊಮ್ಮೆ ಅವರಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸಿ ಹೊರಬಂದೆ. ನಂತರ ಕೃಷ್ಣ ಆಲನಹಳ್ಳಿ ಹಾಸ್ಟೆಲ್ ಸೇರಿಕೊಂಡು, ನಾವಿಬ್ಬರೂ ಜೊತೆಯಲ್ಲಿ ಊಟ ಮಾಡುತ್ತಿದ್ದೆವು.

* * *

ನಾನು ನನ್ನ ವಿದ್ಯಾಭ್ಯಾಸ ಮುಗಿಸಿ ಡಾಕ್ಟರಾಗಿ ಸುತ್ತೂರು ಹತ್ತಿರದ ಹಳ್ಳಿ ನಗರ್ಲೆಯಲ್ಲಿ 'ಬಸವೇಶ್ವರ ಕ್ಲಿನಿಕ್' ತೆರೆದು ಸುತ್ತಮುತ್ತಲ ಹಳ್ಳಿಯವರಿಗೆ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದೆ. ಹನಿಯಂಬಳ್ಳಿ, ಸರಗೂರು, ಬಸವನಪುರ, ಆಲಂಬೂರು, ಕಲ್ಮಳ್ಳಿ, ಕುಪ್ಪರವಳ್ಳಿ ಮುಂತಾದ ಹಳ್ಳಿಗಳಿಗೆ ನನ್ನ ಸುವೇಗದಲ್ಲಿ ಹೋಗಿ ಬರುತ್ತಿದ್ದೆ. ಮನೆ ಮೈಸೂರಿನಲ್ಲೇ ರಾಮಾನುಜ ರಸ್ತೆಯ ಏಳನೇ ಕ್ರಾಸ್‌ನಲ್ಲಿ, ಪಿಟೀಲು ಮಹದೇವಪ್ಪ ನವರ ಮನೆಯ ಔಟ್‌ಹೌಸ್ ಆಗಿತ್ತು.

ಒಂದು ಅಮಾವಾಸ್ಯೆಯ ದಿನ ನಾನು ನನ್ನ ಹೆಂಡತಿ, ತಾಯಿ ಮತ್ತು ಮಗನ ಜೊತೆ ಸುತ್ತೂರು ಶ್ರೀಕ್ಷೇತ್ರದ ಪೂಜೆಯಲ್ಲಿ ಪಾಲ್ಗೊಳ್ಳಲು ಹೋದೆವು. ಪೂಜೆಯ ನಂತರ ನಾವೆಲ್ಲ ಬುದ್ಧಿಯವರಿಗೆ ನಮ್ಮ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸಿ, ನಾನು ಅವರಲ್ಲಿ ನನ್ನ ಪರಿಚಯವನ್ನು ಬಿನ್ನವಿಸಿಕೊಳ್ಳಲು ಹೊರಟೆ. ಅಲ್ಲಿಗೆ ನಾನು ಹಾಸ್ಟೆಲ್ ಬಿಟ್ಟು ಸುಮಾರು ಎಂಟು ವರ್ಷಗಳೇ ಆಗಿದ್ದವು. ಬುದ್ಧಿಯವರ ದರ್ಶನಕ್ಕೆ ನಾನು ಈ ಎಂಟು ವರ್ಷಗಳಲ್ಲಿ ಒಮ್ಮೆಯೂ ಹೋಗಿರಲಿಲ್ಲ.

"ನಾನು ಬುದ್ಧೀ..."

"ಗೊತ್ತು, ಗೊತ್ತು ನಾಗ್ರಾಜ್ ಅಲ್ವ? ಈಗ ಎಲ್ಲಿದ್ದೀರಾ?" ಓ ದೇವರೇ! ಅವರು ನನ್ನ ಗುರುತುಹಿಡಿದಿದ್ದರು! ಮತ್ತೆ ನನ್ನನ್ನು "ಎಲ್ಲಿದ್ದೀರಾ?" ಎಂದು, "ಎಲ್ಲಿದ್ದೀಯಾ?" ಎಂದೆಲ್ಲ ವಿಚಾರಿಸಿದ್ದರು. ಈಗ ನಾನು ಡಾಕ್ಟರ್ ಅಲ್ಲವೇ? ಮತ್ತೆ ನನ್ನ ಕಣ್ಣುಗಳು ತುಂಬಿಕೊಂಡಿವೆ. ನಾನು ಸುಧಾರಿಸಿಕೊಂಡು ನನ್ನ ಬಗೆಗಿನ ವಿವರಗಳನ್ನು ಹೇಳಿದ ಮೇಲೆ,

"ಮೈಸೂರಿನಿಂದ ಹೇಗೆ ಬರುತ್ತೀರಾ?" ಎಂದು ವಿಚಾರಿಸಿದರು.

"ಬೆಳಗಿನ ರೈಲ್‌ನಲ್ಲಿ ನಂಜನಗೂಡಿಗೆ ಬಂದು, ಅಲ್ಲಿಂದ ಸುವೇಗದಲ್ಲಿ ನಗರ್ಲೆಗೆ ಬರುತ್ತೇನೆ ಬುದ್ಧಿ."

"ಸುವೇಗ ಎಲ್ಲಿ ನಿಲ್ಲಿಸುತ್ತೀರಾ?"

"ನಂಜನಗೂಡಿನಲ್ಲಿ ನನ್ನ ಭಾವ ಇದ್ದಾರೆ; ಅವರ ಮನೆಯಲ್ಲಿ ನಿಲ್ಲಿಸುತ್ತೇನೆ ಬುದ್ಧಿ."

"ಅವರು ಏನು ಮಾಡುತ್ತಾರೆ?"

"ಅವರು ಶಾಲಾ ಮಾಸ್ತರು ಬುದ್ಧಿ."

"ಅವರ ಹೆಸರು ಏನು?"

"ವೀರಭದ್ರಪ್ಪ ಅಂತ ಬುದ್ಧಿ." ಎಷ್ಟು ಕಾಳಜಿ! ಅವರ ಕಾರುಣ್ಯದ ಸಾಗರದಲ್ಲಿ ಒಂದು ಹನಿಯಾಗಿದ್ದ ನನ್ನ ಬಗೆಗೆ ಅವರು ತೋರಿದ ವಾತ್ಸಲ್ಯ ಎಂಥದು!

ಇದಾದ ಮೂರು ನಾಲ್ಕು ತಿಂಗಳುಗಳ ನಂತರ ಮತ್ತೊಮ್ಮೆ ನಾನು ಸುತ್ತೂರು ಶ್ರೀಕ್ಷೇತ್ರಕ್ಕೆ ಅಮಾವಾಸ್ಯೆಯ ದಿನ ಹೋಗಿದ್ದೆ. ಈ ಸಲ ನನ್ನ ಜೊತೆಗೆ ನನ್ನ ಭಾವ ಬಂದಿದ್ದರು. ಪೂಜೆಯಾದ ನಂತರ ನಾವು ನಮ್ಮ ಪ್ರಣಾಮಗಳನ್ನು ಸಲ್ಲಿಸಿದೆವು. ನನ್ನ ಭಾವನ ಕಡೆ ಕೈ ತೋರಿಸಿ ನನ್ನನ್ನು

"ಇವರು ಯಾರು?" ಎಂದಾಗ ನಾನು,

"ಇವರು ನನ್ನ ಭಾವ ಬುದ್ಧಿ" ಎಂದೆ. ಅವರ ಕಡೆ ತಿರುಗಿ ಕೇಳಿದರು,

"ಓಹೋ! ವೀರಭದ್ರಪ್ಪ ಅಂದರೆ ನೀವೇಯೋ?"

ಎಂಥಾ ನೆನಪು! ನಾನು ಸಂಶಯವಾದಿ. ಈಗಲೂ, ಇಂಥ ಒಂದು ಘಟನೆ ನಡೆಯಿತು. ಪ್ರಾಸಂಗಿಕವಾಗಿ ಅರಿಕೆ ಮಾಡಿಕೊಂಡ ಒಂದು ಹೆಸರನ್ನು ಮೂರು ತಿಂಗಳ ನಂತರ ನೆನಪಿಸಿಕೊಂಡು ಅಂಥ ಮಹಾಪೀಠದಲ್ಲಿರುವ ಗುರುಗಳು ಹೀಗೆ ನೆನಪಿಟ್ಟುಕೊಂಡಿದ್ದರು ಎಂದು ಯಾರಾದರೂ ಹೇಳಿದರೆ ನಾನು ನಂಬುವುದಿಲ್ಲ. ಆದರೆ ರಾಜೇಂದ್ರ ಬುದ್ಧಿಯವರನ್ನು ಹತ್ತಿರದಿಂದ ಬಲ್ಲ ಎಲ್ಲರಿಗೂ ಇಂಥ ಒಂದಲ್ಲ ಒಂದು ಅನುಭವವಾಗಿರುವುದರಿಂದ ಅವರಿಗೆ ಖಂಡಿತಾ ಗೊತ್ತು ಅವರ ಈ ಅದ್ಭುತ ಸ್ಮರಣಶಕ್ತಿ. ಇದು ಶಕ್ತಿಯಲ್ಲ, ವಾತ್ಸಲ್ಯ! ಅಪಾರ ಕರುಣೆಯ ಮಾತೃವಾತ್ಸಲ್ಯ. "ಜಗವೆಲ್ಲ ನಗುತಿರಲಿ, ಜಗದಳಲು ನನಗಿರಲಿ" ಎಂದು ತಮ್ಮನ್ನು ತಾವು ಕರ್ಪೂರದಂತೆ ಕರಗಿಸಿಕೊಂಡು, ಗಂಧದಂತೆ ತೇಯ್ದುಕೊಂಡು ಸಹಸ್ರ ಸಹಸ್ರಾರು ದೊಂದಿಗಳಿಗೆ ಜೀವ - ಜೀವನದ ತೈಲವನೆರೆದು ಅವರ ಬದುಕಿಗೆ ಬೆಳಕು, ಪರಿಮಳ ಕರುಣಿಸಿದ ಬುದ್ಧಿಯವರನ್ನು 'ಧರೆಯಷ್ಟು ದೊಡ್ಡವರು' ಎಂದು ಧರೆಗೆ ಹೋಲಿಸುವುದು ತಪ್ಪಾಗುತ್ತದೆ; ಯಾಕೆಂದರೆ ಧರೆಯಲ್ಲಿ ಭೂಕಂಪಗಳಾಗುವುದನ್ನು ನಾವು ಕಂಡಿದ್ದೇವೆ, ಕೇಳಿದ್ದೇವೆ ಮತ್ತು ಓದಿದ್ದೇವೆ. ಧರೆಯ ಭೂಕಂಪದ ನೋವುಂಡವರನ್ನು ಸಂತೈಸುವ, ಸುನಾಮಿಪೀಡಿತ ಜನರಿಗೆ ಆಶ್ರಯ, ಬದುಕು ನೀಡುತ್ತಿರುವ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳಂಥ ಪರಂಪರೆಯನ್ನು ದಯಪಾಲಿಸಿರುವ ರಾಜೇಂದ್ರ ಬುದ್ಧಿಯವರು ಧರೆಗಿಂತ ದೊಡ್ಡವರು. ನಮೋ ನಮಃ ರಾಜೇಂದ್ರ ಬುದ್ಧಿ.

□

# ಶ್ರೀಗಂಧದ ಕೊರಡು

**ಡಾ. ಎಚ್.ಟಿ. ಶೈಲಜ**

ಶಿಕ್ಷಣದಿಂದ ಮನುಷ್ಯರನ್ನು, ಸಮಾಜವನ್ನು ಸುಧಾರಿಸಬಹುದೆಂಬ ಅತ್ಯುತ್ಕೃಷ್ಟವಾದ ಮುಂಗಾಣ್ಕೆಯಿಂದ ತಮ್ಮನ್ನು ತಾವೇ ಶಿಕ್ಷಣ ಕ್ಷೇತ್ರಕ್ಕೆ ಸಂಪೂರ್ಣವಾಗಿ ಸಮರ್ಪಿಸಿಕೊಂಡು ಶ್ರೀಗಂಧದ ಕೊರಡಿನಂತೆ ತೇಯ್ದುಕೊಂಡ ಮಹಾನುಭಾವರು ಸುತ್ತೂರು ಶ್ರೀಕ್ಷೇತ್ರದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ-ಗಳವರು.

ಕ್ರಿ.ಶ. 1900ನೇ ಇಸವಿ, ಸಮಾಜ ತನ್ನ ಹಿಂದಿನ ಶತಶತಮಾನಗಳ ಮರೆವು, ಅಜ್ಞಾನ ಅಂಧಕಾರಗಳ ಜಾಡ್ಯಗಳಿಂದ ಮೈಕೊಡವಿ ಶಿಕ್ಷಣದ ಮೂಲಕ ಕಣ್ಣು ಬಿಡುತ್ತಿದ್ದ ಕಾಲ. ಕೇವಲ ಮೈಸೂರು, ಬೆಂಗಳೂರುಗಳಂತಹ ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಉನ್ನತ ಶಾಲಾ ಕಾಲೇಜುಗಳಿದ್ದ ಕಾಲ. ಆಗ ಶಿಕ್ಷಣಕ್ಕಾಗಿ ಹಳ್ಳಿಗಳ ಮಕ್ಕಳು ಪಡುತ್ತಿದ್ದ ದುರವಸ್ಥೆಗಳು ಅಸದಳ. ಮೈಸೂರಿನ ಶಾಲಾ ಕಾಲೇಜುಗಳಲ್ಲಿ ಸೀಟು ಸಿಕ್ಕರೂ, ಅಶನ ವಸತಿಗಳಿಗೆ ವ್ಯವಸ್ಥೆಯಿಲ್ಲದೆ ಶಿಕ್ಷಣದಿಂದಲೇ ವಂಚಿತರಾಗಬೇಕಾದ, ವಂಚಿತರಾಗುತ್ತಿದ್ದ, ವಂಚಿತರಾದ ಮಕ್ಕಳು ಅಪಾರ ಸಂಖ್ಯೆಯಲ್ಲಿರುತ್ತಿದ್ದರು. ಅವರ ಬವಣೆಗಳನ್ನು ಕಂಡು, ಕೇಳಿದ ಪೂಜ್ಯರು ತಲ್ಲಣಿಸಿ ತಳಮಳಿಸುತ್ತಾರೆ. ಹಳ್ಳಿಗಳಲ್ಲಿ ತಾಂಡವವಾಡುತ್ತಿದ್ದ ಬಡತನ, ಮೌಢ್ಯ, ಅನಕ್ಷರತೆ, ನೋವು, ಸಂಕಷ್ಟ ಸರಮಾಲೆಗಳ ಅರಿವಿದ್ದ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಮಾತೃಹೃದಯದ ಅಂತಃಕರಣ ಅವರ ಏಳ್ಗೆಗಾಗಿ, ಆ ಮೂಲಕ ಸಮಾಜದ ಏಳ್ಗೆಗಾಗಿ ಚಡಪಡಿಸತೊಡಗುತ್ತದೆ.

ಹಳ್ಳಿಯಲ್ಲೇ ಹುಟ್ಟಿ ಬೆಳೆದ ಪೂಜ್ಯರು ತಮ್ಮ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿನಲ್ಲಿ ನೆಲೆಸಿರುವಾಗ ಅಲ್ಲಿಗೆ ಸುತ್ತಮುತ್ತಲ ಹಾಗೂ ದೂರದೂರದ ಹಳ್ಳಿಗಳಿಂದ ವಿದ್ಯಾಭ್ಯಾಸಕ್ಕಾಗಿ ಬಂದ ಮಕ್ಕಳು ನಾನಾ ರೀತಿಯಲ್ಲಿ ಪರದಾಡುವುದನ್ನು ಕಂಡು ಅವರ ಮನಸ್ಸು ಪರಿತಪಿಸುತ್ತದೆ; ಕರಗುತ್ತದೆ; ಚಿಂತಾಕ್ರಾಂತವಾಗುತ್ತದೆ. ಆಗಿನ್ನೂ ಅವರ ವಯಸ್ಸು ಕೇವಲ 12. ಆ ಕಿರಿವಯಸ್ಸಿಗೇ ಅವರ ಮನಸ್ಸು ಪರಿಪಕ್ವತೆಯ ಕಡೆಗೆ ಸಾಗುತ್ತಿರುವ ಸಾಧಕನ ಚೇತನವಾಗಿರುತ್ತದೆ. ಇದು ನಾಡಿನ ಜನಮನದ ಪುಣ್ಯದ ಫಲವೇ ಸರಿ. ತಾವು ವಿದ್ಯಾಭ್ಯಾಸ ಮಾಡುವಾಗಲೇ ಇತರರಿಗೆ ಸಹಾಯ ಮಾಡಬೇಕೆನ್ನುವ ಅವರ ಅಂತಃಕರಣ ತಾಯ್ತನವನ್ನೂ ಮೀರಿದುದಾಗಿರುತ್ತದೆ. ತಮ್ಮೊಡನೆ ಕೆಲವು ವಿದ್ಯಾರ್ಥಿಗಳಿಗೆ ಅಶನ ವಸತಿಗಳಿಗೆ ಅನುಕೂಲ ಮಾಡಿಕೊಡುತ್ತಾರೆ. ಆದರೆ ಅಷ್ಟಕ್ಕೇ ಅವರ ಮನಸ್ಸು ತೃಪ್ತವಾಗುವಂತಹದಲ್ಲ. ಅದು

ಅವರ ಹೃದಯದ ವೈಶಾಲ್ಯವನ್ನೂ ಆಳ ಅಗಲವನ್ನೂ ನಮಗೆ ತಿಳಿಸುತ್ತದೆ. ಇನ್ನೂ ಹೆಚ್ಚಿನ ಮಕ್ಕಳ ಆಶ್ರಯಕ್ಕಾಗಿ ತಮ್ಮ ಮಿತಿಮೀರಿ ಶ್ರಮಿಸಿ ಪರಿತಾಪ ಪಟ್ಟು ಸಾಲ ಮಾಡಿ ತಾವೇ ಒಂದು ಜೆಎಸ್‌ಎಸ್ ವಿದ್ಯಾರ್ಥಿನಿಲಯವನ್ನು ಮೊಟ್ಟಮೊದಲ ಬಾರಿಗೆ ಅನೇಕ ಸಂಕಷ್ಟ ಸವಾಲುಗಳ ನಡುವೆ ಸ್ಥಾಪಿಸಿದುದು ಕರ್ನಾಟಕದ ಇತಿಹಾಸದಲ್ಲಿಯೇ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದುದು. ಅದರಲ್ಲಿ ಕರ್ನಾಟಕದ ಮೂಲೆ ಮೂಲೆಗಳಿಂದಲೂ ಬಂದ ವಿದ್ಯಾರ್ಥಿಗಳು ವಾಸ್ತವ್ಯ ಪಡೆದು ತಮ್ಮ ಬದುಕನ್ನು ಕಟ್ಟಿಕೊಂಡರು; ಜೊತೆಗೆ ತನ್ಮೂಲಕ ನಾಡಿನ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದರು. ನಾಡಿನ ಗಣ್ಯ ಮಹನೀಯರ ಸಾಲಿನಲ್ಲಿ ವಿಜೃಂಭಿಸಿ ಪರಮಪೂಜ್ಯರ ಸಾಧನೆಗೆ ಸಾಕ್ಷಿಯಾದರು. ಅವರಲ್ಲಿ ನಮ್ಮ ತಂದೆ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರೂ ಒಬ್ಬರು. ಅವರು ತಮ್ಮ ಆರಂಭದ ಪ್ರಾಥಮಿಕ, ಮಾಧ್ಯಮಿಕ ತರಗತಿಗಳನ್ನು ಹೊನ್ನಾಳಿ, ಬಿಳಕಿ, ಆನವಟ್ಟಿ, ಶಿರಾಳಕೊಪ್ಪಗಳಲ್ಲಿ ಪೂರೈಸಿ, ಪ್ರೌಢಶಾಲೆಯನ್ನು ಶಿವಮೊಗ್ಗ, ತೀರ್ಥಹಳ್ಳಿಗಳಲ್ಲಿ ಪೂರೈಸಿ ಇಂಟರ್‌ಮೀಡಿಯೆಟ್‌ಅನ್ನು ಶಿವಮೊಗ್ಗದಲ್ಲಿ ಪೂರೈಸಿ ಮುಂದಿನ ಉನ್ನತ ಶಿಕ್ಷಣ ಬಿ.ಎ. ಆನರ್ಸ್ ಪದವಿ ತರಗತಿಗಾಗಿ ಮೈಸೂರಿಗೆ ಬಂದು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸೀಟನ್ನು ಪಡೆಯುತ್ತಾರೆ. ಆದರೆ ಅವರಿಗೆ ಮೈಸೂರಿನಲ್ಲಿ ಅಶನ ವಸತಿಗಳ ವ್ಯವಸ್ಥೆಯಿಲ್ಲದೆ ಕಂಗಾಲಾಗುತ್ತಾರೆ. ಆಗ ಅವರ ಓದಿಗೆ ಸಹಾಯಕರಾದವರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಅವರ ಮೈಸೂರಿನ ಜೆಎಸ್‌ಎಸ್ ವಿದ್ಯಾರ್ಥಿನಿಲಯದಲ್ಲಿ ಆಶ್ರಯವಿತ್ತು, ಅಪ್ಪಾಜಿ ಯವರ ಉನ್ನತ ವಿದ್ಯಾಭ್ಯಾಸಕ್ಕೆ ಪೂಜ್ಯರು ಸಹಕಾರ ನೀಡುತ್ತಾರೆ. ಆ ವಿದ್ಯಾರ್ಥಿನಿಲಯವನ್ನು ಕಟ್ಟಿ ಬೆಳೆಸುವಲ್ಲಿ ಪೂಜ್ಯರು ಪಟ್ಟ ಪರಿಶ್ರಮದ ಕತೆ ಮೈನವಿರೇಳಿಸುತ್ತದೆ.

ಅದು ಸ್ಥಾಪನೆಯಾದ ಕಾಲ ಎರಡನೆಯ ಮಹಾಯುದ್ಧದ ಆಸುಪಾಸು. ಆಗ ದೇಶ ಆಹಾರ ಪದಾರ್ಥಗಳ ಕೊರತೆಯಿಂದ ಪರಿತಪಿಸುತ್ತಿದ್ದ ಕಾಲ. ರೇಷನ್ನಿನಲ್ಲಿ ಆಹಾರಪದಾರ್ಥವನ್ನು ಪಡೆಯಬೇಕಾಗಿದ್ದ ಕಾಲ. ಅಂತಹ ಸಮಯದಲ್ಲಿ ನೂರಾರು ಬಡ ವಿದ್ಯಾರ್ಥಿಗಳ ಅಶನ ವಸತಿಗಳ ಹೊಣೆಯನ್ನು ಪೂಜ್ಯರು ಹೊತ್ತುಕೊಂಡಿದ್ದುದು ಅವರ ಶಿಕ್ಷಣಪ್ರೇಮಕ್ಕೆ, ಮಾತೃಹೃದಯಕ್ಕೆ, ಸಮಾಜೋದ್ಧಾರದ ಕಾಳಜಿಗೆ, ಅವರ ಕರ್ತೃತ್ವಶಕ್ತಿಗೆ, ಧೈರ್ಯಕ್ಕೆ, ಪರೋಪಕಾರಕ್ಕೆ ಉಜ್ವಲವಾದ ಜ್ವಲಂತ ಸಾಕ್ಷಿಯಾಗಿದೆ. ಅದಕ್ಕಾಗಿ ಅವರು ಪಡುತ್ತಿದ್ದ ಬವಣೆಗಳು ಅಪಾರ. ಆ ವಿದ್ಯಾರ್ಥಿನಿಲಯವನ್ನು ನಡೆಸಲು ತಾವು ಪಡುತ್ತಿದ್ದ ಕಷ್ಟಪರಂಪರೆಗಳನ್ನು ತಾವೊಬ್ಬರೇ ಅನುಭವಿಸುತ್ತ, ಅದರ ಕಿಂಚಿತ್ತು ಬಿಸಿಯೂ ಓದುವ ಮಕ್ಕಳಿಗೆ ತಾಕದಂತೆ ಎಚ್ಚರ ವಹಿಸಿ ಓದುವ ಮಕ್ಕಳನ್ನು ಅವರು ಪೋಷಿಸುತ್ತಿದ್ದ ರೀತಿ ಅನನ್ಯವಾದುದು. ಇಂತಹ ಪೂಜ್ಯರ ಮಾತೃಹೃದಯದ ವಾತ್ಸಲ್ಯದಲ್ಲಿ ಮಿಂದವರು ನಮ್ಮ ಅಪ್ಪಾಜಿ. ಅವರು 1947-48 ರಿಂದ 1951-52 ರವರೆಗೆ ತಮ್ಮ ಬಿ.ಎ. ಆನರ್ಸ್ ಹಾಗೂ ಎಂ.ಎ. ಪದವಿಗಳನ್ನು ಪೂಜ್ಯರ ಆಶ್ರಯದಲ್ಲಿಯೇ ಪೂರೈಸಿದರು.

ಹೀಗೆ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಕರಾಗುವ ಮೂಲಕ ಅವರ ವ್ಯಕ್ತಿತ್ವ ವಿಕಾಸಕ್ಕೆ ಪೂಜ್ಯರು ಕಾರಣೀಭೂತರಾದರು. ಆ ಮೂಲಕ ಸಮಾಜೋದ್ಧಾರಕ್ಕೆ ಅಪ್ಪಾಜಿಯವರಂತಹ ನೂರಾರು ಅಪೂರ್ವ ಮಣಿರತ್ನಗಳನ್ನು ತಮ್ಮ ವಿದ್ಯಾರ್ಥಿನಿಲಯದ ಮೂಲಕ ಕೊಡುಗೆಯಾಗಿ ನೀಡಿದ ಕೀರ್ತಿ ಪರಮಪೂಜ್ಯರದಾಗಿದೆ. ಹೀಗೆ ಪೂಜ್ಯರಿಂದ ಬದುಕು ಕಟ್ಟಿಕೊಂಡವರ ಸಂಖ್ಯೆ ನಾಡಿನುದ್ದಗಲಕ್ಕೂ ವ್ಯಾಪಿಸಿದೆ; ಅದು ಅಪರಿಮಿತವಾಗಿದೆ. ಅಪ್ಪಾಜಿಯವರ ಸಮಕಾಲೀನರಾಗಿ ಡಾ. ಪ್ರಭುಶಂಕರ, ಡಾ. ಎನ್. ಬಸವಾರಾಧ್ಯ, ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ, ಎಚ್. ಗಂಗಾಧರನ್ ಮೊದಲಾದವರು ಜೆಎಸ್‌ಎಸ್ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಾಗಿದ್ದರು. ಪೂಜ್ಯರಿಂದ ಆರಂಭವಾದ ಜೆಎಸ್‌ಎಸ್ ವಿದ್ಯಾರ್ಥಿನಿಲಯ ಮುಂದಿನ ದಿನಗಳಲ್ಲಿ ಮೈಸೂರಿನ ಇತರ ಕಡೆಗಳಲ್ಲೂ ಹಾಗೂ ಮೈಸೂರಿನ ಸುತ್ತಮುತ್ತಲ ಹಳ್ಳಿಹಳ್ಳಿಗಳಲ್ಲೂ ಅದರ ಶಾಖೆಗಳನ್ನು ಆರಂಭಿಸಿತ್ತು. ಆ ಮೂಲಕ ಪೂಜ್ಯರು ತಮ್ಮ ಕಾರ್ಯಕ್ಷೇತ್ರವನ್ನು ಬಹಳ ಬೇಗನೇ ವಿಸ್ತರಿಸಿಕೊಂಡರು. ಅದು ಅವರ ಧೀಶಕ್ತಿಗೂ, ವ್ಯಾಪಕ ಚಿಂತನೆಗೂ, ನೈಜ ಸಾಮಾಜಿಕ ಕಳಕಳಿಗೂ ದ್ಯೋತಕವಾಗಿದೆ.

ಜೆಎಸ್‌ಎಸ್ ವಿದ್ಯಾರ್ಥಿನಿಲಯಗಳಲ್ಲಿ ಓದಿದ ವಿದ್ಯಾರ್ಥಿಗಳು ಅತ್ಯುನ್ನತವಾದುದನ್ನು ಸಾಧಿಸಿದಾಗ ಅವರನ್ನು ಕರೆದು ಸಭೆ ಸಮಾರಂಭಗಳಲ್ಲಿ ಸನ್ಮಾನ ಮಾಡಿ ಗೌರವಿಸಿ ಅವರ ಬೆನ್ನು ತಟ್ಟುತ್ತಿದ್ದ ಪರಿ ಅದ್ಭುತವಾದುದು. ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಅವರನ್ನು ಬಹು ದೊಡ್ಡ ಮಟ್ಟದಲ್ಲಿ ಪೂಜ್ಯರು ಸನ್ಮಾನಿಸಿ, ಗೌರವಿಸಿದರು. ಅವರ ಜೀವನಪರ್ಯಂತ ಅವರ ಏಳುಬೀಳುಗಳೆರಡರಲ್ಲೂ ಅವರ ಹಿತಚಿಂತಕರಾಗಿದ್ದುಕೊಂಡು ಪೂಜ್ಯರು ಅವರನ್ನು ಪೋಷಿಸಿದ್ದುದು ಅವರ ತಾಯ್ತನದ ದ್ಯೋತಕವಾಗಿದೆ. ಅಂತೆಯೇ ಅಪ್ಪಾಜಿಯವರೂ ಕೂಡ ಪೂಜ್ಯರ ಆಪ್ತ ವಲಯದಲ್ಲಿ ಒಬ್ಬರಾಗಿದ್ದುಕೊಂಡು ಪೂಜ್ಯರ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪೂಜ್ಯರೊಂದಿಗೆ ಅಪ್ಪಾಜಿಯವರೂ ಅಹರ್ನಿಶಿ ದುಡಿದುದು ಅವರ ಭಕ್ತಿಕೈಂಕರ್ಯವಾಗಿದೆ.

ಹೀಗೆ ಪರಸ್ಪರ ತಾಯ್ತನದ ಸವಿಯುಂಡ ಅಸಂಖ್ಯಾತ ಭಕ್ತರು ನಾಡಿನೆಲ್ಲೆಡೆ ಇಂದು ಚೆದುರಿದ್ದಾರೆ. ಅವರೆಲ್ಲರ ಅನುಭವದ ಮಾತುಗಳು ಪೂಜ್ಯರ ಬದುಕಿನ ಪುಟ ಪುಟಗಳನ್ನೂ ತೆರೆಯುವಂತಹುದು. ಮಠಕ್ಕೆ ಯಾರೇ ಗಣ್ಯರು ಬಂದರೂ ಅವರ ಸ್ವಾಗತಕ್ಕೆ ಅವರೊಂದಿಗೆ ಒಡನಾಡಲು ಪೂಜ್ಯರು ಅಪ್ಪಾಜಿಯವರನ್ನು ಹೇಳಿ ಕಳುಹಿಸಿ ಮಠಕ್ಕೆ ಕರೆಸಿಕೊಳ್ಳುತ್ತಿದ್ದರು.

ಮಠದ ಸರ್ವಾಂಗೀಣ ಅಭಿವೃದ್ಧಿಯ ಚಿಂತನೆಯಲ್ಲಿ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ರೂಪುರೇಷೆಯಲ್ಲಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ರಚನೆಯಲ್ಲಿ, ಇನ್ನೂ ರೂಪುಗೊಂಡಿರದ ಜೆಎಸ್‌ಎಸ್ ಆಧ್ಯಾತ್ಮಿಕ ಮಹಾ ವಿದ್ಯಾಲಯದ ಕರಡು ಪ್ರತಿ ಸಿದ್ಧಪಡಿಸುವಲ್ಲಿ ಇತ್ಯಾದಿ ನೂರಾರು ಕಾರ್ಯಕ್ರಮಗಳಲ್ಲಿ ಅಪ್ಪಾಜಿಯವರ ಚಿಂತನೆಗಳೂ ಯೋಜನೆಗಳೂ ಸೇರಿಕೊಂಡಿವೆಯೆಂದರೆ ತಪ್ಪಿಲ್ಲ.

ಹೀಗೆ ಪೂಜ್ಯರು ಶಿಷ್ಯರ, ಭಕ್ತರ ಪರಸ್ಪರ ಒಡನಾಟದೊಂದಿಗೆ ತಾವೂ ಬೆಳೆದು ಶಿಷ್ಯರನ್ನೂ ಬೆಳೆಸಿ ಸಮಾಜೋದ್ಧಾರಕ್ಕೆ ಕಾರಣೀಭೂತರಾದರು. ಅವರುಗಳ ನಡುವೆ ಮಾತಿಗೆ

ಮೀರಿದ ರಸಾನುಭವ, ಎರಡಿಲ್ಲದ ಅನನ್ಯ ಪ್ರೀತಿ, ವಿಶ್ವಾಸ, ನಂಬಿಕೆಗಳು ಹರಿದಾಡುತ್ತಿದ್ದುವು. ಪೂಜ್ಯರ ಇಂತಹ ಮಾತೃಪ್ರೀತಿಯ ಸವಿಯನ್ನುಂಡ ಭಕ್ತಕೋಟಿ ನಾಡಿನೆಲ್ಲೆಡೆ ಸಮಾಜ ಕಟ್ಟುವಲ್ಲಿ ಅಂದು ಇಂದು ನಿರತರಾಗಿದ್ದಾರೆ. ಪೂಜ್ಯರ ಮನದಾಳದ ಬಯಕೆಗಳಿಗೆ ಮೂರ್ತರೂಪ ಕೊಟ್ಟು ಸಾಕಾರಗೊಳಿಸುವ ಶಿಷ್ಯಬಂಧುಗಳಲ್ಲಿ ನಮ್ಮ ಅಪ್ಪಾಜಿಯವರೂ ಒಬ್ಬರಾಗಿದ್ದರು.

ಹೀಗೆ ಹಳ್ಳಿ ಹಳ್ಳಿಗಳಲ್ಲೂ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವ ಮೂಲಕ ಹಳ್ಳಿಯ ಮಕ್ಕಳು ತಂತಮ್ಮ ಊರಿನಲ್ಲೇ ವಿದ್ಯಾಭ್ಯಾಸವನ್ನು ಮಾಡಲು ಸದವಕಾಶವನ್ನು ಪೂಜ್ಯರು ಗ್ರಾಮಾಂತರ ಗ್ರಾಮೀಣ ಮಕ್ಕಳಿಗೆ ಒದಗಿಸಿಕೊಟ್ಟುದು ಅವರ ಸಾಮಾಜಿಕ ಅನುಕಂಪೆಯ ಪ್ರತಿಫಲವಾಗಿದೆ. ಈ ಮೂಲಕ ದೂರದೂರಿಗೆ ಬರಲಾಗದ ಮಕ್ಕಳಿಗೂ ಶಿಕ್ಷಣದ ಸುವರ್ಣಾವಕಾಶವನ್ನು ಪೂಜ್ಯರು ಒದಗಿಸಿದುದು ಆ ಮಕ್ಕಳ ಪುಣ್ಯವೇ ಸರಿ. ಮೊದಲಿಗೆ ವಿದ್ಯಾರ್ಥಿನಿಲಯಗಳ ಸ್ಥಾಪನೆಯೊಂದಿಗೆ ಆರಂಭವಾದ ಪೂಜ್ಯರ ಸೇವಾಕೈಂಕರ್ಯ ಅನಂತರ ಹಳ್ಳಿಹಳ್ಳಿಗಳಲ್ಲೂ ಶಾಲಾ ಕಾಲೇಜುಗಳ ಸ್ಥಾಪನೆಯ ಅಗತ್ಯತೆಯ ಕಡೆಗೆ ಹರಿದುದು ನಾಡಿನ ಭಾಗ್ಯವಿಶೇಷವಾಗಿದೆ. ವಿದ್ಯಾರ್ಥಿನಿಲಯಗಳ ಸ್ಥಾಪನೆಗಳಂತೆ ಕ್ರಮೇಣ ಅಲ್ಲೆಲ್ಲ ಶಾಲಾ ಕಾಲೇಜುಗಳ ಅಗತ್ಯತೆಯನ್ನು ಮನಗಂಡ ಪೂಜ್ಯರು ತಮ್ಮಲ್ಲಿ ಯಾವ ಹೆಚ್ಚಿನ ಸೌಲಭ್ಯಗಳೂ ಇರದಿದ್ದರೂ ದೇವರ ಮೇಲೆ ಭಾರ ಹಾಕಿ ಭಕ್ತರ ಸಹಕಾರ ಒತ್ತಾಸೆಗಳಿಂದ ಶಾಲಾ ಕಾಲೇಜುಗಳನ್ನು ಸ್ಥಾಪಿಸುತ್ತ ಹೋದುದು ವಿದ್ಯಾರ್ಥಿ ನಿಲಯಗಳ ಸ್ಥಾಪನೆಗಳಂತೆಯೇ ಅದ್ಭುತ, ರೋಮಾಂಚನಕಾರಿಯಾದ ರೋಚಕ ಕತೆಯಾಗಿದೆ. ಅವುಗಳೊಂದೊಂದರ ಚರಿತ್ರೆಯೂ ಮೈನವಿರೇಳಿಸುವಂತಹುದು. ಅದರಲ್ಲಿ 1960ರ ದಶಕದಲ್ಲಿ ಮೈಸೂರಿನ ಸರಸ್ವತಿಪುರಂ ಬಡಾವಣೆಯಲ್ಲಿ ಆರಂಭವಾದ ನಮ್ಮ ಶಾಲೆ ಜೆಎಸ್ಎಸ್ ಶಾಲೆಯ ಕತೆಯೂ ಸೇರಿದೆ.

ಅಂದು ಸರಸ್ವತಿಪುರಂ ಬಡಾವಣೆಯಲ್ಲಿದ್ದ ನವಜ್ಯೋತಿ ಸ್ಟುಡಿಯೋ ಖರೀದಿಗೆ ಬಂದಿತ್ತು. ದೂರದೃಷ್ಟಿಯನ್ನು ಹೊಂದಿದ್ದ ಪೂಜ್ಯರು ಬಹಳ ಮೌಲ್ಯವಾದ ಆ ಭೂಮಿಯನ್ನು ಕೊಳ್ಳುವ ಸಾಹಸವನ್ನು ಮಾಡುತ್ತಾರೆ. ಅನಂತರ ಆ ಭಾಗದಲ್ಲಿ ಯಾವುದೇ ಶಾಲಾ-ಕಾಲೇಜುಗಳಿಲ್ಲದಿದ್ದುದರಿಂದ ಅದನ್ನು ಪ್ರಾಥಮಿಕ, ಮಾಧ್ಯಮಿಕ ಶಾಲೆಯನ್ನಾಗಿ ಆರಂಭಕ್ಕೆ ಪರಿವರ್ತಿಸುತ್ತಾರೆ, ಅದು ಕ್ರಮೇಣ ಮುಂದುವರಿದು ಅಲ್ಲೇ ಕ್ರಿಶೆ, ಪ್ರೌಢಶಾಲೆ, ಡಿಎಡ್ ಕಾಲೇಜು, ಪದವಿಪೂರ್ವ ಕಾಲೇಜು, ಪದವಿ ಕಾಲೇಜು, ನರ್ಸಿಂಗ್ ಕಾಲೇಜು, ಉದ್ಯೋಗಿ ಮಹಿಳೆಯರ ವಸತಿನಿಲಯ ಹಾಗೂ ವಿದ್ಯಾರ್ಥಿಗಳ ವಸತಿನಿಲಯಗಳೊಂದಿಗೆ, ಬುದ್ಧಿಮಾಂದ್ಯ ಮಕ್ಕಳ ಸಹನಾ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳೊಂದಿಗೆ ಕೂಡಿ ಇಂದು ಜೆಎಸ್ಎಸ್ ಬಾಲಕಿಯರ ಸಂಸ್ಥೆಗಳ ವಿಸ್ತೃತ ಸಮುಚ್ಚಯವಾಗಿ ರೂಪುಗೊಂಡಿರುವುದು ನಾಡು ಹೆಮ್ಮೆಪಡುವ ವಿಚಾರವಾಗಿದೆ. ಹುಟ್ಟಿದ ಹೆಣ್ಣುಮಗುವೊಂದು ಇಲ್ಲಿ ದಾಖಲಾದರೆ ಅದು ಪದವೀಧರಳಾಗಿ ಹೊರಹೋಗುವ ಎಲ್ಲಾ ಸೌಕರ್ಯಗಳನ್ನೂ ಇಲ್ಲಿ ಒದಗಿಸಿಕೊಟ್ಟಿರುವುದು ಪೂಜ್ಯರ ದೂರದೃಷ್ಟಿಯ ಫಲವೇ ಆಗಿದೆ. ಹೆಣ್ಣುಮಕ್ಕಳ

ವಿದ್ಯಾಭ್ಯಾಸದ ಕಡೆಗೂ ವಿಶೇಷವಾಗಿ ಪೂಜ್ಯರು ಗಮನಹರಿಸಿದುದರ ಫಲವೇ ಸರಸ್ವತಿಪುರಂನ ಈ ಜೆಎಸ್ಎಸ್ ಶಿಕ್ಷಣ ಸಮುಚ್ಚಯವಾಗಿದೆ.

ಅಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ವಾಸ್ತವ್ಯ ಗನ್‌ಹೌಸ್ ಎದುರಿನ ಇಂದಿನ ಜೆಎಸ್ಎಸ್ ಮಹಾವಿದ್ಯಾಪೀಠವೇ ಜೆಎಸ್ಎಸ್ ಮಠವಾಗಿತ್ತು. ಆದಿಜಗದ್ಗುರುಗಳ ಜಯಂತಿ ಮಹೋತ್ಸವದ ಆಚರಣೆಗಳ ಪ್ರಾರಂಭ ಅದೇ ಮಠದಲ್ಲಾಗುತ್ತಿತ್ತು. ಮುಂದಿನ ಸಭಾಕಾರ್ಯಗಳೆಲ್ಲಾ ಅಲ್ಲೇ ಮುಂದೆ ಆನೆಕರೋಟಿಯಲ್ಲಿದ್ದ ಜೆಎಸ್ಎಸ್ ಮೇನ್ ಕಾಲೇಜಿನಲ್ಲಿ ನಡೆಯುತ್ತಿದ್ದವು. ಅದು ಸುಮಾರು ಹತ್ತು ದಿನಗಳವರೆಗೂ ನಿರಂತರವಾಗಿ ನಡೆಯುತ್ತಿತ್ತು. ಪ್ರತಿ ನಿತ್ಯ ಬೆಳಿಗ್ಗೆ ಷಟ್‌ಸ್ಥಲ ಧ್ವಜಾರೋಹಣ, ಬೆಳಗಿನ ಪೂಜೆ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತಿದ್ದವು. ಅನಂತರ ಸಂಜೆ ಪ್ರತಿ ದಿನ ವಿವಿಧ ವಿಷಯಗಳ ಬಗ್ಗೆ ಗಣ್ಯರಿಂದ ಪೂಜ್ಯರ ಸಮ್ಮುಖದಲ್ಲಿ ಉಪನ್ಯಾಸ ಹಾಗೂ ಸಂಸ್ಥೆಯ ವಿವಿಧ ಶಾಲಾ ಕಾಲೇಜುಗಳ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು.

ವರ್ಷಕ್ಕೊಮ್ಮೆ ನಡೆಯುವ ಈ ಸಿಂಹಾಸನಾರೋಹಣ ದೃಶ್ಯವನ್ನು ಸಾಕ್ಷೀಕರಿಸಲು ನಾಡಿನ ವಿವಿಧೆಡೆಗಳಿಂದ ಭಕ್ತರು, ಕಲಾಸಾಹಿತ್ಯಾಭಿಮಾನಿಗಳು, ಸಂಸ್ಕೃತಿಪ್ರಿಯರು, ಶಿಷ್ಯರು, ನಾಡಿನ ವಿವಿಧ ಮಠಾಧೀಶರುಗಳು, ಹರಗುರುಚರಮೂರ್ತಿಗಳೆಲ್ಲರೂ ಅಂದು ಅಲ್ಲಿ ಸೇರುತ್ತಿದ್ದರು. ಆ ದೇವಲೋಕದ ವೈಭವವನ್ನು ನಾವೂ ಕೂಡಾ ಕಣ್ತುಂಬಿಕೊಂಡು ಮನದುಂಬಿಕೊಂಡು ಸಂತೃಪ್ತರಾಗುತ್ತಿದ್ದೆವು. ಪೂಜ್ಯರು ಅಂದು ನಾನಾ ಮಣಿರತ್ನಗಳಿಂದ ಶೋಭಿತವಾದ ಅತ್ಯಪೂರ್ವವಾದ ಚಿನ್ನದ ಕಿರೀಟವನ್ನು ತಲೆಗೆ ಧರಿಸಿ, ಚಿನ್ನದ ಹೊದಿಕೆಯ ರುದ್ರಾಕ್ಷಿಸರಗಳಿಂದ ಶೋಭಿತರಾಗಿ, ಕಾವಿಯ ರೇಷ್ಮೆವಸ್ತ್ರಗಳಿಂದ ಶೋಭಿತರಾಗಿ ಭಕ್ತರಿಗೆ ಅಭಿಮಾನಿಗಳಿಗೆ ನಮಗೆಲ್ಲ ದರ್ಶನ ಕೊಡುತ್ತಿದ್ದರು.

ಸರ್ಕಾರದ ನಿಯಮಗಳ ಹಿನ್ನೆಲೆಯಲ್ಲಿ ಪೂಜ್ಯರು ಭಕ್ತರನ್ನು ಮರೆಯದೆ ಅವರಿಗೂ ನ್ಯಾಯ ಸಲ್ಲಿಸುವ ಕಾರ್ಯವನ್ನು ಮಾಡುತ್ತಿದ್ದ ರೀತಿ ಅನನ್ಯವಾದುದು. ಅದು ಅಸಂಖ್ಯ ಭಕ್ತರೆಲ್ಲರ ನೌಕರರೆಲ್ಲರ ಮನದಾಳದಲ್ಲಿ ಇಂದಿಗೂ ಹಚ್ಚಹಸಿರಾಗಿರು ವುದು. ಒಬ್ಬೊಬ್ಬರ ಕತೆಯೂ ಪೂಜ್ಯರ ವ್ಯಕ್ತಿತ್ವದ ಅನಾವರಣವೇ ಆಗಿದೆ. ಬಂದ ಭಕ್ತರೆಲ್ಲರನ್ನೂ ಪೂಜ್ಯರು ನಗುಮೊಗದಿಂದ ಸ್ವಾಗತಿಸಿ, ಹೃದಯಾಂತರಾಳದಿಂದ ವಿಚಾರಿಸಿ ನಿಷ್ಕಲ್ಮಶ ಮನದಿಂದ ಬೀಳ್ಕೊಡುತ್ತಿದ್ದ ರೀತಿ ಅನ್ಯಾದೃಶವಾದುದು.

ಹೀಗೆ ನಾನು ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ಕೆಲಸಕ್ಕೆ ಸೇರಿದ ಮೇಲೆ ಜೆಎಸ್ಎಸ್ ಸಂಸ್ಥೆಯ ನೌಕರ ಬಂಧುವಾಗಿ ನಾನು ಕಂಡುಂಡ ರಸಾನುಭವಗಳು ಅನೇಕ. ಅದರಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಹುಟ್ಟುಹಬ್ಬದ ಸಂಭ್ರಮದಾಚರಣೆಯು ಸ್ಮರಣೀಯ ವಾದುದು. ಶಿಕ್ಷಣ ಕ್ಷೇತ್ರವನ್ನೇ ತಮ್ಮ ಬದುಕಿನ ಉಸಿರಾಗಿಸಿಕೊಂಡಿದ್ದ ಪರಮಪೂಜ್ಯರು

ತಮ್ಮ ಹುಟ್ಟುಹಬ್ಬದಂದು ಶಿಕ್ಷಣ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ತಮ್ಮ ಸಂಸ್ಥೆಯ ನೌಕರಬಂಧುಗಳೆಲ್ಲರನ್ನೂ ಪುನಶ್ಚೇತನಗೊಳಿಸುವುದಕ್ಕಾಗಿ ಮೂರು ದಿನಗಳ ಶೈಕ್ಷಣಿಕ ವಿಚಾರಸಂಕಿರಣ, ಕಾರ್ಯಾಗಾರ, ಸಮ್ಮೇಳನ ಅಥವಾ ಸಭಾಕಾರ್ಯಕ್ರಮಗಳನ್ನು ಆಯೋಜಿಸಿ ಹುಟ್ಟುಹಬ್ಬವನ್ನು ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ಅರ್ಥಪೂರ್ಣವಾಗಿ ಆಚರಿಸುತ್ತಿದ್ದರು. ಪರಮಪೂಜ್ಯರ ಕನಸಿನ ಕೂಸಾದ ಜೆಎಸ್‌ಎಸ್ ಸಂಸ್ಥೆಯ ಬಗ್ಗೆ ಅದರ ನೌಕರ ಬಂಧುಗಳ ಬಗ್ಗೆ ಪೂಜ್ಯರಿಗೆ ಎಲ್ಲಿಲ್ಲದ ಅಸೀಮವಾದ ಪ್ರೀತಿವಾತ್ಸಲ್ಯ. ಅದಕ್ಕಾಗಿಯೇ ಅವರ ಹುಟ್ಟುಹಬ್ಬದಂದು ವಿಚಾರಸಂಕಿರಣಗಳ ಸಡಗರ. ಆ ಮೂಲಕ ಸಂಸ್ಥೆಯ ನೌಕರಬಂಧುಗಳೆಲ್ಲರನ್ನೂ ಒಂದೆಡೆ ಸೇರಿಸಿ ನೌಕರರೆಲ್ಲರಲ್ಲಿ ಏಕತೆಯನ್ನು ಮೂಡಿಸುವ ಅದಮ್ಯ ಹಂಬಲ ಅವರದು. ಅದರಲ್ಲಿ ನಾನೂ ಕೂಡ ನೌಕರಬಂಧುವಾಗಿ ಭಾಗವಹಿಸಿ ಪಡೆದ ಅನುಭವ ವಿಶೇಷವಾದುದಾಗಿದೆ. ಸಂಸ್ಥೆ ಬೆಳೆದಂತೆ ನೌಕರ ಬಂಧುಗಳ ಸಂಖ್ಯೆಯೂ ಬೆಳೆಯುತ್ತ ಹೋಗಿತ್ತು. ಅವರೆಲ್ಲರನ್ನೂ ಪೂಜ್ಯರು ತಮ್ಮ ಹುಟ್ಟುಹಬ್ಬ ದಂದು ಒಂದೆಡೆ ಸೇರಿಸಿ ಅವರಲ್ಲಿ ನಾವೆಲ್ಲರೂ ಒಂದು ಸಂಸ್ಥೆಯವರು ಎಂಬ ಸೋದರತೆ, ಸೌಹಾರ್ದತೆಯನ್ನು ಬೆಳೆಯುವಂತೆ ಮಾಡಲು ಸತತವಾಗಿ ಪ್ರಯತ್ನಿಸು ತ್ತಿದ್ದರು. ಜೊತೆಗೆ ಜೆಎಸ್‌ಎಸ್ ಸಂಸ್ಥೆಯ ಕಾಯಕವೇ ಕೈಲಾಸ ಎಂಬಿತ್ಯಾದಿ ಧ್ಯೇಯೋದ್ದೇಶಗಳನ್ನು ಅದರ ನೌಕರಬಂಧುಗಳೆಲ್ಲರಿಗೂ ತಿಳಿಸುವ ಹರಸಾಹಸವನ್ನು ಮಾಡುತ್ತಿದ್ದರು. ಜೊತೆಗೆ ಎಲ್ಲಾ ನೌಕರಬಂಧುಗಳು ಅವರವರ ಕಾರ್ಯಕ್ಷೇತ್ರಗಳಲ್ಲಿ ಶ್ರದ್ಧೆ, ಆಸಕ್ತಿ, ಸಮರ್ಪಣಭಾವದಿಂದ ದುಡಿಯಬೇಕಾದ ಅಗತ್ಯತೆಯನ್ನು ತಿಳಿಸಲು ಹೆಣಗುತ್ತಿದ್ದರು. ಜ್ಯೋತಿಯು ಮತ್ತೊಂದು ಜ್ಯೋತಿಯನ್ನು ಬೆಳಗುವಂತೆ ಸ್ವಯಂಜ್ಯೋತಿಸ್ವರೂಪರಾದ ಪರಮಪೂಜ್ಯರು ತಮ್ಮ ಸಾಧನೆಯ ಹಾದಿಯತ್ತ ನೌಕರ ಬಂಧುಗಳೂ ತಿರುಗುವಂತೆ ಪ್ರೇರೇಪಿಸಲು ತಮ್ಮ ಹುಟ್ಟುಹಬ್ಬದ ಸದವಕಾಶವನ್ನು ಬಳಸಿಕೊಳ್ಳುತ್ತಿದ್ದುದು ನೌಕರ ಬಂಧುಗಳಾದ ನಮ್ಮ ಭಾಗ್ಯವಿಶೇಷವಾಗಿತ್ತು.

ಅವರ ತ್ಯಾಗಜೀವನ, ಸೇವಾವೃತ್ತಿ, ಸದುವಿನಯ, ಮೃದುವಚನಗಳು ನೌಕರರಾದ ನಮ್ಮೆಲ್ಲರನ್ನು ಮಂತ್ರಮುಗ್ಧಗೊಳಿಸುತ್ತಿತ್ತು. ಅವರು ಹಾಕಿಕೊಟ್ಟ ದಾರಿಯಲ್ಲಿಯೇ ಮುನ್ನಡೆಯುತ್ತ ಬಂದಿರುವ ಇಂದಿನ ಪರಮಪೂಜ್ಯರಾದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸಂಸ್ಥೆಯ ಎಲ್ಲ ಕಾರ್ಯ ಚಟುವಟಿಕೆಗಳನ್ನು ಮತ್ತಷ್ಟು ಪರಿಷ್ಕರಿಸುತ್ತ ಪರಿಪೂರ್ಣತೆಯೆಡೆಗೆ ದಾಪುಗಾಲು ಹಾಕುತ್ತಿದ್ದಾರೆ. ಜೊತೆಗೆ ಹಿಂದೆ ಕ್ರಮಿಸಿದ ದಾರಿಯನ್ನು, ಅದಕ್ಕೆ ಕಾರಣೀಭೂತರಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ನೆನಹನ್ನು ಹಸಿರಾಗಿಸಿರುವುದು ಮಾನವನ ಬಹು ದೊಡ್ಡ ಮೌಲ್ಯವಾಗಿದೆ. ಅದು ನಮ್ಮೆಲ್ಲರಿಗೂ ಮಾರ್ಗದರ್ಶಕವೂ ಆಗಿದೆ. ಶ್ರೀಗಂಧದ ಕೊರಡಿನಂತೆ ತೇಯ್ದುಕೊಂಡ ಪೂಜ್ಯರ ಬದುಕು ವಿಶ್ಲೇಷಿಸಿದಷ್ಟೂ ಸುವಾಸನೆಯನ್ನು ಹೊರಸೂಸುತ್ತಿದೆ. □

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಕಂಚುಗಲ್ ಬಂಡೇಮಠದ ಶ್ರೀ ಶಿವರುದ್ರ ಸ್ವಾಮಿಗಳ ಸಂಸ್ಮರಣೆ**

ಜುಲೈ 3ರಂದು ಮಾಗಡಿ ತಾಲ್ಲೂಕು ಕಂಚುಗಲ್‌ನ ಶ್ರೀ ಬಂಡೇಮಠದಲ್ಲಿ ಶ್ರೀ ಶಿವರುದ್ರ ಸ್ವಾಮಿಗಳ ಸಂಸ್ಮರಣೆ ಹಾಗೂ ಶ್ರೀ ಬಸವಲಿಂಗ ಸ್ವಾಮಿಗಳ ಚರಪಟ್ಟಾಧಿಕಾರದ ರಜತ ಮಹೋತ್ಸವ ಕಾರ್ಯಕ್ರಮವು ಪರಮಪೂಜ್ಯ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು. ಬಂಡೇಮಠ ಈ ಭಾಗದ ಶ್ರದ್ಧಾಕೇಂದ್ರಗಳಲ್ಲಿ ಒಂದಾಗಿದೆ. ಜನರ ಕಷ್ಟಕಾರ್ಪಣ್ಯಗಳಲ್ಲಿ ಭಾಗಿಯಾಗಿದೆ. ನೂರಾರು ವಿದ್ಯಾರ್ಥಿಗಳಿಗೆ ಆಶ್ರಯ ಒದಗಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿದೆ. ಇಲ್ಲಿಯ ಜನರಿಗೆ ಧಾರ್ಮಿಕ ಭಾವನೆಯನ್ನು ಕರುಣಿಸುವ ಕೆಲಸವನ್ನು ಶ್ರೀಮಠ ಮಾಡುತ್ತಿದೆ ಎಂದು ಪೂಜ್ಯರು ತಿಳಿಸಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು 1963ರಲ್ಲಿ ಶ್ರೀ ಶಿವರುದ್ರ ಸ್ವಾಮಿಗಳು ಈ ಭಾಗದಲ್ಲಿ ಶಾಲೆಯನ್ನು ಆರಂಭಿಸಿ ಶಿಕ್ಷಣ ನೀಡಿದ ಫಲವಾಗಿ ಇಂದು ಲಕ್ಷಾಂತರ ಮಂದಿ ಉನ್ನತ ಜೀವನ ಸಾಗಿಸುತ್ತಿದ್ದಾರೆ. ಶ್ರೀಗಳು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದರು. ಭಕ್ತರ ಮನ ಮತ್ತು ಮನೆ ಬೆಳಗುವಂತೆ ಮಾಡಿದ್ದರು ಎಂದು ಸ್ಮರಿಸಿದರು.

ಮಹಾಸಭಾದ ಅಧ್ಯಕ್ಷರಾದ ಶ್ರೀ ಶಾಮನೂರು ಶಿವಶಂಕರಪ್ಪನವರು ಸುತ್ತೂರು, ಸಿದ್ಧಗಂಗೆ ಮತ್ತು ಸಿರಿಗೆರೆಯಂತಹ ಮಠಗಳು ತ್ರಿವಿಧ ದಾಸೋಹ ಮಾಡುವ ಮೂಲಕ ನಾಡಿನ ಲಕ್ಷಾಂತರ ಜನರಿಗೆ ದಾರಿದೀಪವಾಗಿವೆ ಎಂದರು.

ಕೆಪಿಸಿಸಿ ಅಧ್ಯಕ್ಷರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಸರ್ಕಾರ ಮಾಡಲಾಗದ್ದನ್ನು ನಾಡಿನ ಮಠಮಾನ್ಯಗಳು ಮಾಡಿವೆ. ಮಠಗಳು ಸಂಸ್ಕಾರ ನೀಡುತ್ತವೆ ಮತ್ತು ಜಾತ್ಯತೀತ ಮನೋಭಾವನೆಯನ್ನು ಬೆಳೆಸುವಲ್ಲಿ ನಿರತವಾಗಿವೆ ಎಂದು ಹೇಳಿದರು.

ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಸುತ್ತೂರು–ಸಿದ್ಧಗಂಗೆಯಲ್ಲಿ ಅಭ್ಯಾಸ ಮಾಡಿದವರು ದೇಶ–ವಿದೇಶಗಳಲ್ಲಿ ನೆಮ್ಮದಿಯುತ ಜೀವನ ನಡೆಸುತ್ತಿದ್ದಾರೆ. ಕೋವಿಡ್ ವೇಳೆಯಲ್ಲಿ ಮೃತಪಟ್ಟ ಪೋಷಕರ ಮಕ್ಕಳಿಗೆ ಉಚಿತ ಶಿಕ್ಷಣ ನೀಡಿದ ಸುತ್ತೂರು ಶ್ರೀಗಳ ಸೇವೆ ಅನನ್ಯ ಎಂದು ತಿಳಿಸಿದರು.

ಕನಕಪುರ, ಬೇಲಿಮಠ, ಮಹಾಂತೇಶ್ವರ ಗದ್ದಿಗೆ ಮಠ, ಪವಾಡ ಬಸವಣ್ಣದೇವರ ಮಠ, ಬೆಟ್ಟಹಳ್ಳಿ ಮಠ, ಗುರುವಣ್ಣ ದೇವರ ಮಠ, ನಿಜಗುಣ ಜಂಗಮ ಮಠ, ಕಂಬಾಳು ಮಠದ ಶ್ರೀಗಳು, ಬಿಡಿಎ ಅಧ್ಯಕ್ಷರು ಹಾಗೂ ಶಾಸಕರುಗಳಾದ ಶ್ರೀ ಎಸ್.ಆರ್. ವಿಶ್ವನಾಥ್, ಶ್ರೀ ಎಂ.ಬಿ. ಪಾಟೀಲ್, ಡಾ. ಶ್ರೀನಿವಾಸಮೂರ್ತಿ, ಶ್ರೀ ಎಸ್. ರವಿ, ಶ್ರೀ ಅ. ದೇವೇಗೌಡ, ಮಾಜಿ ಶಾಸಕರುಗಳಾದ ಶ್ರೀ ಹೆಚ್.ಸಿ. ಬಾಲಕೃಷ್ಣ, ಶ್ರೀ ಎಂ.ವಿ. ನಾಗರಾಜು, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ, ಚಲನಚಿತ್ರ ಕಲಾವಿದರಾದ ಶ್ರೀ ದೊಡ್ಡಣ್ಣ, ಮಾಜಿ ಮೇಯರ್ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ್, ಶ್ರೀ ನರಸಿಂಹಮೂರ್ತಿ, ಶ್ರೀ ಎನ್. ಶ್ರೀನಿವಾಸ್, ಶ್ರೀ ಜಯವಿಭವಸ್ವಾಮಿ, ಶ್ರೀ ಗಂಗಾಧರ ಸ್ವಾಮಿ, ಶ್ರೀ ಶಿವರುದ್ರಯ್ಯ, ಶ್ರೀ ಆರ್. ಸಿದ್ಧಗಂಗಪ್ಪ, ಡಾ. ಸೋಮನಾಥ್, ಡಾ. ಹೆಚ್.ಎಸ್. ನರೇಂದ್ರ, ಶ್ರೀ ಬಿ.ಎಂ. ಕರುಣೇಶ್, ಶ್ರೀ ಎನ್.ಪಿ. ದಯಾನಂದ, ಡಾ. ಪರಮೇಶ್, ಶ್ರೀ ಪಟೇಲ್ ಶಿವರುದ್ರಪ್ಪ ಮೊದಲಾದವರುಗಳು ಉಪಸ್ಥಿತರಿದ್ದರು.

**ಮೃಗಾಲಯಕ್ಕೆ ಪೂಜ್ಯರ ಭೇಟಿ**

ಜುಲೈ 3ರಂದು ಪರಮಪೂಜ್ಯ ಜಗದ್ಗುರುಗಳವರು ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡಿದರು. ಅತ್ಯುತ್ತಮ ನಿರ್ವಹಣೆಯಿಂದಾಗಿ ಮೈಸೂರಿನ ಮೃಗಾಲಯ ದೇಶದಲ್ಲಿಯೇ ಮಾದರಿ ಮೃಗಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ಮೈಸೂರಿಗರು ಹೆಮ್ಮೆಪಡುವ ಸಂಗತಿಯಾಗಿದೆ. ದೇಶ–ವಿದೇಶಗಳ ಪ್ರಾಣಿ–ಪಕ್ಷಿಗಳನ್ನು ತಂದು ಇಲ್ಲಿ ರಕ್ಷಣೆ ಮಾಡುತ್ತಿರುವುದು ಮಾತ್ರವಲ್ಲದೆ. ಅವುಗಳ ಸಂತತಿ ವೃದ್ಧಿಯ ಮೂಲಕವೂ ಪ್ರವಾಸಿಗರಿಗೆ ಮುದದ ವಾತಾವರಣ ಕಲ್ಪಿಸುತ್ತಿರುವುದು ಶ್ಲಾಘನೀಯ ಎಂದರು.

ಇದೇ ಸಂದರ್ಭದಲ್ಲಿ ಮೃಗಾಲಯದ ಭೇಟಿಯ ನೆನಪಿಗಾಗಿ ಪೂಜ್ಯರು ಸಸಿ ನೆಟ್ಟರು ಮತ್ತು ಮೃಗಾಲಯದ ವತಿಯಿಂದ ಇಟ್ಟಿಗೆಗೂಡು ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ಮತ್ತು ಸಮವಸ್ತ್ರ ವಿತರಿಸಲಾಯಿತು. ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಲ್.ಆರ್. ಮಹದೇವಸ್ವಾಮಿ, ಸದಸ್ಯರಾದ ಶ್ರೀ ಬಿ.ಪಿ. ರವಿ, ಶ್ರೀಮತಿ ಜ್ಯೋತಿ ರೇಚಣ್ಣ, ಶ್ರೀ ಗೋಕುಲ್ ಗೋವರ್ಧನ್, ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅಜಿತ್ ಕುಲಕರ್ಣಿ, ಡಿಡಿಪಿಐ ಶ್ರೀ ರಾಮಚಂದ್ರರಾಜೇ ಅರಸ್, ಬಿಇಓ ಶ್ರೀ ರಾಮಾರಾಧ್ಯ, ಮುಖ್ಯಶಿಕ್ಷಕರಾದ ಶ್ರೀ ಮಾಲಂಗಿ ಸುರೇಶ್ ಮೊದಲಾದವರುಗಳು ಉಪಸ್ಥಿತರಿದ್ದರು.

**ಮೈಸೂರಿನೊಂದಿಗೆ ನಿಕಟವಾದ ಬಾಂಧವ್ಯವನ್ನು ಹೊಂದಿದ್ದ ಸ್ವಾಮಿ ವಿವೇಕಾನಂದರು**

ಸ್ವಾಮಿ ವಿವೇಕಾನಂದರು ಮೈಸೂರಿನೊಂದಿಗೆ ನಿಕಟವಾದ ಬಾಂಧವ್ಯವನ್ನು ಹೊಂದಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 6ರಂದು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ ನಿರ್ಮಿಸಲಾಗುತ್ತಿರುವ ಸ್ವಾಮಿ ವಿವೇಕಾನಂದ

ಸ್ಮಾರಕ ಸಾಂಸ್ಕೃತಿಕ ಯುವ ಕೇಂದ್ರ – ವಿವೇಕ ಸ್ಮಾರಕದ ಭೂಮಿಪೂಜೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ವಿವೇಕಾನಂದರು ಮೈಸೂರು ಅರಮನೆಯೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಮಹಾರಾಜರು ಅವರ ವಿದೇಶ ಪ್ರವಾಸಕ್ಕೂ ನೆರವಾದರು. ಇಂತಹ ಸ್ಥಳದಲ್ಲಿ ಸ್ಮಾರಕ ನಿರ್ಮಾಣವಾಗುತ್ತಿರುವುದು ಐತಿಹಾಸಿಕ ಕ್ಷಣವಾಗಿದೆ. ಯುವ ಸಮುದಾಯದ ಮಾರ್ಗದರ್ಶಿ ಕೇಂದ್ರವಾಗಿ ಸ್ಮಾರಕ ರೂಪುಗೊಳ್ಳಲಿ ಎಂದು ಹಾರೈಸಿದರು.

ಆಶ್ರಮದ ಶ್ರೀ ಮುಕ್ತಿದಾನಂದಜೀ ಮಹಾರಾಜ್, ಆದಿಚುಂಚನಗಿರಿ ಶಾಖಾಮಠದ ಶ್ರೀ ಸೋಮೇಶ್ವರನಾಥ ಸ್ವಾಮಿಗಳು, ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್, ಸಂಸದರಾದ ಶ್ರೀ ಪ್ರತಾಪ ಸಿಂಹ, ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಎಸ್.ಎ. ರಾಮದಾಸ್, ಶ್ರೀ ಎಲ್. ನಾಗೇಂದ್ರ, ಡಾ. ಯತೀಂದ್ರ ಸಿದ್ದರಾಮಯ್ಯ, ಮೇಯರ್ ಶ್ರೀಮತಿ ಸುನಂದ ಪಾಲನೇತ್ರ, ಸಾಹಿತಿಗಳಾದ ಡಾ. ಎಸ್.ಎಲ್. ಭೈರಪ್ಪ, ಶ್ರೀ ಸಿ.ಪಿ. ಕೃಷ್ಣಕುಮಾರ್ ಮೊದಲಾದವರುಗಳು ಉಪಸ್ಥಿತರಿದ್ದರು.

**ಕನ್ನಡ ನಾಡು–ನುಡಿ ಉಳಿವಿಗೆ ಮಠಗಳ ಕೊಡುಗೆ ಗಣನೀಯವಾದುದು**

ಕನ್ನಡ ನಾಡು–ನುಡಿಗಳ ಉಳಿವಿಗೆ ಮಠಗಳ ಕೊಡುಗೆ ಗಣನೀಯವಾದುದು ಎಂದು ಸಾಹಿತಿಗಳಾದ ಶ್ರೀ ಕುಂ. ವೀರಭದ್ರಪ್ಪನವರು ಜುಲೈ 9ರಂದು ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಮತ್ತು ನಗರ ಘಟಕದ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಅಥಣಿ ಶ್ರೀ ಮೋಟಗಿಮಠದ ಶ್ರೀ ಪ್ರಭುಚನ್ನಬಸವ ಸ್ವಾಮಿಗಳವರು ರಚಿಸಿರುವ "ಮಹಾತ್ಮರ ಚರಿತಾಮೃತ" ಕೃತಿಯನ್ನು ಲೋಕಾರ್ಪಣೆಗೊಳಿಸಿ ಹೇಳಿದರು. ಮಠಗಳು ಇಲ್ಲದೇ ಇದ್ದಿದ್ದರೆ ನಾನು ಇಂದು ಕುಂ. ವೀರಭದ್ರಪ್ಪನಾಗುತ್ತಿರಲಿಲ್ಲ. ಕೆಲವು ಕಟ್ಟುಪಾಡುಗಳಿಗೆ ಸೀಮಿತನಾಗಿ ಉಳಿಯುತ್ತಿದ್ದೆ. ಮಠಗಳ ಅಕ್ಷರ ದಾಸೋಹದಿಂದ ನಾನು ಲೇಖಕನಾಗಿ ರೂಪುಗೊಂಡೆ. ಶೋಷಿತ ಸಮುದಾಯಗಳ ಅಭಿವೃದ್ಧಿಗೆ ಮಠಗಳ ಕೊಡುಗೆ ಅಪಾರವಾದುದು. ಬಸವಣ್ಣನವರ ವಚನ ಸಾಹಿತ್ಯವನ್ನು ಜನಪ್ರಿಯಗೊಳಿಸಬೇಕು. ಜಗತ್ತಿಗೆ ಬಸವಣ್ಣನವರನ್ನು ಪರಿಚಯಿಸುವ ಕಾರ್ಯ ಆಗಬೇಕಿದೆ ಎಂದು ತಿಳಿಸಿದರು.

ಡಾ. ಎಂ.ಎನ್. ನಂದೀಶ್ ಹಂಚೆ ಕೃತಿ ಕುರಿತು ಮಾತನಾಡಿದರು. ಶ್ರೀ ಮೋಟಗಿಮಠದ ಶ್ರೀ ಪ್ರಭುಚನ್ನಬಸವ ಸ್ವಾಮಿಗಳು, ರಮಣಶ್ರೀ ಗ್ರೂಪ್‌ನ ಶ್ರೀ ಎಸ್. ಷಡಕ್ಷರಿಯವರು ಮಾತನಾಡಿದರು. ಶ್ರೀ ಶಂಕರ್ ದೇವನೂರು ಉಪಸ್ಥಿತರಿದ್ದರು. ಪಂ. ಕುಮಾರ ಕಣವಿ ಮತ್ತು ಶ್ರೀಮತಿ ಮಾಲಶ್ರೀ ಕಣವಿ ಪ್ರಾರ್ಥಿಸಿದರು.ಶ್ರೀ ಮ.ಗು. ಸದಾನಂದಯ್ಯ ಸ್ವಾಗತಿಸಿದರು. ಶ್ರೀ ಹೆಳವರಹುಂಡಿ ಸಿದ್ದಪ್ಪ ವಂದಿಸಿದರು. ಶ್ರೀಮತಿ ಭವಾನಿ ಕಾರ್ಯಕ್ರಮ ನಿರೂಪಿಸಿದರು.

## ಶಿವರಾತ್ರಿ ರಾಜೇಂದ್ರ ವೈಭವ ಕೃತಿ ಬಿಡುಗಡೆ

ಶಿವರಾತ್ರಿ ರಾಜೇಂದ್ರ ವೈಭವ ನೃತ್ಯರೂಪಕ ರಾಜೇಂದ್ರ ಶ್ರೀಗಳ ಸಾಧನೆಯನ್ನು ಬಿಂಬಿಸುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 9ರಂದು ಮೈಸೂರು ಸರಸ್ವತಿಪುರಂ ಜೆಎಸ್ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ 29ನೇ ವಾರ್ಷಿಕೋತ್ಸವ ಹಾಗೂ ಡಾ. ರತ್ನ ಹಾಲಪ್ಪಗೌಡರವರ 'ಶಿವರಾತ್ರಿ ರಾಜೇಂದ್ರ ವೈಭವ' ನೃತ್ಯ ರೂಪಕ ಚುಟುಕು ಕೃತಿಬಿಡುಗಡೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಚುಟುಕು ಸಾಹಿತ್ಯ ಪರಿಷತ್ತು ಮೂಲಕ ಅನೇಕ ಸಾಹಿತ್ಯ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಗುತ್ತಿದೆ. ಡಾ. ಎಂ.ಜಿ.ಆರ್. ಅರಸ್‌ರವರು ಇದಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುತ್ತಾ 29 ವರ್ಷಗಳನ್ನು ಪೂರೈಸಿರುವುದು ಸಂತಸದ ಸಂಗತಿ. ಅದರ ಕಾರ್ಯಗಳು ಹೀಗೆಯೇ ಸಾಗುತ್ತಿರಲಿ ಎಂದು ಪರಮಪೂಜ್ಯರು ಹಾರೈಸಿದರು.

ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿ ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು. ಮೇಯರ್ ಶ್ರೀಮತಿ ಸುನಂದ ಪಾಲನೇತ್ರ ಕಾರ್ಯಕ್ರಮ ಉದ್ಘಾಟಿಸಿದರು. ಡಾ. ಎಂ.ಜಿ.ಆರ್. ಅರಸ್ ಅಧ್ಯಕ್ಷತೆ ವಹಿಸಿದ್ದರು. ನಾಟ್ಯಮಯೂರಿ ಶ್ರೀಮತಿ ವಿ. ಮಾಲಿನಿಯವರನ್ನು ಸನ್ಮಾನಿಸಲಾಯಿತು. ಶ್ರೀ ತೋಂಟದಾರ್ಯ, ಶ್ರೀ ಮಡ್ಡಿಕೆರೆ ಗೋಪಾಲ್ ಮಾತನಾಡಿದರು. ಶ್ರೀಮತಿ ರತ್ನ ಹಾಲಪ್ಪಗೌಡ, ಶ್ರೀಮತಿ ಗಾಯತ್ರಿ ಕದಂಬ ಹಾಗೂ ಮಹಿಳಾ ಸಮಾಜದ ಸದಸ್ಯರುಗಳು ಉಪಸ್ಥಿತರಿದ್ದರು.

## ಯೋಗಿರಾಜ ಶ್ರೀ ತಿರುಮಲೆ ಕೃಷ್ಣಮಾಚಾರ್ಯ ಕೃತಿ ಬಿಡುಗಡೆ

ಮೈಸೂರಿನಲ್ಲಿ ಯೋಗ ಪ್ರವರ್ಧಮಾನಕ್ಕೆ ಬರಲು ಹಾಗೂ ಮೈಸೂರು ಯೋಗ ನಗರಿ ಎಂದು ಕರೆಸಿಕೊಳ್ಳಲು ಕೃಷ್ಣಮಾಚಾರ್ಯರು ಕಾರಣರಾಗಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 12ರಂದು ಮೈಸೂರು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಪೌಂಡರೀಕ ಸಭಾಂಗಣದಲ್ಲಿ ಯೋಗ ಶಿಕ್ಷಕರಾದ ಶ್ರೀ ಎನ್. ಅನಂತರವರು ರಚಿಸಿರುವ ಯೋಗಿರಾಜ ಶ್ರೀ ತಿರುಮಲೆ ಕೃಷ್ಣಮಾಚಾರ್ಯ ಕೃತಿ ಬಿಡುಗಡೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಕೃಷ್ಣಮಾಚಾರ್ಯರು ಯೋಗ ಮಾತ್ರವಲ್ಲದೆ ಅನೇಕ ಪ್ರಾಚೀನ ಕೃತಿಗಳನ್ನು ಅಧ್ಯಯನ ಮಾಡಿ, ವೇದಾಂತಗಳಲ್ಲಿಯೂ ಪರಿಣತಿಯನ್ನು ಪಡೆದಿದ್ದರು. ಯೋಗದ ಮೇಲೆ ಅಪಾರ ನಂಬಿಕೆಯುಳ್ಳವರಾಗಿದ್ದರು. ಹೆಚ್ಚಿನ ಅಧ್ಯಯನಕ್ಕೆ ಟಿಬೆಟ್‌ಗೆ ಹೋಗಬೇಕಾದ ಸಂದರ್ಭದಲ್ಲಿ ಅಂದಿನ ವೈಸ್‌ರಾಯ್ ಆಗಿದ್ದ ಲಾರ್ಡ್ ಇರ್ವಿನ್‌ರವರಿಗೆ ಯೋಗ ಚಿಕಿತ್ಸೆ ನೀಡಿ ಅನುಮತಿ ಪಡೆದಿದ್ದರು. ಮೈಸೂರು ಮಹಾರಾಜರ ಆಶ್ರಯದಲ್ಲಿ ಯೋಗಗುರುಗಳಾಗಿ ಅನೇಕರಿಗೆ ಯೋಗ ತರಬೇತಿ ನೀಡಿದ್ದರು ಎಂದು ಹೇಳಿದರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮಿಗಳು ವಿಶ್ವಶಾಂತಿಗಾಗಿ ಯೋಗ ಆವಶ್ಯಕ. ಯೋಗ ಮನಸ್ಸಿಗೂ ಹಾಗೂ ಬುದ್ಧಿಗೂ ಚುರುಕನ್ನು ನೀಡುತ್ತದೆ. ವಿದ್ಯಾರ್ಥಿಗಳು ಮುಖ್ಯವಾಗಿ ಯೋಗಾಭ್ಯಾಸದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಯೋಗದ ಕುರಿತಾಗಿ ಕನ್ನಡದ ಈ ಕೃತಿಯಲ್ಲಿ ಅನಂತರವರು ಎಲ್ಲ ವಿಷಯಗಳನ್ನು ಸಂಗ್ರಹಿಸಿದ್ದಾರೆ. ಈ ರೀತಿಯ ಇನ್ನೂ ಅನೇಕ ಕೃತಿಗಳು ಮೂಡಿಬರಬೇಕು ಎಂದರು.

ಮೂಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್, ಶ್ರೀ ರಘುರಾಂ ವಾಜಪೇಯಿ, ಡಾ. ಎಸ್.ಪಿ. ಯೋಗಣ್ಣ, ಡಾ. ಪಿ.ವಿ. ಫಣೀಶ್ರೀ, ಡಾ. ಬಿ.ಪಿ. ಮೂರ್ತಿ ಉಪಸ್ಥಿತರಿದ್ದರು. ಕಸಾಪ ಅಧ್ಯಕ್ಷರಾದ ಶ್ರೀ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಭರತ್ ಶೆಟ್ಟಿ ಕೃತಿ ಕುರಿತು ಮಾತನಾಡಿದರು.

**ಸಾಮಾಜಿಕ ಮೌಲ್ಯಗಳಿಗೆ ಒತ್ತು ನೀಡಿದ್ದ ಬಸವಣ್ಣನವರು**

ಆಚಾರ–ವಿಚಾರಗಳಲ್ಲಿ ಬಸವಣ್ಣನವರು ಧಾರ್ಮಿಕ ಮೌಲ್ಯಕ್ಕಿಂತ ಸಾಮಾಜಿಕ ಮೌಲ್ಯಗಳಿಗೆ ಹೆಚ್ಚಿನ ಒತ್ತನ್ನು ನೀಡಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 10ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಶಾಕಾಂಬರಿ ನಗರದ ಉದ್ಯಾನವನದಲ್ಲಿ ಸ್ಥಾಪಿಸಲಾಗಿರುವ ಬಸವೇಶ್ವರರ ಪುತ್ಥಳಿ ಅನಾವರಣದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಬಸವಣ್ಣನವರು ಇಷ್ಟಲಿಂಗ ಪೂಜೆಯ ಮೂಲಕ ಆತ್ಮವನ್ನು ಶುದ್ಧವಾಗಿಸುವ ಮಾರ್ಗವನ್ನು ಕಂಡುಕೊಂಡರು. ಅವರ ಪುತ್ಥಳಿಯನ್ನು ಇಲ್ಲಿ ಸ್ಥಾಪಿಸಿರುವುದು ಶ್ಲಾಘನೀಯವಾದುದು ಎಂದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮನುಷ್ಯನ ಅಂತರಂಗ ಮತ್ತು ಬಹಿರಂಗ ಶುದ್ಧಿ ಹೊಂದಲು ಬಸವಣ್ಣನವರ ವಚನಗಳು ಮುಖ್ಯವಾಗಿವೆ, ಮನುಷ್ಯ ಹೇಗೆ ಬಾಳಬೇಕು ಎಂದು ತಿಳಿಸಿವೆ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷರಾದ ಶ್ರೀ ಡಿ.ಕೆ. ಶಿವಕುಮಾರ್, ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಎಂ.ಬಿ. ಪಾಟೀಲ್ ಮಾತನಾಡಿದರು. ಶಾಸಕರಾದ ಶ್ರೀಮತಿ ಸೌಮ್ಯ ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ರಾಮಲಿಂಗಾರೆಡ್ಡಿ, ಮಾಜಿ ಮೇಯರ್ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ್, ಮಾಜಿ ಉಪಮೇಯರ್ ಶ್ರೀ ಪುಟ್ಟರಾಜು, ಪಾಲಿಕೆ ಮಾಜಿ ಸದಸ್ಯ ಶ್ರೀ ನಾಗರಾಜು ಉಪಸ್ಥಿತರಿದ್ದರು.

**ಸಾರ್ಥಕ್ಯದೆಡೆಗೆ ಕೊಂಡೊಯ್ಯುವವನೇ ಗುರು**

ವ್ಯಕ್ತಿಯ ಜೀವನವನ್ನು ಸಾರ್ಥಕ್ಯದೆಡೆಗೆ ಕೊಂಡೊಯ್ಯುವವನೇ ಗುರು ಎಂದು ಸಾಹಿತಿಗಳಾದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್‌ರವರು ತಿಳಿಸಿದರು. ಜುಲೈ

13ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಗುರುಪೂರ್ಣಿಮಾ ಹಾಗೂ 244ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ ಗುರು ಎಂದರೆ ಕೇವಲ ವ್ಯಕ್ತಿಯಲ್ಲ. ಗುರು ತತ್ತ್ವರೂಪದಲ್ಲಿ ಅಮೂರ್ತವಾಗಿಯೂ ಪ್ರಕಟವಾಗಬಹುದು. ಗುರುವಿನ ಬಗ್ಗೆ ಭಕ್ತಿ, ವಿಶ್ವಾಸ, ಶ್ರದ್ಧೆ ಎಲ್ಲವೂ ಮುಖ್ಯವಾಗಿರಬೇಕು. ಗುರು ಎಂದರೆ ಅಜ್ಞಾನ ಎನ್ನುವ ಕಣ್ಣಿ ತಿಮಿರವನ್ನು ಕಳೆಯುವ ಶಲಾಕೆ ಇದ್ದಂತೆ. ಗುರು ಪೂರ್ಣಿಮೆ ಎಲ್ಲ ಧರ್ಮೀಯರಿಗೂ ವಿಶೇಷವಾದುದು. ಬಸವಣ್ಣನವರು ಶಿವಪಥವನರಿವಡೆ ಗುರುಪಥವೇ ಮೊದಲು, ಶಿವನನ್ನು ಕಾಣಬೇಕಾದರೆ ಗುರುಪಥದಲ್ಲೇ ಸಾಗಬೇಕು ಎಂದಿದ್ದಾರೆ. ಅಲ್ಲಮಪ್ರಭುಗಳು ನಿನಗೆ ನೀನೆ ಗುರು ಎಂದು ಹೇಳಿದ್ದಾರೆ. ಜಗತ್ತನ್ನೇ ಜಯಸಿದ ಅಲೆಗ್ಸಾಂಡರ್ ತಂದೆ ನಮ್ಮನ್ನು ಭೂಮಿಗೆ ತಂದರೆ, ಗುರುಗಳು ನಮ್ಮನ್ನು ಬಾನಿನ ಎತ್ತರಕ್ಕೆ ಏರಿಸಿದವರು ಎಂದು ಹೇಳಿದ್ದಾನೆ. ವೇದವ್ಯಾಸರು ಅರ್ಥ ಮತ್ತು ಕಾಮಕ್ಕೆ ಧರ್ಮವೇ ಕಾರಣ ಆದರೆ ನಾವು ಧರ್ಮವನ್ನು ಮಾತ್ರ ಆರಾಧಿಸಬೇಕು. ಅರ್ಥ ಮತ್ತು ಕಾಮಗಳನ್ನು ಮಿತಿಯಲ್ಲಿಡಬೇಕು. ಆಗಲೇ ಬದುಕಿಗೆ ಒಂದು ಸಾರ್ಥಕ್ಯ ದೊರೆಯುತ್ತದೆ. ಜ್ಞಾನದ ಆಕರಗಳನ್ನು ಆರಾಧಿಸುವ ಮಾನಸಿಕ ಅನುಸಂಧಾನವನ್ನು ಎಲ್ಲರೂ ಮಾಡಿಕೊಳ್ಳಬೇಕು ಎಂದು ಹೇಳಿದರು.

ಉಪನ್ಯಾಸದ ನಂತರ 244ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಕಾಸರಗೋಡಿನ ವಿದ್ವಾನ್ ಗಾನಪ್ರವೀಣ ಯೋಗೀಶ ಶರ್ಮ ಬಳ್ಳಪದವು ಗಾಯನ ಪ್ರಸ್ತುತ ಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ಕೇಶವ್ ಮೋಹನ್‌ಕುಮಾರ್ ಮತ್ತು ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿಯವರು ಸಹಕಾರ ನೀಡಿದರು. ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು, ಶ್ರೀಮಠದ ಗುರುಕುಲದ ಸಾಧಕರು, ಸಿಬ್ಬಂದಿವರ್ಗದವರು ಪಾಲ್ಗೊಂಡಿದ್ದರು.

**ವನಸಿರಿ ವನಮಹೋತ್ಸವ**

ಮರ–ಗಿಡಗಳನ್ನು ಕಡಿಯುವಾಗ ತೋರುವ ಬುದ್ಧಿವಂತಿಕೆಯನ್ನು ಬೆಳೆಸಲು ಸಹ ತೋರಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 13ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ಹಾಗೂ ಹೆಚ್.ವಿ. ರಾಜೀವ್ ಸ್ನೇಹ ಬಳಗದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ವನಸಿರಿ–25 ಸಾವಿರ ಸಸಿ ನೆಡುವ ವನಮಹೋತ್ಸವ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ವಿದೇಶಗಳಲ್ಲಿ ಮನೆಗಳನ್ನು ಮರಗಳಿಂದಲೇ ನಿರ್ಮಿಸುತ್ತಾರೆ. ಆ ತರಹದ ಪರಿಸ್ಥಿತಿ ಭಾರತದಲ್ಲಿದ್ದಿದ್ದರೆ ಕಾಡನ್ನು ಚಿತ್ರಪಟಗಳಲ್ಲಿ ನೋಡುವ ಸನ್ನಿವೇಶ ಉಂಟಾಗುತ್ತಿತ್ತು. ಒಂದು ಮರ ಕಡಿದರೆ ಅದಕ್ಕೆ ಪರ್ಯಾಯವಾಗಿ ಹತ್ತು ಮರಗಳನ್ನು ನೆಟ್ಟು ಪೋಷಿಸಬೇಕು. ಪ್ರತಿಯೊಬ್ಬರಿಗೂ ಗಾಳಿ, ನೀರು, ಆಹಾರ

ಎಲ್ಲವೂ ಮುಖ್ಯ. ಇವು ಪ್ರಕೃತಿಯಿಂದ ಮಾತ್ರ ದೊರೆಯುತ್ತದೆ. ಆದ್ದರಿಂದ ಅವು ಎಂದಿಗೂ ನಾಶವಾಗದಂತೆ ನೋಡಿಕೊಳ್ಳುವ ಹೊಣೆ ಎಲ್ಲರ ಮೇಲಿದೆ ಎಂದು ಹೇಳಿದರು.

ಧರ್ಮಸ್ಥಳದ ಧರ್ಮಾಧಿಕಾರಿಗಳಾದ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಗಿಡ ನೆಡುವುದು ಮಾತ್ರ ಮುಖ್ಯವಲ್ಲ. ಅದನ್ನು ಸಂರಕ್ಷಿಸುವುದು ಅಷ್ಟೇ ಮುಖ್ಯ. ಈ ದಿಸೆಯಲ್ಲಿ ಪ್ರತಿಯೊಬ್ಬರೂ ಕೈ ಜೋಡಿಸಬೇಕು. ಮುಂದಿನ ಜನಾಂಗಕ್ಕೆ ಭೂಮಿಯನ್ನು ಸುಸ್ಥಿತಿಯಲ್ಲಿಡಬೇಕಾದ ಅಗತ್ಯವಿದೆ. ನೆಟ್ಟ ಸಸಿ ನಾಶವಾಗಬಾರದು. ಆ ರೀತಿ ಸಂರಕ್ಷಿಸಬೇಕು. ಸ್ವಚ್ಛನಗರಿ ಮೈಸೂರು ಹಸಿರು ರಾಜಧಾನಿಯೂ ಆಗಬೇಕು. ವೃಕ್ಷಗಳಲ್ಲಿಯೇ ದೇವರನ್ನು ಕಾಣಬೇಕು ಎಂದು ಹೇಳಿದರು.

ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀ ಹೆಚ್.ವಿ. ರಾಜೀವ್ ಅಧ್ಯಕ್ಷತೆ ವಹಿಸಿದ್ದರು. ಪಬ್ಲಿಕ್ ಟಿವಿ ಮುಖ್ಯಸ್ಥರಾದ ಶ್ರೀ ಹೆಚ್.ಆರ್. ರಂಗನಾಥ್ 'ಸಮಾಜಮುಖಿ' ಪುಸ್ತಕ ಲೋಕಾರ್ಪಣೆಗೊಳಿಸಿದರು. ಶ್ರೀ ಶಿವಾನಂದ ಕಳವೆ, ಶ್ರೀ ವಿನಯ್ ರಾಮಕೃಷ್ಣ, ಶ್ರೀ ವಿನೋದ್‌ಕುಮಾರ್ ಬಿ. ನಾಯ್ಕ್‌ರವರುಗಳಿಗೆ ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ರವೀಂದ್ರ ಭಟ್ 'ಸಿರಿ ಸಂವರ್ಧನ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಮೇಯರ್ ಶ್ರೀಮತಿ ಸುನಂದ ಪಾಲನೇತ್ರ, ಸಂಸದರಾದ ಶ್ರೀ ಪ್ರತಾಪ ಸಿಂಹ, ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಎಲ್. ನಾಗೇಂದ್ರ, ಶ್ರೀ ಸಿ.ಎನ್. ಮಂಜೇಗೌಡ, ಮುಡಾ ಸದಸ್ಯರುಗಳಾದ ಶ್ರೀಮತಿ ಲಕ್ಷ್ಮೀದೇವಿ, ಶ್ರೀ ಎಂ.ಎನ್. ನವೀನ್‌ಕುಮಾರ್, ಶ್ರೀ ಜಿ. ಲಿಂಗಯ್ಯ, ಶ್ರೀ ಕೆ. ಮಾದೇಶ್, ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಜಿ.ಡಿ. ಹರೀಶ್‌ಗೌಡ, ಶ್ರೀಮತಿ ಮಂಗಳ ಸೋಮಶೇಖರ್, ಶ್ರೀ ಲಕ್ಷ್ಮೀಕಾಂತ್ ರೆಡ್ಡಿ, ಡಾ. ಮಾಲತಿ ಪ್ರಿಯಾ, ಶ್ರೀಮತಿ ಕಮಲ ಕರಿಕಾಳನ್, ಶ್ರೀಮತಿ ಬಿ.ಆರ್. ಪೂರ್ಣಿಮ, ಶ್ರೀ ಜಿ.ಟಿ. ದಿನೇಶ್‌ಕುಮಾರ್‌ರವರುಗಳು ಉಪಸ್ಥಿತರಿದ್ದರು.

**ಹುಣಸೂರು ಬಸವ ಜಯಂತಿ**

ಹುಣಸೂರಿನಲ್ಲಿ ವೀರಶೈವ ಲಿಂಗಾಯತ ಮಹಾಸಭಾ ಮತ್ತು ಬಸವ ಸಮಿತಿ ವತಿಯಿಂದ ಜುಲೈ 14ರಂದು ಬಸವ ಜಯಂತಿಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿತು. ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಶಾಸಕರಾದ ಶ್ರೀ ಹೆಚ್.ಪಿ. ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಗಾವಡಗೆರೆ ಶ್ರೀಗಳು, ಮಾದಹಳ್ಳಿ ಶ್ರೀಗಳು, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಎ.ಹೆಚ್. ವಿಶ್ವನಾಥ್, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಸಿ.ಹೆಚ್. ವಿಜಯಶಂಕರ್, ಶ್ರೀ ಎಂ. ರುದ್ರೇಶ್, ಶ್ರೀಮತಿ ಶಮೀನಾ, ಶ್ರೀ ಕಾವ್ಯ ಶಿವಮೂರ್ತಿ, ಶ್ರೀ ಜೆ.ಎಸ್. ರಮೇಶ್‌ಕುಮಾರ್, ಶ್ರೀ ಭಾಗ್ಯ

ಕುಮಾರ್, ಶ್ರೀ ಎಚ್.ಎಸ್. ಸೋಮಶೇಖರ್, ಡಾ. ವೃಷಭೇಂದ್ರಸ್ವಾಮಿ ಮೊದಲಾದವರುಗಳು ಉಪಸ್ಥಿತರಿದ್ದರು. ಡಾ. ನಂದೀಶ್ ಹಂಚೆ ಉಪನ್ಯಾಸ ನೀಡಿದರು.

**ಏಕೀಕರಣದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾತ್ರ ಮಹತ್ವದ್ದು**

ಏಕೀಕರಣದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾತ್ರ ಮಹತ್ವದ್ದು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 20ರಂದು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ 133ನೇ ಸಂಸ್ಥಾಪನಾ ದಿನಾಚರಣೆ, 'ಸಿರಿಗನ್ನಡಂ ಗೆಲ್ಗೆ ರಾ.ಹ. ದೇಶಪಾಂಡೆ ಪ್ರಶಸ್ತಿ' ಪ್ರದಾನ ಹಾಗೂ 'ನೆನೆ ನೆನೆ ಆ ದಿನ' ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಕರ್ನಾಟಕದ ಕನಸು ಕನ್ನಡಿಗರ ಮನಸ್ಸಿನಲ್ಲಿ ಮೊಳಕೆಯೊಡೆಯುವ ಪೂರ್ವದಲ್ಲೇ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆಯಾಗಿತ್ತು. ಸಂಘ ಸ್ಥಾಪಿಸಿದ ಸಂಸ್ಥಾಪಕರ ಉಸಿರು ನಿಂತರೂ, ಅವರು ಹೆಸರು ಅಳಿಯದ ಸಾಧನೆ ಮಾಡಿದ್ದಾರೆ. ಕನ್ನಡಿಗರು ಬಹಳ ಔದಾರ್ಯ ಉಳ್ಳವರು. ಬಹುಬೇಗ ಅನ್ಯ ಭಾಷಿಕರ ಒಡನಾಡಿಗಳಾಗುತ್ತಾರೆ. ವಿದೇಶಿ ಭಾಷೆಗಳ ಹಾವಳಿಯ ಕಾರಣಕ್ಕಾಗಿ ದೇಶಿಯ ಭಾಷೆಗಳು ಅಸ್ತಿತ್ವ ಕಳೆದುಕೊಳ್ಳುವ ದುಃಸ್ಥಿತಿ ಬಂದಿದೆ. ಇದಕ್ಕೆ ಕನ್ನಡ ಭಾಷೆಯೂ ಹೊರತಲ್ಲ. ಹೀಗಾಗಿ ಭಾಷೆ ಉಳಿಸುವಲ್ಲಿ ವಿದ್ಯಾವರ್ಧಕ ಸಂಘದ ಮೇಲೆ ಬಹುದೊಡ್ಡ ಜವಾಬ್ದಾರಿ ಇದೆ ಎಂದು ಹೇಳಿದರು.

ಹಿರಿಯ ವಿದ್ವಾಂಸರಾದ ಡಾ. ಗುರುಲಿಂಗ ಕಾಪಸೆಯವರಿಗೆ 'ಸಿರಿಗನ್ನಡಂ ಗೆಲ್ಗೆ ರಾ.ಹ. ದೇಶಪಾಂಡೆ ಪ್ರಶಸ್ತಿ' ಪ್ರದಾನ ಮಾಡಲಾಯಿತು. ವಿಶ್ರಾಂತ ಕುಲಪತಿಗಳಾದ ಡಾ. ಮಲ್ಲಿಕಾ ಘಂಟಿಯವರು ಪರಿಚಯಿಸಿದರು. ಮಾಜಿ ಸಭಾಪತಿಗಳಾದ ಶ್ರೀ ವೀರಣ್ಣ ಮತ್ತಿಕಟ್ಟಿ ಉದ್ಘಾಟಿಸಿದರು. ಶ್ರೀ ಚಂದ್ರಕಾಂತ ಬೆಲ್ಲದ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಸಂಜೀವ್ ಕುಲಕರ್ಣಿಯವರು ದೇಶಪಾಂಡೆಯವರ ವಕ್ತಿತ್ವವನ್ನು ಪರಿಚಯಿಸಿದರು. ಶ್ರೀ ಶಂಕರ ಹಲಗತ್ತಿ ಕಾರ್ಯಕ್ರಮ ನಿರೂಪಿಸಿದರು.

**ಕಿರಣ್ ಉಪಾಧ್ಯಾಯ ಹಾಗೂ ವಿಶ್ವೇಶ್ವರ ಭಟ್‌ರ ಕೃತಿಗಳ ಬಿಡುಗಡೆ**

ಜುಲೈ 22ರಂದು ಬೆಂಗಳೂರು ಜಯನಗರದ ಯುವಪಥ ವಿವೇಕ ಸಭಾಂಗಣದಲ್ಲಿ ವಿಕಿ ಬುಕ್ಸ್ – ಸ್ಮಾರ್ಟ್‌ಕೀ ಹಾಗೂ ವಿಶ್ವವಾಣಿ ಪುಸ್ತಕದ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಕಿರಣ್ ಉಪಾಧ್ಯಾಯರವರ 'ವಿಶ್ವತೋಮುಖ' ಹಾಗೂ ಶ್ರೀ ವಿಶ್ವೇಶ್ವರ ಭಟ್‌ರವರ 'ಸುದ್ದಿಮನೆ ಕತೆ', 'ಇದೇ ಅಂತರಂಗ ಸುದ್ದಿ' ಹಾಗೂ 'ನೂರೆಂಟು ವಿಶ್ವ' ಕೃತಿಗಳನ್ನು ಹಿರಿಯ ಸಾಹಿತಿಗಳಾದ ಶ್ರೀ ಎಸ್.ಎಲ್. ಭೈರಪ್ಪನವರು ಬಿಡುಗಡೆಗೊಳಿಸಿದರು. ನಂತರ ಮಾತನಾಡಿದ ಶ್ರೀ ಭೈರಪ್ಪನವರು ನಾಟಕವನ್ನಾದರೂ ಬರೆಯಿರಿ, ಸಾಹಿತ್ಯವನ್ನಾದರೂ ಬರೆಯಿರಿ ಅದರಲ್ಲಿ ಸತ್ಯ

ಮೊದಲಿರಬೇಕು. ನಂತರ ಸೌಂದರ್ಯ ಹಾಗೂ ಕಲೆಯಿರಬೇಕು. ಇತಿಹಾಸವನ್ನು ಮರೆಮಾಚಬಾರದು ಎಂದು ತಿಳಿಸಿದರು.

ಹಿರಿಯ ಪತ್ರಕರ್ತರಾದ ಶ್ರೀ ನಾಗೇಶ್ ಹೆಗಡೆಯವರು ಕಳೆದ ಹದಿನೈದು ವರ್ಷಗಳಲ್ಲಿ ಪತ್ರಿಕೋದ್ಯಮದಲ್ಲಿ ಭಾರಿ ಬದಲಾವಣೆಯಾಗಿದೆ. ಈಗ ಸತ್ಯ ಹಾಗೂ ನ್ಯಾಯಪರ ಸುದ್ದಿಗಿಂತ ಪ್ರಭುತ್ವವನ್ನು ಓಲೈಸುವ ಮುಖಗಳೇ ಕಾಣುತ್ತಿವೆ ಎಂದರು.

ಸಂಸದರಾದ ಶ್ರೀ ಪ್ರತಾಪ ಸಿಂಹ, ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್, ಅಂಕಣಕಾರರಾದ ಶ್ರೀ ಕಿರಣ್ ಉಪಾಧ್ಯಾಯರವರುಗಳು ಮಾತನಾಡಿದರು. ಶ್ರೀ ನಂಜನಗೂಡು ಮೋಹನ್ ಉಪಸ್ಥಿತರಿದ್ದರು. ಶ್ರೀ ವಿನಾಯಕ ಎಸ್. ರಾವ್ ಪ್ರಾರ್ಥಿಸಿದರು. ಶ್ರೀ ಮೋಹನ್ ಕುಮಾರ್ ಸ್ವಾಗತಿಸಿ, ವಂದಿಸಿದರು. ಶ್ರೀಮತಿ ರೂಪಾ ಗುರುರಾಜ್ ಕಾರ್ಯಕ್ರಮ ನಿರೂಪಿಸಿದರು.

**ಸಿದ್ದರಾಮಯ್ಯನವರು ಜನಸಾಮಾನ್ಯರ ಜೊತೆ ಬದುಕು ರೂಪಿಸಿಕೊಂಡವರು**

ಸಿದ್ದರಾಮಯ್ಯನವರು ಜನಸಾಮಾನ್ಯರ ಜೊತೆ ಬದುಕು ರೂಪಿಸಿಕೊಂಡವರು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 23ರಂದು ಮೈಸೂರು ಕಲಾಮಂದಿರದಲ್ಲಿ ಬೆಂಗಳೂರು ಜನಮನ ಪ್ರತಿಷ್ಠಾನದಿಂದ ಆಯೋಜಿಸಿದ್ದ 'ಸಿದ್ದರಾಮಯ್ಯ ಆಡಳಿತ : ನೀತಿ ನಿರ್ಧಾರ – ತಾತ್ವಿಕ ವಿವೇಚನೆ' ಕೃತಿ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಹಳ್ಳಿಯಲ್ಲಿ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ಬೆಳೆದು ಶಿಕ್ಷಣ ಪಡೆದು ರಾಜ್ಯದ ಚುಕ್ಕಾಣಿ ಹಿಡಿದವರು ಸಿದ್ದರಾಮಯ್ಯನವರು. ಜನರ ನಾಡಿಮಿಡಿತ ಹಾಗೂ ಸಂಕಷ್ಟಗಳನ್ನು ಅರಿತು ಸಾಮಾನ್ಯರಿಗೆ ನೆರವಾಗುವ ಅನೇಕ ಜನಪ್ರಿಯ ಯೋಜನೆಗಳನ್ನು ಅವರು ಜಾರಿಗೆ ತಂದರು ಎಂದು ಹೇಳಿದರು.

ರಾಜ್ಯಸಭೆ ಪ್ರತಿಪಕ್ಷ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಯಾರಿಗೆ ಸಮಾಜದ ಏಳ್ಗೆ ಬಗ್ಗೆ ಆಸಕ್ತಿ ಇರುತ್ತದೆಯೋ ಅವರಿಂದ ಮಾತ್ರ ಜನಪರ ಕೆಲಸಗಳನ್ನು ಮಾಡಲು ಸಾಧ್ಯ. ಅಂತಹ ಕೆಲಸವನ್ನು ಸಿದ್ದರಾಮಯ್ಯನವರು ಮಾಡಿದ್ದಾರೆ. ಅವರಿಗೆ ಸಿಕ್ಕ ಆಡಳಿತಾವಧಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವರು ಎಂದರು.

ಶ್ರೀ ಆದಿಚುಂಚನಗಿರಿ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಮೈಸೂರು ಕಾಗಿನೆಲೆ ಕನಕ ಗುರುಪೀಠದ ಶ್ರೀ ಶಿವಾನಂದಪುರಿ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಮಾಜಿ ಮುಖ್ಯಮಂತ್ರಿಗಳು ಹಾಗೂ ವಿರೋಧಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು, ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ಕಾ.ತ. ಚಿಕ್ಕಣ್ಣ, ಶ್ರೀ ಲಕ್ಷ್ಮಣ ಕೊಡಸೆ ಉಪಸ್ಥಿತರಿದ್ದರು. ಮಾಜಿ ಸಭಾಪತಿಗಳಾದ ಶ್ರೀ ಬಿ.ಎಲ್. ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಡಾ. ಸಬೀಹಾ ಭೂಮಿಗೌಡ ಕೃತಿ ಪರಿಚಯಿಸಿದರು. ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಸಂವಿಧಾನದ ಪೀಠಿಕೆ ವಾಚಿಸಿದರು. ಶ್ರೀ ಎಂ. ರಾಮಯ್ಯ

ಸ್ವಾಗತಿಸಿದರು. ಮತ್ತು ಶ್ರೀ ದೇವಾನಂದ ವರಪ್ರಸಾದ ತಂಡದವರು ಗಾಯನ ಪ್ರಸ್ತುತ ಪಡಿಸಿದರು. ಡಾ. ಪ್ರಜ್ವಲ್ ಜಿ. ರಾಜ್ ವಂದಿಸಿದರು.

**ಅಪಾರ ಜನಪ್ರೀತಿ ಗಳಿಸಿರುವ ಸೋಮಣ್ಣ**

ಸದಾ ಜನರ ನಡುವೆ ಇದ್ದು ಕೆಲಸ ಮಾಡಿ ಅಪಾರ ಜನಪ್ರೀತಿಯನ್ನು ಶ್ರೀ ವಿ. ಸೋಮಣ್ಣ ಗಳಿಸಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 23ರಂದು ಮೈಸೂರು ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ್ದ 'ಶ್ರೀ ವಿ. ಸೋಮಣ್ಣ ವನಸಿರಿ' ಪ್ರಶಸ್ತಿ ಪ್ರದಾನ ಹಾಗೂ ಜನ್ಮದಿನದ ಸಂಭ್ರಮ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಎಲ್ಲಾ ಮಠಗಳ ಬಗ್ಗೆ ಅಪಾರವಾದ ಭಕ್ತಿ ಇಟ್ಟುಕೊಂಡಿದ್ದಾರೆ. ಉತ್ತಮ ನಡೆ–ನುಡಿಯುಳ್ಳ ಸಂಸ್ಕಾರವಂತರು. ಜನರ ನಾಡಿಮಿಡಿತವನ್ನು ಅರಿತು ಕೆಲಸ ಮಾಡುವಂತಹವರು ಎಂದು ಹೇಳಿದರು.

ಸಚಿವರಾದ ಶ್ರೀ ವಿ. ಸೋಮಣ್ಣನವರು ಸಣ್ಣ ಹಳ್ಳಿಯಲ್ಲಿ ಹುಟ್ಟಿದ ನಾನು ಬೆಂಗಳೂರಿಗೆ ಹೋಗಿ ಈ ಮಟ್ಟಕ್ಕೆ ಏರಲು ಜನರ ಪ್ರೀತಿ, ವಿಶ್ವಾಸ ಕಾರಣ. ಅದರ ಮುಂದೆ ಯಾವುದೂ ಇಲ್ಲ. ಕೊನೆಯವರೆಗೂ ಜನರ ನಡುವೆಯೆ ಇದ್ದು ಕೆಲಸ ಮಾಡುತ್ತೇನೆ ಎಂದರು.

ಶ್ರೀ ವಿ. ಸೋಮಣ್ಣ ಮತ್ತು ಶ್ರೀಮತಿ ಶೈಲಜಾ ಸೋಮಣ್ಣ ದಂಪತಿಗಳನ್ನು ಅಭಿನಂದಿಸಲಾಯಿತು. ಶ್ರೀ ಸಿ.ಎಂ. ವೆಂಕಟೇಶ್ ಮತ್ತು ಶ್ರೀ ಜಿ. ಜಯಲಕ್ಷ್ಮೀ ವೆಂಕಟೇಶ್ ದಂಪತಿಗಳಿಗೆ 'ವಿ. ಸೋಮಣ್ಣ ವನಸಿರಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಶ್ರೀಮತಿ ಜಯಾಗೌಡ, ಶ್ರೀ ಕೆ.ವಿ. ಮಲ್ಲೇಶ್, ಶ್ರೀ ಎಚ್.ಜಿ. ಪರಶಿವಪ್ಪ, ಶ್ರೀ ಬಸವಲಿಂಗಪ್ಪ, ಶ್ರೀ ಶಿವಮೂರ್ತಿ ಕಾನ್ಯ, ಶ್ರೀ ಶಿವಾಜಿರಾವ್ ಜಾಧವ್, ಶ್ರೀ ಸಂಗೀತ ರಾಜೇಶ್, ಶ್ರೀ ಪ್ರಕಾಶ್ ಚಿಕ್ಕಪಾಳ್ಯ, ಶ್ರೀ ಸಿ. ಬಸವೇಗೌಡ, ಶ್ರೀ ಓಂಪ್ರಕಾಶ್, ಶ್ರೀಮತಿ ಗೀತಾ ಪ್ರಸನ್ನ, ಡಾ. ಹರ್ಷ ಬಸಪ್ಪ, ಡಾ. ಯೋಗೇಶ್, ಶ್ರೀ ಕೆ.ಎಸ್. ಮಹದೇವಪ್ರಸಾದ್‌ರವರುಗಳನ್ನು ಸನ್ಮಾನಿಸಲಾಯಿತು,

ಸಂಸದರಾದ ಶ್ರೀ ಪ್ರತಾಪ ಸಿಂಹ ಉದ್ಘಾಟಿಸಿದರು. ಶಾಸಕರಾದ ಶ್ರೀ ಜಿ.ಟಿ. ದೇವೇಗೌಡ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಶ್ರೀ ಎಲ್. ನಾಗೇಂದ್ರ, ಶ್ರೀ ಸಿ.ಎನ್. ಮಂಜೇಗೌಡ ಉಪಸ್ಥಿತರಿದ್ದರು. ಶ್ರೀ ಅಂಶಿ ಪ್ರಸನ್ನಕುಮಾರ್ ಅಭಿನಂದನಾ ನುಡಿಗಳನ್ನಾಡಿದರು. ಶ್ರೀ ಕೆ.ಪಿ. ನಾಗರಾಜ್ ಮಾತನಾಡಿದರು.ಶ್ರೀ ದೇವನೂರು ಮಹೇಶ್ ತಂಡದವರು ಪ್ರಾರ್ಥಿಸಿದರು. ಶ್ರೀ ಎಸ್.ಪಿ. ಮಧು ಸ್ವಾಗತಿಸಿದರು. ಶ್ರೀ ಚಿನ್ನಸ್ವಾಮಿ ವಡ್ಡಗೆರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಆಯರಹಳ್ಳಿ ಪಿ. ವಿರೂಪಾಕ್ಷ ವಂದಿಸಿದರು. ಶ್ರೀ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

**ಬಾಲ್ಯದಲ್ಲಿ ಕಲಿತ ವಿದ್ಯೆ – ಸಂಸ್ಕಾರಗಳು ಉತ್ತಮ ವ್ಯಕ್ತಿತ್ವವನ್ನು ರೂಪಿಸುತ್ತವೆ**

ಮಕ್ಕಳು ಚಿಕ್ಕವರಾಗಿದ್ದಾಗ ಕಲಿತ ವಿನಯ, ವಿದ್ಯೆ, ಸಂಸ್ಕಾರಗಳೇ ಮುಂದೆ ದೊಡ್ಡವರಾದಾಗ ಉತ್ತಮ ವ್ಯಕ್ತಿತ್ವವನ್ನು ರೂಪಿಸುತ್ತವೆ ಎಂದು ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಮತಿ ಸುಧಾಮೂರ್ತಿಯವರು ತಿಳಿಸಿದರು. ಸುತ್ತೂರು ಶ್ರೀಕ್ಷೇತ್ರದಲ್ಲಿ ಜುಲೈ 26ರಂದು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನಡೆದ ಪ್ರಾರ್ಥನಾ ಸಭೆಯಲ್ಲಿ ಜೆಎಸ್‌ಎಸ್ ವಸತಿ ಶಾಲೆಯ ಸಹಸ್ರಾರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಮನೆಯಲ್ಲಿ ಇಬ್ಬರು ಮಕ್ಕಳನ್ನು ಸಾಕುವುದೇ ಕಷ್ಟವಾಗಿರುವಾಗ ಇಲ್ಲಿ ನಾಲ್ಕೈದು ಸಾವಿರ ಮಕ್ಕಳನ್ನು ಜತನದಿಂದ ಕಾಪಾಡುತ್ತಿರುವ ಸುತ್ತೂರು ಜಗದ್ಗುರುಗಳವರ ಜ್ಞಾನಾನ್ನದಾಸೋಹ ಅನುಪಮವಾದುದು. ಹಳ್ಳಿಗಾಡಿನ ಮಕ್ಕಳಿಗೆ ಅವಕಾಶಗಳು ಕಡಿಮೆ. ಆದರೆ ಇಲ್ಲಿನ ಶಾಲೆಯ ಮಕ್ಕಳಿಗೆ ಎಲ್ಲಾ ರೀತಿಯ ಅವಕಾಶಗಳನ್ನು ಶ್ರೀಮಠ ಕಲ್ಪಿಸಿದೆ. ಇಲ್ಲಿನ ವಿದ್ಯಾರ್ಥಿಗಳನ್ನು ನೋಡುತ್ತಿದ್ದರೆ ತುಂಬಾ ಸಂತೋಷವಾಗುತ್ತದೆ. ಗುರುಗಳ ಮಾತು ಮಾಣಿಕ್ಯದಂತೆ, ಅವರ ಮಾರ್ಗದರ್ಶನದಿಂದ ಉತ್ತಮ ಜೀವನ ರೂಪಿಸಿಕೊಳ್ಳಬಹುದು ಎಂದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡಿ ಶ್ರೀಮತಿ ಸುಧಾಮೂರ್ತಿಯವರು ದಿಟ್ಟ ಭಾರತೀಯ ಮಹಿಳೆ. ಅವರು ಸ್ಥಾಪಿಸಿದ ಇನ್ಫೋಸಿಸ್ ಸಂಸ್ಥೆಯ ನೌಕರರನ್ನು ಅವರ ಕುಟುಂಬದ ಸದಸ್ಯರಂತೆಯೇ ಕಾಣುತ್ತಾರೆ. ಇನ್ಫೋಸಿಸ್ ಪ್ರತಿಷ್ಠಾನದ ವತಿಯಿಂದ ಅನೇಕ ಸಾಮಾಜಿಕ ಸೇವೆಗಳನ್ನು ಒದಗಿಸುತ್ತಿದ್ದಾರೆ. ಅವರ ಮಾತೃವಾತ್ಸಲ್ಯ, ಅಂತಃಕರಣ, ದಾನಶೀಲ ಗುಣ ಹಾಗೂ ಸಾದಾಸೀದ ಸರಳ ವ್ಯಕ್ತಿತ್ವದಿಂದಲೇ ಪ್ರಸಿದ್ಧರಾಗಿದ್ದಾರೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಸುಧಾಮೂರ್ತಿಯವರ ಸಹೋದರಿ ಶ್ರೀಮತಿ ಸುನಂದಾ ಕುಲಕರ್ಣಿ ಹಾಗೂ ಶ್ರೀ ಜಯರಾಜೇಂದ್ರರು, ಹರಗುರುಚರಮೂರ್ತಿಗಳು ಮೊದಲಾದವರು ಉಪಸ್ಥಿತರಿದ್ದರು. ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

**ವೈಜ್ಞಾನಿಕವಾಗಿ ಜಗತ್ತು ಸಾಕಷ್ಟು ಬದಲಾಗುತ್ತಿದೆ**

ವೈಜ್ಞಾನಿಕವಾಗಿ ಜಗತ್ತು ಸಾಕಷ್ಟು ಬದಲಾಗುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 26ರಂದು ಮೈಸೂರು–ಚಾಮರಾಜನಗರ ವಿ. ಸೋಮಣ್ಣ ಅಭಿಮಾನಿ ಬಳಗದಿಂದ ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮೀಜಿ ವಿಜ್ಞಾನ ಮತ್ತು ರೊಬೋಟೆಕ್ ಪ್ರಯೋಗಾಲಯ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ವಿದ್ಯಾರ್ಥಿಗಳ ಜ್ಞಾನಕ್ಷಿತಿಜ ವಿಸ್ತರಿಸಲಿ ಎಂಬ ಉದ್ದೇಶದಿಂದ ರೊಬೋಟೆಕ್ ಪ್ರಯೋಗಾಲಯವನ್ನು ಇಲ್ಲಿ ಸ್ಥಾಪಿಸಿದ್ದಾರೆ. ರೊಬೋಟೆಕ್ ಕ್ಷೇತ್ರದಲ್ಲಿ ಅದ್ಭುತ

ಸಂಶೋಧನೆಗಳಾಗಿವೆ. ಇದರ ಮೂಲಕ ಮನುಷ್ಯರಿಲ್ಲದೆ ಕಾರ್ಯ ಮಾಡಬಹುದು. ಇದನ್ನು ಮಾದರಿಯಾಗಿಟ್ಟುಕೊಂಡು ಇತರೆ ಶಾಲೆಗಳಿಗೂ ಇದರ ಪ್ರಯೋಜನವನ್ನು ವಿಸ್ತರಿಸಬೇಕು ಎಂದು ಹೇಳಿದರು.

ಮೈಸೂರು ರಾಜವಂಶಸ್ಥರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಮೈಸೂರು ಅರಮನೆಗೂ ಚಾಮರಾಜನಗರ ಜಿಲ್ಲೆಗೂ ನಿಕಟ ಸಂಬಂಧವಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ಈ ಜಿಲ್ಲೆಯ ಜೊತೆ ಹೆಚ್ಚು ಒಡನಾಟವಿಟ್ಟುಕೊಂಡಿದ್ದರು. ಜಿಲ್ಲೆ ಹೆಚ್ಚು ಪ್ರಕೃತಿ ಸಂಪತ್ತನ್ನು ಹೊಂದಿದೆ ಎಂದರು.

ಸಚಿವರಾದ ಶ್ರೀ ವಿ. ಸೋಮಣ್ಣನವರು ಚಾಮರಾಜನಗರ, ಹನೂರು, ಕೊಳ್ಳೇಗಾಲ ತಾಲ್ಲೂಕಗಳ ಸರ್ಕಾರಿ ಕಾಲೇಜುಗಳಲ್ಲೂ ವಿಜ್ಞಾನ ಮತ್ತು ರೊಬೋಟೆಕ್ ಪ್ರಯೋಗಾಲಯ ತೆರೆಯಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನಕುಮಾರ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್, ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್, ಜಿಲ್ಲಾಧಿಕಾರಿಗಳಾದ ಶ್ರೀಮತಿ ಚಾರುಲತಾ ಸೋಮಲ್, ಸಿಇಓ ಶ್ರೀಮತಿ ಕೆ.ಎಂ. ಗಾಯತ್ರಿ ಮೊದಲಾದವರುಗಳು ಉಪಸ್ಥಿತರಿದ್ದರು.

**ದುರ್ವ್ಯಸನಗಳಿಂದ ದೂರ ಉಳಿಯುವ ಸಂಕಲ್ಪವನ್ನು ಮಾಡಬೇಕು**

ದುರ್ವ್ಯಸನಗಳಿಂದ ದೂರ ಉಳಿಯುವ ಸಂಕಲ್ಪವನ್ನು ಮಾಡಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 27ರಂದು ಟಿ. ನರಸೀಪುರದಲ್ಲಿ ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಕುಡಿತ ಬಿಡಿಸುವ ಹನ್ನೆರಡನೆಯ ಉಚಿತ ಶಿಬಿರ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಮನುಷ್ಯ ದುಶ್ಚಟಗಳಿಗೆ ಬಲಿಯಾಗುವುದು ಸುಲಭ. ಅದರಿಂದ ಹೊರಬರುವುದು ಬಹಳ ಕಷ್ಟ. ಕುಡಿತಕ್ಕೆ ಕೆಲವರು ಕಾರಣ ಹೇಳುತ್ತಾರೆ. ಆದರೆ ಅವು ಕುಡಿಯಲು ಕಾರಣಗಳೇ ಅಲ್ಲ. ಕುಡಿತವನ್ನು ಬಿಡಲು ಪ್ರತಿನಿತ್ಯ ಕುಡಿಯುವ ವ್ಯಕ್ತಿ ಇಂದು ನಾನು ಕುಡಿಯುವುದಿಲ್ಲ ಎಂಬ ಮನೋಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಸದ್ಭಾವನೆ, ಸನ್ನಡತೆಯಿಂದ ಬದುಕುವುದನ್ನು ಕಲಿಯಬೇಕು ಎಂದು ಹೇಳಿದರು.

ಶಾಸಕರಾದ ಶ್ರೀ ಎಂ. ಅಶ್ವಿನ್‌ಕುಮಾರ್ ಶಿಬಿರದ ಬಳಿಕ ಕುಡಿತದಿಂದ ಮುಕ್ತರಾಗಿ ಹೊಸ ಜೀವನ ರೂಪಿಸಿಕೊಳ್ಳಲು ಸುತ್ತೂರು ಶ್ರೀಗಳು ಒಂದು ಅವಕಾಶ ಕಲ್ಪಿಸಿದ್ದಾರೆ. ಮತ್ತೆ ವ್ಯಸನದತ್ತ ಸುಳಿಯದೆ ಉತ್ತಮವಾದ ಜೀವನಕ್ಕಾಗಿ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂದರು.

ವಾಟಾಳು ಶ್ರೀಗಳು, ಎಂಎಲ್ ಹುಂಡಿ ಶ್ರೀಗಳು, ಮಾಜಿ ಶಾಸಕರಾದ ಡಾ. ಎಲ್. ಭಾರತೀಶಂಕರ್ ಪುರಸಭೆ ಅಧ್ಯಕ್ಷರಾದ ಶ್ರೀ ಎಸ್. ಮದನ್‌ರಾಜ್ ಮಾತನಾಡಿದರು.

ಶ್ರೀ ಜಯಪ್ಪ ಪ್ರಾರ್ಥಿಸಿದರು. ಶ್ರೀ ಪ್ರಭುಸ್ವಾಮಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಮಹದೇವಸ್ವಾಮಿ ವರದಿ ಮಂಡಿಸಿದರು. ಶಿಬಿರಾರ್ಥಿಗಳಾದ ಶ್ರೀ ನೇತ್ರಾನಂದ್, ಶ್ರೀ ಶಶಿಕುಮಾರ್, ಶ್ರೀ ಕುಮಾರ್ ಅನಿಸಿಕೆ ಹಂಚಿಕೊಂಡರು. ಡಾ. ನಾಗೇಂದ್ರ ವಂದಿಸಿದರು. ಡಾ. ಎಂ.ಪಿ. ಸೋಮಶೇಖರ್ ಕಾರ್ಯಕ್ರಮ ನಿರೂಪಿಸಿದರು.

**ಕೋ. ಚೆನ್ನಬಸಪ್ಪನವರು ವೈಚಾರಿಕತೆಯಿಂದ ಬದುಕಿದವರು**

ಕೋ. ಚೆನ್ನಬಸಪ್ಪನವರು ವೈಚಾರಿಕತೆಯಿಂದ ಬದುಕಿದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 27ರಂದು ಮೈಸೂರು ಜೆಎಸ್ಎಸ್ ಕಾನೂನು ಕಾಲೇಜಿನಲ್ಲಿ ನಗರ ಮತ್ತು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ಆಯೋಜಿಸಿದ್ದ ನಾಡೋಜ ಶ್ರೀ ಕೋ. ಚೆನ್ನಬಸಪ್ಪನವರ ಜನ್ಮಶತಮಾನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಚೆನ್ನಬಸಪ್ಪನವರು ಬಹುಮುಖ ವ್ಯಕ್ತಿತ್ವ ಹೊಂದಿದ್ದರು. ಸರಳವಾಗಿ ಬದುಕಿದವರು. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಅವರು ಕವಿತೆ, ಕಥೆ ಬರೆಯಲು ಆರಂಭಿಸಿದರು. ಅವರ ಲೇಖನಗಳ ಪ್ರಖರತೆಯ ಬಗ್ಗೆ ಆಳುವವರಿಗೆ ಭಯವಿತ್ತು. ಯಾವುದೇ ವಿಶೇಷಣೆಯನ್ನು ಬಳಸಿದರೂ ಚೆನ್ನಬಸಪ್ಪನವರ ವರ್ಣನೆ ಅಪೂರ್ಣವಾಗುತ್ತದೆ ಎಂದು ಹೇಳಿದರು.

ನಾಡೋಜ ಶ್ರೀ ಗೊ.ರು. ಚನ್ನಬಸಪ್ಪನವರು ಕೋಚೆಯವರ ಶತಮಾನದ ಆಚರಣೆಯನ್ನು ಎಲ್ಲ ಜಿಲ್ಲೆಗಳಲ್ಲೂ ಆಯೋಜಿಸಬೇಕು. ಅದರ ವರದಿ–ಉಪನ್ಯಾಸಗಳನ್ನು ಒಂದು ಕೃತಿಯ ರೂಪದಲ್ಲಿ ಸಮಾರೋಪದಲ್ಲಿ ಹೊರತರಬೇಕು ಎಂದು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಪ್ರೊ. ಮಲೆಯೂರು ಗುರುಸ್ವಾಮಿಯವರು ಕಾರ್ಯಕ್ರಮ ಉದ್ಘಾಟಿಸಿದರು. ಬೆಂಗಳೂರು ಆಕಾಶವಾಣಿ ಕೇಂದ್ರದ ನಿರ್ದೇಶಕ ಡಾ. ಬಸವರಾಜ ಸಾದರ ಮತ್ತು ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎಂ.ಎನ್. ತಳವಾರ್‌ರವರು ಉಪನ್ಯಾಸ ನೀಡಿದರು. ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ದೇವರಾಜ ಭೂತೆ, ಡಾ. ಕೆ.ಸಿ. ಗುರುದೇವ, ಶ್ರೀ ಕೆ.ಐ. ಗುದಗಿರವರು ಮಾತನಾಡಿದರು. ಶ್ರೀ ಹೆಳವರಹುಂಡಿ ಸಿದ್ದಪ್ಪ ಉಪಸ್ಥಿತರಿದ್ದರು. ಶ್ರೀಮತಿ ಉಮಾ ಮಹಾದೇವಸ್ವಾಮಿ ಪ್ರಾರ್ಥಿಸಿದರು. ಶ್ರೀ ಮ.ಗು. ಸದಾನಂದಯ್ಯ ಸ್ವಾಗತಿಸಿದರು. ಶ್ರೀ ಕೆ.ವಿ. ನಾಗರಾಜಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ವಂದಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನಾರಂಭ**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ಜುಲೈ 28ರಂದು ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮಕ್ಕೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈಸೂರಿನ ಅಪರ ಜಿಲ್ಲಾಧಿಕಾರಿಗಳಾದ ಡಾ. ಬಿ.ಎಸ್. ಮಂಜುನಾಥಸ್ವಾಮಿರವರು ಮಾತನಾಡಿ, ಶ್ರಾವಣಮಾಸ ಸಮೃದ್ಧಿಯ ಸಂಕೇತ. ದೃಷ್ಟಿ ಹರಿಸಿದ ಕಡೆಯಲ್ಲೆಲ್ಲ ಹಚ್ಚ ಹಸಿರು. ಅಂತೆಯೇ ಎಲ್ಲರ ಬದುಕು ಹಸನಾಗಬೇಕು. ಪ್ರಕೃತಿಯಂತೆ ಹಸಿರಾಗಬೇಕು ಎಂಬುದೇ ಇಂತಹ ಕಾರ್ಯಕ್ರಮಗಳ ಆಶಯ ಎಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಹುಣಸೂರು ತಾಲ್ಲೂಕು ಮಾದಹಳ್ಳಿಯ ಶ್ರೀ ಉಕ್ಕಿನಕಂತೆ ಮಠದ ಷ.ಬ್ರ.ಶ್ರೀ ಸಾಂಬಸದಾಶಿವ ಸ್ವಾಮಿಗಳವರು ಗುರು ಎಂದರೆ ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವವನು ಎಂದರ್ಥ. ಇಂತಹ ಸತ್ಸಂಗಗಳಲ್ಲಿ ಭಾಗವಹಿಸಿ ಪ್ರವಚನಗಳನ್ನು ಆಲಿಸುವುದರಿಂದ ಮನಸ್ಸಿನಲ್ಲಿ ಶಾಂತಿ, ನೆಮ್ಮದಿ ನೆಲೆಸುತ್ತವೆ ಎಂದು ನುಡಿದರು.

ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಟಿ.ಪಿ. ಶಿವಕುಮಾರ್‌ರವರು ಮಾತನಾಡಿ, ಸಮಾಜದ ಶ್ರೇಯಸ್ಸಿಗಾಗಿ ಸುತ್ತೂರು ಶ್ರೀಮಠವು ಹಮ್ಮಿಕೊಂಡಿರುವ ಹಲವಾರು ಕಾರ್ಯಕ್ರಮಗಳಲ್ಲಿ ಶ್ರಾವಣಮಾಸದ ಪ್ರವಚನವು ಒಂದು. ಒಳ್ಳೆಯ ವಿಚಾರಗಳನ್ನು ಆಲಿಸುವುದರಿಂದ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದು. ಆತ್ಮವಿಶ್ವಾಸವನ್ನು ವೃದ್ಧಿಸಿಕೊಳ್ಳಬಹುದು ಎಂದು ನುಡಿದರು.

ಸುರಂಗ ಕವಿಕೃತ 'ತ್ರಿಷಷ್ಠಿ ಪುರಾತನ ಚಾರಿತ್ರಂ'ದ ಪ್ರವಚನವನ್ನು ಜೆಎಸ್‌ಎಸ್ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಎಚ್.ಬಿ. ದೇವಣ್ಣನವರು ನಡೆಸಿಕೊಟ್ಟರು. ಶಿಕ್ಷಕರಾದ ಶ್ರೀ ಡಿ.ಎಸ್. ಸಿದ್ಧಲಿಂಗಸ್ವಾಮಿಯವರು ಕಾವ್ಯವಾಚನ ಮಾಡಿದರು.,

ಕಾರ್ಯಕ್ರಮದಲ್ಲಿ ಶ್ರೀಮತಿ ವರ್ಷ ಶಿವಕುಮಾರ್, ಗುರುಕುಲದ ಸಾಧಕರು ಹಾಗೂ ಸುತ್ತಮುತ್ತಲ ಗ್ರಾಮಗಳ ಆಸಕ್ತ ಶ್ರೋತೃಗಳು ಉಪಸ್ಥಿತರಿದ್ದರು. ಚಾಮರಾಜನಗರ ಉಪವಿಭಾಗದ ಡಿವೈಎಸ್‌ಪಿ ಶ್ರೀಮತಿ ಪ್ರಿಯದರ್ಶಿನಿ ಸಾಣೇಕೊಪ್ಪ ಪ್ರಾರ್ಥಿಸಿದರು. ಶಿಕ್ಷಕರಾದ ಶ್ರೀ ಎಸ್. ಚಂದ್ರಮೌಳೇಶ್ವರ ಸ್ವಾಗತಿಸಿದರು. ಶ್ರೀ ಅಂದಯ್ಯ ಶಿರೂರಮಠ ವಂದಿಸಿ, ನಿರೂಪಿಸಿದರು.

ಭೀಮನ ಅಮವಾಸ್ಯೆ ವಿಶೇಷ ಪೂಜೆ: ಶ್ರೀಕ್ಷೇತ್ರದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜೆಗಳು ನೆರವೇರಿದವು.

**ಶ್ರಾವಣಮಾಸ ಭಾರತ ಉಪಖಂಡಕ್ಕೆ ಮಹತ್ವದ ಸಮಯ**

ಶ್ರಾವಣಮಾಸ ಭಾರತ ಉಪಖಂಡಕ್ಕೆ ಮಹತ್ವದ ಸಮಯ ಎಂದು ಮೈಸೂರು ಜಿಲ್ಲಾಧಿಕಾರಿಗಳಾದ ಡಾ. ಬಗಾದಿ ಗೌತಮ್‌ರವರು ಜುಲೈ 29ರಂದು ಮೈಸೂರು

ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಎಲ್ಲ ಜೀವಿಗಳು ಮರುಚೈತನ್ಯವನ್ನು ಪಡೆದುಕೊಳ್ಳಲು ಶ್ರಾವಣಮಾಸ ಬಹಳ ಪ್ರಶಸ್ತವಾದುದು. ಶಾಂತಿ ಮತ್ತು ಪವಿತ್ರವಾದಂತಹ ವಾತಾವರಣ ಈ ಮಾಸದಲ್ಲಿ ಮೇಳೈಸುತ್ತದೆ. ಧಾರ್ಮಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಹೆಚ್ಚು ಗಮನಹರಿಸಿ ಜ್ಞಾನವನ್ನು ಗಳಿಸುವ ವಿಶಿಷ್ಟ ಮಾಸ ಎಂದು ಹೇಳಿದರು.

ಶ್ರೀ ಮಲೆ ಮಹದೇಶ್ವರ ಬೆಟ್ಟದ ಶ್ರೀಸಾಲೂರು ಬೃಹನ್ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಸಂಸ್ಕೃತಿಯನ್ನು ಉಳಿಸಿ–ಬೆಳೆಸುವಲ್ಲಿ ಸುತ್ತೂರು ಶ್ರೀಮಠದ ಕೊಡುಗೆ ಅನನ್ಯವಾದುದು. ಕೋವಿಡ್‌ನಂತಹ ಸಂದರ್ಭದಲ್ಲೂ ಆನ್‌ಲೈನ್ ಮೂಲಕ ಪ್ರವಚನವನ್ನು ನಡೆಸಿ ಹಾಗೂ ಜ್ಞಾನವಾರಿಧಿ ಏರ್ಪಡಿಸಿ ಎಲ್ಲರಲ್ಲೂ ದೈವೀಕ ಭಾವವನ್ನು ಜಾಗೃತಗೊಳಿಸಿದೆ. ಇಂದಿನ ಪೀಳಿಗೆಯ ಮಕ್ಕಳಿಗೆ ನಮ್ಮ ಸಂಸ್ಕೃತಿಯನ್ನು ಪರಿಚಯಿಸಿ, ಉಳಿಸುವ ಗುರುತರ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಬಿ.ಆರ್. ಪೂರ್ಣಿಮರವರು ಧರ್ಮ ಮತ್ತು ಸಮಾಜ ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿವೆ. ಇಂತಹ ಸಂಬಂಧಕ್ಕೆ ಶ್ರೀಮಠ ಕೊಂಡಿಯಾಗಿ ಇವೆರಡನ್ನು ಒಗ್ಗೂಡಿಸುವ ಕೆಲಸವನ್ನು ಮಾಡುತ್ತಿದೆ. ಶರಣ ಸಾಹಿತ್ಯ ಜನರ ಮನೆ ಮತ್ತು ಮನವನ್ನು ಮುಟ್ಟಿ ಸಮಾಜದಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿತು ಎಂದರು.

ಮೈಸೂರು ಮಹಾನಗರದ ಪೊಲೀಸ್ ಆಯುಕ್ತರಾದ ಡಾ. ಚಂದ್ರಗುಪ್ತರವರು ಈ ಮಾಸದಲ್ಲಿ ನಾವೆಲ್ಲ ಜೀವನ ವಿಕಾಸದ ತತ್ತ್ವಗಳನ್ನು ಕಲಿಯುತ್ತೇವೆ. ಎಲ್ಲ ಶಾಲೆಗಳಲ್ಲಿಯೂ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಯ ಜೊತೆಗೆ ಮೌಲ್ಯಗಳನ್ನು ಸಹ ಕಲಿಸುವಂತಹ ಕಾರ್ಯವಾಗಬೇಕಿದೆ. ಸಮಾಜ ಮತ್ತು ಸಂಸ್ಕೃತಿಯಿಂದ ಯಾವಾಗಲೂ ಹೊಸತನ್ನು ಪಡೆದುಕೊಳ್ಳಬೇಕು ಮತ್ತು ಕಲಿಯುತ್ತಿರಬೇಕು. ಇದು ಮುಂದಿನ ಪೀಳಿಗೆಗೂ ಮುಂದುವರಿಯಬೇಕು ಎಂದು ತಿಳಿಸಿದರು.

'ಭಾರತೀಯ ಸಂಸ್ಕೃತಿ' ಕುರಿತು ಪ್ರವಚನ ನೀಡಿದ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಭಾರತದ ಸಂಸ್ಕೃತಿ ಆದಿ ಮತ್ತು ಅಂತ್ಯವಿಲ್ಲದ್ದು. ಜಗತ್ತಿನ ಎಲ್ಲ ಸಂಸ್ಕೃತಿಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆ. ಜಗತ್ತಿನಲ್ಲಿ ಅನೇಕ ಸಂಸ್ಕೃತಿಗಳು ಹುಟ್ಟಿದವು ಮತ್ತು ನಶಿಸಿಹೋದವು ಕಾರಣ ಅವು ಭೋಗವನ್ನು ಮುಖ್ಯವಾಗಿಸಿಕೊಂಡಿದ್ದವು. ಆದರೆ ಭಾರತೀಯ ಸನಾತನ ಸಂಸ್ಕೃತಿ ತ್ಯಾಗವನ್ನು

ಮುಖ್ಯವಾಗಿಸಿಕೊಂಡಿದೆ ಹೀಗಾಗಿ ಇದಕ್ಕೆ ಎಂದೂ ಅಂತ್ಯವಿಲ್ಲ. ತ್ಯಾಗದಿಂದಲೇ ಅಮೃತತ್ವ ಎಂದು ಸುಭಾಷಿತಕಾರರು ಹೇಳಿದ್ದಾರೆ. ನಮ್ಮಲ್ಲಿ ಹೆಚ್ಚಾಗಿರುವುದನ್ನು ಸಮಾಜಕ್ಕೆ ಅರ್ಪಿಸಬೇಕು. ಮನುಷ್ಯ ಈ ಸೃಷ್ಟಿಗೆ ತಿಲಕಪ್ರಾಯ. ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿ ಕೊಳ್ಳಬೇಕಾದರೆ ಈ ಮಾಸದಲ್ಲಿ ನಾವೆಲ್ಲರು ಸದ್ವಿಚಾರಗಳನ್ನು ಪಡೆದುಕೊಂಡು ಜೀವನದಲ್ಲಿ ಅಳವಡಿಸಿಕೊಂಡು ನಡೆಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಕ್ತಾದಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು, ಗುರುಕುಲ ಸಾಧಕರು ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು ಪಾಲ್ಗೊಂಡಿದ್ದರು. ಶ್ರೀಮಠದ ಸೇವಾಸಿಬ್ಬಂದಿ ವರ್ಗದವರು ಸೇವಾರ್ಥ ಸಲ್ಲಿಸಿದರು. ಜೆಎಸ್‌ಎಸ್ ಲಲಿತಕಲಾ ವೃಂದದ ಶ್ರೀಮತಿ ರೂಪ ರವೀಶ್, ಶ್ರೀಮತಿ ರೂಪ ಗುರುಪ್ರಸಾದ್ ಮತ್ತು ಶ್ರೀಮತಿ ಕೆ.ಜಿ. ವಿನುತರವರು ಪ್ರಾರ್ಥಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನರವರು ಸ್ವಾಗತಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ವಂದಿಸಿದರು. ಶ್ರೀ ಬಿ. ನಿರಂಜನಮೂರ್ತಿಯವರು ಕಾರ್ಯಕ್ರಮ ನಿರೂಪಿಸಿದರು.

**ಶಿಕ್ಷಣವು ವಿದ್ಯಾರ್ಥಿಗಳನ್ನು ಸ್ವಾವಲಂಬಿಗಳನ್ನಾಗಿಸಬೇಕು**

ಶಿಕ್ಷಣವು ವಿದ್ಯಾರ್ಥಿಗಳನ್ನು ಸ್ವಾವಲಂಬಿಗಳನ್ನಾಗಿಸಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಶ್ರೀ ಬಿ.ಸಿ. ನಾಗೇಶ್‌ರವರು ಜುಲೈ 29ರಂದು ಮೈಸೂರಿನ ಬೋಗಾದಿಯ ಬಾಪೂಜಿ ಬಡಾವಣೆಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ಬಾಲಕಿಯರ ಪದವಿಪೂರ್ವ ಕಾಲೇಜಿನ ಕಟ್ಟಡ ಹಾಗೂ ಕಾಲೇಜನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಭಾರತೀಯರನ್ನು ಪರವಾಲಂಬಿಗಳನ್ನಾಗಿಸುವ ಬ್ರಿಟೀಷ್ ಶಿಕ್ಷಣ ಪದ್ಧತಿಯನ್ನು ನಿರ್ಮೂಲನೆ ಮಾಡುವ ಮೂಲಕ ಮಗುಕೇಂದ್ರಿತ ಶಿಕ್ಷಣದ ಪದ್ಧತಿಯಾದ ರಾಷ್ಟ್ರೀಯ ಶಿಕ್ಷಣ ನೀತಿಯು ವಿದ್ಯಾರ್ಥಿಗಳಲ್ಲಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳುವ, ಮಗುವಿನ ಪ್ರತಿಭೆಯನ್ನು ಹೊರತರುವ ಸುಸಂಸ್ಕೃತರನ್ನಾಗಿಸುವ ಶಿಕ್ಷಣವಾಗಿದೆ. ಜೆಎಸ್‌ಎಸ್ ಸಂಸ್ಥೆಯು ವಿದ್ಯಾರ್ಥಿಗಳ ಬದುಕಿಗೆ ಬೇಕಾದ ವಿದ್ಯೆ ಮತ್ತು ಸಂಸ್ಕಾರವನ್ನು ನೀಡುತ್ತಿದೆ. ಸಂಸ್ಥೆಯಲ್ಲಿ ಕಲಿಕೆಗೆ ಪೂರಕವಾದ ಸೌಲಭ್ಯಗಳು ಪರಿಪೂರ್ಣವಾಗಿವೆ. ದುಬೈನಲ್ಲಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯು ಈ ಬಾರಿ ಆ ದೇಶದಲ್ಲೇ ಪ್ರಥಮ ಸ್ಥಾನದ ಫಲಿತಾಂಶ ಪಡೆಯುವ ಮೂಲಕ ಇಡೀ ಭಾರತೀಯರೇ ಜೆಎಸ್‌ಎಸ್ ಸಂಸ್ಥೆಯ ಬಗ್ಗೆ ಹೆಮ್ಮೆ ಪಡುವಂತಾಗಿದೆ ಎಂದು ಅಭಿನಂದಿಸಿದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡಿ ಶ್ರಾವಣದ ಮೊದಲದಿನ ಕಾಲೇಜು ಪ್ರಾರಂಭವಾಗಿದೆ. ಸದ್ವಿಚಾರಗಳನ್ನು ಆಲಿಸುವುದು ಶ್ರಾವಣ ಮಾಸದ ವಿಶೇಷ. ಜ್ಞಾನಕ್ಕೆ ಜಗತ್ತಿನೆಲ್ಲೆಡೆ ಗೌರವವಿದೆ. ಜ್ಞಾನ ಸಂಪಾದಿಸಿಕೊಂಡರೆ ಎಲ್ಲಾದರೂ ಬದುಕಬಹುದು. ಅದೊಂದು ರತ್ನ. ಸದಾ ಅದರ ಹೊಳಪು. ಇಂತಹ ಜ್ಞಾನದೊಂದಿಗೆ

ಧಾರ್ಮಿಕ ಪ್ರಜ್ಞೆಯನ್ನು ಬೆಳೆಸಿಕೊಂಡರೆ ಬದುಕಿನ ವಿಕಾಸಕ್ಕೆ ಹಾದಿಯಾಗುತ್ತದೆ ಎಂದು ತಿಳಿಸಿದರು.

ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ಅರುಣ ಶಹಾಪುರರವರು ಶಿಕ್ಷಣದ ಪ್ರಸಾರ ಇಂದಿನ ದೊಡ್ಡ ಸವಾಲಾಗಿರುವ ಸಂದರ್ಭದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ದೇಶದಲ್ಲಷ್ಟೆ ಅಲ್ಲದೆ ಸಾಗರದಾಚೆಗೂ ನೀಡುತ್ತಿರುವ ಜೆಎಸ್‌ಎಸ್ ಸಂಸ್ಥೆ ನಮ್ಮ ಹೆಮ್ಮೆ. ಉತ್ತರ ಕರ್ನಾಟಕದಲ್ಲಿ ಕೆ.ಎಲ್.ಇ, ಡಿ.ಎಲ್.ಡಿ, ವಿದ್ಯಾವರ್ಧಕ ಸಂಘ ಇವೆ ಮೊದಲಾದ ಸಂಸ್ಥೆಗಳು ಶಿಕ್ಷಣ ಪ್ರಸಾರಕ್ಕೆ ತೊಡಗಿಸಿಕೊಂಡು ಶಿಕ್ಷಣ ವಂಚಿತರಿಗೆ ಶಿಕ್ಷಣ ನೀಡಿದಂತೆ ಈ ಭಾಗದಲ್ಲಿ ಜೆಎಸ್‌ಎಸ್ ಸಂಸ್ಥೆ ಜ್ಞಾನಾನ್ನ ದಾಸೋಹ ಮಾಡುವ ಮೂಲಕ ಈ ಭಾಗದ ಭಾಗ್ಯದ ಬಾಗಿಲನ್ನೇ ತೆರೆಸಿದೆ. ವಿದ್ಯಾರ್ಥಿಗಳಿಗೆ ಪದವಿಪೂರ್ವ ಶಿಕ್ಷಣವು ಜೀವನದ ಪ್ರಮುಖ ತಿರುವು. ಇಲ್ಲಿ ತೀರ ಒತ್ತಡವಿದೆ. ಪರಸ್ಪರ ಸ್ಪರ್ಧೆಯಿದೆ. ಆದ್ದರಿಂದ ಜೆಎಸ್‌ಎಸ್ ಸಂಸ್ಥೆ ಮತ್ತಷ್ಟು ವಸತಿ ಕಾಲೇಜುಗಳನ್ನು ತೆರೆಯುವಂತಾಗಲಿ ಎಂದು ಕೋರಿಕೊಂಡರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಜಿ.ಡಿ. ಹರೀಶ್‌ಗೌಡರವರು ಜೆಎಸ್‌ಎಸ್ ಸಂಸ್ಥೆ ಹಳ್ಳಿಯಿಂದ ಅಂತರಾಷ್ಟ್ರೀಯ ಮಟ್ಟದವರೆಗೂ ಸವಿಸ್ತಾರವಾಗಿ ವಿಸ್ತರಿಸಿದೆ. ವಿದ್ಯಾರ್ಥಿಗಳಿಗೆ ಅವಶ್ಯವಿರುವ ಎಲ್ಲಾ ರೀತಿಯ ಶಿಕ್ಷಣವನ್ನು ನೀಡುವುದರ ಮೂಲಕ ಅವರ ಭವಿಷ್ಯವನ್ನು ಉಜ್ವಲಗೊಳಿಸುತ್ತಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಶ್ರೀಮತಿ ವೀಣಾ ನಾಗೇಶ್, ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಶ್ರೀನಿವಾಸಮೂರ್ತಿ, ಶಾಲಾ ಶಿಕ್ಷಣ ವಿಭಾಗದ ಉಪನಿರ್ದೇಶಕರಾದ ಶ್ರೀ ರಾಮಚಂದ್ರ ರಾಜೇಅರಸ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ವಿವಿಧ ವಿಭಾಗಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಜೆಎಸ್‌ಎಸ್ ಲಲಿತ ಕಲಾ ವೃಂದವರು ಪ್ರಾರ್ಥಿಸಿದರು. ಶ್ರೀ ಬಿ.ಎ. ರಾಜಶೇಖರ್ ಸ್ವಾಗತಿಸಿದರು. ಶ್ರೀ ಎನ್. ರೇಣುಕಸ್ವಾಮಿ ವಂದಿಸಿದರು. ಶ್ರೀ ಎಂ. ವಿಜಯಕುಮಾರ್ ನಿರೂಪಿಸಿದರು.

### ಸಿದ್ಧಗಂಗಾ ಶ್ರೀಗಳು ತ್ರಿವಿಧ ದಾಸೋಹದ ಮೂಲಕ ದಂತಕತೆಯಾದವರು

ಸಿದ್ಧಗಂಗೆಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು ತ್ರಿವಿಧ ದಾಸೋಹದ ಮೂಲಕ ದಂತಕತೆಯಾದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 30ರಂದು ದೊಡ್ಡಬಳ್ಳಾಪುರದಲ್ಲಿ ತಾಲ್ಲೂಕು ವೀರಶೈವ ಲಿಂಗಾಯತ ಸಮಾಜದಿಂದ ಆಯೋಜಿಸಿದ್ದ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಗುರುವಂದನಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. 12ನೇ ಶತಮಾನದಲ್ಲಿ ಕಾಯಕಯೋಗಿಯಾಗಿದ್ದ ಬಸವಣ್ಣನವರಂತೆ, ಈ ಶತಮಾನದಲ್ಲಿ ತಮ್ಮ ತ್ರಿವಿಧ ದಾಸೋಹದಿಂದ ಸಿದ್ಧಗಂಗೆಯ

ಶ್ರೀ ಶಿವಕುಮಾರ ಮಹಾಸ್ವಾಮಿಗಳು ಜನಮನ್ನಣೆ ಗಳಿಸಿದ್ದರು. ಮಾಜಿ ರಾಷ್ಟ್ರಪತಿಗಳಾದ ಡಾ. ಕಲಾಂರವರು ಸಹ ಶ್ರೀಗಳ ಮೇಲೆ ಅಪಾರ ಗೌರವವನ್ನು ಹೊಂದಿದ್ದರು. ಇಂಥ ಮಹಾಮಹಿಮರನ್ನು ಕಂಡ ಎಲ್ಲರೂ ಧನ್ಯರು. ಅವರ ಸ್ಮರಣೆಯಿಂದ ಹಲವಾರು ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ಅವರ ಕಾಯಕವನ್ನು ಈಗ ಸಿದ್ಧಲಿಂಗ ಶ್ರೀಗಳು ಮುಂದುವರೆಸುತ್ತಿರುವುದು ಅಭಿನಂದನೀಯ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಶಿವಕುಮಾರ ಶ್ರೀಗಳಂತಹ ಮಹಾಮಹಿಮರನ್ನು ಸದಾ ಸ್ಮರಿಸಿ ನಮ್ಮ ಕಾಯಕಗಳನ್ನು ಮಾಡಿದರೆ ಬದುಕಿನಲ್ಲಿ ಯಶಸ್ಸು ಸಿಗುವುದು ಖಂಡಿತ ಎಂದು ಹೇಳಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಸಿದ್ಧಗಂಗಾ ಶ್ರೀಗಳು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲ ನಡೆಯಬೇಕು. ನಾಡಿನ ಸರ್ವತೋಮುಖ ಅಭಿವೃದ್ಧಿಗಾಗಿ ಸಮುದಾಯ ಒಗ್ಗೂಡಬೇಕಾದ ಅಗತ್ಯವಿದೆ. ನಮ್ಮ ಸಮುದಾಯ ಎಲ್ಲರಿಗೂ ಒಳಿತನ್ನು ಮಾಡುವ ಮನೋಭಾವ ಹೊಂದಿದೆ ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಮೇಲಣಗವಿ ಮಠ, ಶ್ರೀ ಬಸವೇಶ್ವರ ಮಠಗಳ ಶ್ರೀಗಳು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಶ್ರೀ ಜಿ.ಎಸ್. ಮರಿಸ್ವಾಮಿ ಮೊದಲಾದವರು ಉಪಸ್ಥಿತರಿದ್ದರು.

**ಶಿಷ್ಯ ಬಯಸುವ ಗುರುಗಳು**

ಗುರುಗಳಾದವರು ಶಿಷ್ಯರು ಅವರಿಗಿಂತಲೂ ಉನ್ನತ ಪದವಿ ಗಳಿಸಿ ಕೀರ್ತಿ ಯಶಸ್ಸನ್ನು ಹೊಂದಬೇಕೆಂಬ ಆಸೆ ಆಕಾಂಕ್ಷೆಗಳನ್ನು ಹೊಂದಿರುತ್ತಾರೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 31ರಂದು ಬೆಂಗಳೂರು ಜೆಎಸ್‌ಎಸ್ ವಿದ್ಯಾರ್ಥಿಗಳ ಒಕ್ಕೂಟವು ಜಯನಗರದ ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ಆಯೋಜಿಸಿದ್ದ 'ಗುರುವಂದನಾ' ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಮಕ್ಕಳ ಪ್ರಗತಿಯನ್ನು ಬಯಸುವ ತಂದೆ ತಾಯಿಗಳನ್ನು ಗೌರವದಿಂದ ಕಾಣಬೇಕು. ಗುರು ಮತ್ತು ತಂದೆ ತಾಯಿಯರು ಅವರಿಗಿಂತಲೂ ಅವರ ಮಕ್ಕಳು ಹೆಚ್ಚು ಸುಖದಿಂದಿರಬೇಕು ಎಂದು ಬಯಸುತ್ತಾರೆ. ಅದು ಹುಸಿಯಾಗದಂತೆ ಪಾಲಿಸುವುದು ಎಲ್ಲರ ಧರ್ಮ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಪ್ರೌಢಶಾಲೆಯ ಶಿಕ್ಷಕರುಗಳನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲರಾದ ಡಾ. ಮೀನಲೋಚನಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಚಿ. ಹೇಮಂತ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

**ನವೋದ್ಯಮಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರ ಕೊಡುಗೆ ಅಪಾರ**

ನವೋದ್ಯಮಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರ ಕೊಡುಗೆ ಅಪಾರ ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 5ರಂದು ಮೈಸೂರು ಜೆಎಸ್‌ಎಸ್ ತಾಂತ್ರಿಕ

ಶಿಕ್ಷಣ ಸಂಸ್ಥೆಗಳ ಸಮುಚ್ಚಯದ ಆವರಣದಲ್ಲಿ ನಡೆದ ಮೈಸೂರು ನವೋದ್ಯಮ ಉತ್ಸವ ಉದ್ಘಾಟನಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಕರ್ನಾಟಕದಲ್ಲಿ ಮೊದಲ ಬಾರಿಗೆ ನವೋದ್ಯಮ ಹಾಗೂ ಹೊಸ ಆಯಾಮಗಳಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ಪ್ರೋತ್ಸಾಹ ನೀಡಿದರು. ಅವರ ನಂತರದಲ್ಲಿ ಆಳ್ವಿಕೆ ನಡೆಸಿದ ಮಹಾರಾಜರು ಅದನ್ನು ಮುಂದುವರಿಸಿ ಜಾಗತಿಕ ಮಟ್ಟಕ್ಕೆ ಕೊಂಡೊಯ್ದರು. ಸರ್ಕಾರವು ನವೋದ್ಯಮಿಗಳಿಗೆ ಅಗತ್ಯವಾದ ಅವಕಾಶವನ್ನು ಕೊಡುತ್ತಿದೆ. ಬೆಳೆಯುತ್ತಿರುವವರನ್ನು ಗೌರವಿಸಬೇಕು. ಬೆಳೆದವರ ಪರಿಶ್ರಮವನ್ನು ಅಳವಡಿಸಿಕೊಂಡು ಮುಂದೆ ಬರಬೇಕು ಎಂದು ಹೇಳಿದರು.

ಮೈಸೂರು ರಾಜವಂಶಸ್ಥರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಮೈಸೂರಿನ ಹಲವು ಬ್ರಾಂಡ್‌ಗಳನ್ನು ಸ್ಥಾಪಿಸುವ ಮೂಲಕ ಮಹಾರಾಜರ ಕಾಲದಲ್ಲೇ ನವೋದ್ಯಮಗಳಿಗೆ ಅವಕಾಶ ನೀಡಲಾಗಿತ್ತು. ಇಂದಿಗೂ ಅವು ದೊಡ್ಡ ಹೆಸರು ಮಾಡಿವೆ ಮತ್ತು ಅವುಗಳ ಹಿರಿಮೆಯನ್ನು ಉಳಿಸಿಕೊಂಡಿವೆ. ಮೈಸೂರನ್ನು ಸೈಬರ್ ಸೆಕ್ಯುರಿಟಿ ಹಬ್ ಆಗಿ ರೂಪಿಸಲು ಅವಕಾಶವಿದೆ ಎಂದು ತಿಳಿಸಿದರು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಡಾ. ಇ.ವಿ. ರಮಣರೆಡ್ಡಿಯವರು ರಾಜ್ಯ ಸರ್ಕಾರವು ಐಟಿ ಮತ್ತು ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದೆ. ದೇಶದಲ್ಲಿಯೇ ಮೊದಲ ಬಾರಿಗೆ ನವೋದ್ಯಮ ನೀತಿ ರೂಪಿಸಿ ನೆರವಾಗುತ್ತಿದೆ. ಐಟಿ ಮತ್ತು ಕೈಗಾರಿಕೆಗೆ ಪ್ರೋತ್ಸಾಹ ನೀಡಲು 30 ದೇಶಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ವಿಜ್ಞಾನಾನಂದ ಸ್ವಾಮಿಗಳು, ಶ್ರೀ ವಿಶ್ವಪ್ರಸಾದ್ ಆಳ್ವ, ಪ್ರೊ. ಜಿ. ಹೇಮಂತಕುಮಾರ್, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಸುಧನ್ವ ಧನಂಜಯ, ಶ್ರೀ ಸುರೇಶ್ ಸೇಥಿ, ಶ್ರೀ ಶಿವಶಂಕರ್ ಮೊದಲಾದವರು ಉಪಸ್ಥಿತರಿದ್ದರು.

**ನಿರಂತರ ಜಾಗರೂಕತೆ ಮತ್ತು ಒಗ್ಗಟ್ಟಿನ ಮಂತ್ರವಿರಲಿ**

ನಮ್ಮೆಲ್ಲರಿಗು ಸ್ವಾತಂತ್ರ್ಯ ಬಂದ ವರ್ಷ ನೆನಪಿರುತ್ತದೆ. ಆದರೆ ಸ್ವಾತಂತ್ರ್ಯ ಹೇಗೆ ಹೋಯಿತು ಎಂಬುದರ ಅರಿವು ಇರುವುದಿಲ್ಲ. ಸ್ವಾತಂತ್ರ್ಯ ಬೆಲೆಯ ಬಗ್ಗೆ ಅರಿವಿಲ್ಲದೆ ಹೋದರೆ ಗಳಿಸಿದ ಸ್ವಾತಂತ್ರ್ಯ ಯಾವಾಗ ಬೇಕಾದರು ಹರಣವಾಗಬಹುದು. ಇಂದು ಪಡೆದು ಅನುಭವಿಸುತ್ತಿರುವ ಈ ಸ್ವಾತಂತ್ರ್ಯ ಉಳಿಸಿಕೊಳ್ಳಲು ನಿರಂತರ ಜಾಗರೂಕತೆ ಮತ್ತು ಒಗ್ಗಟ್ಟಿನ ಮಂತ್ರವಿರಲಿ ಎಂದು ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಸಿ.ಟಿ. ರವಿಯವರು ತಿಳಿಸಿದರು. ಆಗಸ್ಟ್ 15ರಂದು ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ

ದಿಂದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಾಗೂ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಒಂದು ಕಾಲದಲ್ಲಿ ಜಗತ್ತಿನಲ್ಲಿಯೇ ಭಾರತದ ಶ್ರೀಮಂತಿಕೆಯನ್ನು ಮೀರಿಸುವ ದೇಶಗಳು ಇರಲಿಲ್ಲ. ನಮ್ಮದು ಶ್ರೀಮಂತಿಕೆಯ ಸಂಸ್ಕೃತಿಯಾಗಿತ್ತು. ಭಾರತೀಯ ತಂತ್ರಜ್ಞಾನವನ್ನು ಮೀರಿಸುವವರು ಇರಲಿಲ್ಲ. ಭಾರತ ದೇಶ ಸಮೃದ್ಧಿಗಾಗಿ ಪ್ರಸಿದ್ಧಿಯಾಗಿತ್ತು. ಅದಕ್ಕಾಗಿಯೇ ಸಾಲು ಸಾಲು ದಾಳಿ ನಡೆದವು. ಆರಂಭದಲ್ಲಿ ಸಮರ್ಥವಾಗಿ ದಾಳಿಯನ್ನು ಎದುರಿಸಿದರೂ ನಂತರ ಕುತಂತ್ರಕ್ಕೆ ಬಲಿಯಾಗಿ ಸಂಘಟಿತ ಮನೋಭಾವ, ಸಂಪತ್ತು, ಸಂಸ್ಕೃತಿ, ಸಭ್ಯತೆಯನ್ನೂ ಕಳೆದುಕೊಂಡೆವು. ದಾಳಿಕೋರರು ನಮ್ಮ ನಿಜ ಅಸ್ತಿತ್ವದ ಅರಿವು ಉಂಟಾಗದಂತೆ ಎಚ್ಚರವಹಿಸಿ, ತಂತ್ರಗಾರಿಕೆಯಿಂದ ನಮ್ಮನ್ನು ಆಳಿದರು. ಮತಾಂಧತೆಯಿಂದ ದೇಶವನ್ನು ತುಂಡರಿಸಲಾಯಿತು. ನಮ್ಮ ಪ್ರಾಚೀನ ಭಾರತೀಯ ಸಂಸ್ಕೃತಿ ಈಗಿರುವ ಭಾರತದ ಭೂಪಟವನ್ನು ಮೀರಿತ್ತು. ಭಯೋತ್ಪಾದಕತೆ, ಭ್ರಷ್ಟಾಚಾರ, ಮತಾಂತರ ಇವು ದೇಶಕ್ಕೆ ಮುಳ್ಳಾಗಿವೆ. ಜಾತೀಯತೆ, ಅಸ್ಪೃಶ್ಯತೆ ಇವು ಸಮಾಜಕ್ಕೆ ಮುಳ್ಳಾಗಿವೆ. ಇವುಗಳನ್ನು ನಾಶಗೊಳಿಸುವ ಕಡೆ ನಮ್ಮ ಸಂಕಲ್ಪ ಇರಬೇಕು. ಮುಂದಿನ ಇಪ್ಪತ್ತೊಂದು ವರ್ಷಗಳಲ್ಲಿ ಭಾರತೀಯರು ಅಮೃತ ಮಹೋತ್ಸವದಿಂದ ಅಮೃತ ಕಾಲದ ಕಡೆಗೆ ಹೋಗಬೇಕು. ಭಾರತ ವಿಶ್ವಗುರುವಾಗುವ ಸಾಮರ್ಥ್ಯವನ್ನು ಹೊಂದಿರುವಂಥದ್ದು. ಅದರ ಸಾಮರ್ಥ್ಯವನ್ನು ಹೆಚ್ಚಿಸಲು ನಾವೆಲ್ಲರೂ ವ್ಯಕ್ತಿಗತ ಸಂಕಲ್ಪಗಳನ್ನು ಮಾಡಬೇಕು. ಈ ವ್ಯಕ್ತಿಗತ ಸಂಕಲ್ಪಗಳು ರಾಷ್ಟ್ರಾಭಿಮಾನದೊಂದಿಗೆ ಕೂಡಿಕೊಂಡು ಭಾರತ ಆತ್ಮನಿರ್ಭರವಾಗಬೇಕು ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಾ ಸ್ವಾತಂತ್ರ್ಯದ ಅಮೃತ ಮಹೋತ್ಸವ ಈ ಸಂಭ್ರಮವನ್ನು ಕೇವಲ ಭಾರತದಲ್ಲಿ ಮಾತ್ರವಲ್ಲದೆ, ವಿದೇಶಗಳಲ್ಲಿಯೂ ಅನಿವಾಸಿ ಭಾರತೀಯರು ಹಬ್ಬದಂತೆ ಸಡಗರದಿಂದ ಆಚರಿಸುತ್ತಿದ್ದಾರೆ. ಎಂದೆಂದಿಗೂ ಸಮೃದ್ಧ ಭಾರತ ನಮ್ಮದು. ಏಕತೆ, ಒಗ್ಗಟ್ಟಿನಿಂದ ಪ್ರಗತಿಯ ಹೆಜ್ಜೆಗಳನ್ನಿಡುತ್ತಾ ಇದೆ. ತ್ಯಾಗ, ಶಾಂತಿ, ಸೌಹಾರ್ದತೆಯಿಂದ ಬದುಕನ್ನು ಸಾಧಿಸಿರುವ ನಿದರ್ಶನಗಳು ಸಾಕಷ್ಟಿವೆ. ಎಲ್ಲಕ್ಕಿಂತ ಆತ್ಮಸ್ಥೈರ್ಯದ ಶಕ್ತಿ ದೊಡ್ಡದು. ಇದನ್ನು ನಮ್ಮ ಸ್ವಾತಂತ್ರ್ಯ ಹೋರಾಟಗಾರರಲ್ಲಿ, ಭಾರತೀಯರಲ್ಲಿ ಕಾಣಬಹುದು ಎಂದು ನುಡಿದರು.

ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷರಾದ ಶ್ರೀ ವೈ.ಸಿ. ರೇವಣ್ಣನವರು ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಭಾರತದಾದ್ಯಂತ ಹಬ್ಬವಾಗಿ ಆಚರಿಸಲಾಗುತ್ತಿದೆ. ಸ್ವರಾಜ್ಯಕ್ಕಾಗಿ, ದೇಶದ ಅಭಿವೃದ್ಧಿಗಾಗಿ ಶ್ರಮಿಸಿದ ಮಹನೀಯರನ್ನು ಸದಾ ನೆನೆಯುತ್ತಾ ರಾಷ್ಟ್ರಭಕ್ತಿ, ತ್ಯಾಗ, ಮೌಲ್ಯಗಳಿಂದ ನಡೆಯೋಣ ಎಂದರು.

ಶಾಸಕರಾದ ಶ್ರೀ ಸಿ.ಎಸ್. ನಿರಂಜನಕುಮಾರ್ 75 ವರ್ಷಗಳ ಭಾರತದ ಅಭಿವೃದ್ಧಿ ದೊಡ್ಡ ಸಾಧನೆಯಾಗಿದೆ. ಸ್ವಾತಂತ್ರ್ಯ ಪೂರ್ವದ ಸಮಾಜಕ್ಕೂ ಸ್ವಾತಂತ್ರ್ಯ ಬಂದು 75

ವರ್ಷಗಳ ಇಂದಿನ ಸಮಾಜಕ್ಕೂ ಸಾಕಷ್ಟು ವ್ಯತ್ಯಾಸಗಳು ಇವೆ. ಇದು ಭಾರತದ ಶಕ್ತಿಯನ್ನು ತೋರಿಸುತ್ತಿದೆ. ಇದಕ್ಕೆ ಇಂದಿನ ಕೇಂದ್ರಸರ್ಕಾರವೂ ಕೂಡ ಕಾರಣಕರ್ತವಾಗಿದೆ. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಎಲ್ಲಾ ಕ್ಷೇತ್ರದಲ್ಲಿಯೂ ದೂರದೃಷ್ಟಿತ್ವವನ್ನು ಹೊಂದಿರುವವರು. ಇಂದಿನ ಸಮಾಜಕ್ಕೆ ಉತ್ತಮವಾದುದ್ದನ್ನೇ ನೀಡಬೇಕೆಂದು ಸಂಕಲ್ಪವನ್ನು ಮಾಡಿರುವವರು. ಅದಕ್ಕೆ ಇಂದು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಣೆ ಮಾಡುತ್ತಿರುವುದೇ ಸಾಕ್ಷಿಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಹೆಚ್.ವಿ. ರಾಜೀವ್, ಮೈಸೂರು ಪ್ರೊ. ಲೋಕ್‌ನಾಥ್, ಶ್ರೀ ರಾಜೇಂದ್ರರವರು ಉಪಸ್ಥಿತರಿದ್ದರು. ಕು. ಪ್ರಜ್ಞಾ ಕಶ್ಯಪ್ ಮತ್ತು ತಂಡದವರು ವಂದೇ ಮಾತರಂ ಗೀತೆ ಹಾಡಿದರು. ನೃತ್ಯಾಲಯ ಟ್ರಸ್ಟ್‌ನವರು ನೃತ್ಯರೂಪಕವನ್ನು ಪ್ರದರ್ಶಿಸಿದರು. ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್ ಸ್ವಾಗತಿಸಿದರು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕು. ಸನ್ನಿಧಿ ಪ್ರಾರ್ಥಿಸಿದರು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ವಂದಿಸಿದರು. ಡಾ. ಬಿ. ಪ್ರಭುಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

**ರಾಜೇಂದ್ರ ಶ್ರೀಗಳ ಕೊಡುಗೆ ಅಪಾರ**

ಸಮಾಜದ ಉನ್ನತಿಗೆ ರಾಜೇಂದ್ರ ಶ್ರೀಗಳ ಕೊಡುಗೆ ಅಪಾರ ಎಂದು ಕರ್ನಾಟಕದ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರು ಆಗಸ್ಟ್ 18ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸುತ್ತ ತಿಳಿಸಿದರು. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಸುತ್ತೂರು ಶ್ರೀಮಠ ದೇಶದ ಉನ್ನತಿಯಲ್ಲಿ ಮಹತ್ವದ ಪಾತ್ರ ವಹಿಸಿದೆ. ರಾಜೇಂದ್ರ ಶ್ರೀಗಳು ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಮೈಲಿಗಲ್ಲನ್ನು ಸ್ಥಾಪಿಸಿದ ಮಹಾನ್ ಋಷಿಗಳು, ಮಹಾಪುರುಷರು. ನೂರಾರು ಶಾಲಾಕಾಲೇಜುಗಳು, ವಿದ್ಯಾರ್ಥಿನಿಲಯಗಳನ್ನು ತೆರೆದು ಕ್ರಾಂತಿಯನ್ನೇ ಮಾಡಿದರು. ತ್ರಿವಿಧ ದಾಸೋಹದ ಮೂಲಕ ಭಾರತದ ಋಷಿಪರಂಪರೆಗೆ ಮುಕುಟಮಣಿಯಾದರು. ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವತ್ತ ಗಮನಹರಿಸಿದರು. ಆರೋಗ್ಯ ಕ್ಷೇತ್ರದಲ್ಲೂ ಸಾಕಷ್ಟು ಕಾರ್ಯಗಳನ್ನು ಮಾಡಿದರು. ದೇಶ–ವಿದೇಶದಲ್ಲೂ ಶ್ರೀಮಠದ ಸಂಸ್ಥೆಗಳನ್ನು ಸ್ಥಾಪಿಸಿರುವುದು ಅದರ ಕಾರ್ಯವ್ಯಾಪ್ತಿಯನ್ನು ಸೂಚಿಸುತ್ತದೆ. ಗುರುಪರಂಪರೆಯ ಹಾದಿಯಲ್ಲಿ ಸಾಗುತ್ತಿರುವ ಶ್ರೀಮಠದ ಪೂಜ್ಯ ದೇಶಿಕೇಂದ್ರ ಮಹಾಸ್ವಾಮಿಗಳವರು ದೂರದರ್ಶಿತ್ವ ಮತ್ತು ಸದ್ಭಾವನೆಗಳ ಮೂಲಕ ಸಾಮಾಜಿಕ ಕಾರ್ಯಗಳಲ್ಲಿ

ತೊಡಗಿಸಿಕೊಂಡಿದ್ದಾರೆ. ಇಂತಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪೂಜ್ಯರನ್ನು ಸ್ಮರಿಸುವುದು ನಮ್ಮ ಕರ್ತವ್ಯ ಮತ್ತು ಭಾಗವಹಿಸಿರುವುದು ನನ್ನ ಸೌಭಾಗ್ಯ. ನನಗೆ ಧನ್ಯತಾ ಭಾವವನ್ನು ಮೂಡಿಸಿದೆ. ಭಾರತದ ಸಂಸ್ಕೃತಿ ಅನಂತವಾದುದು. ಅನಾದಿ ಕಾಲದಿಂದಲೂ ಸಾಧುಸಂತರುಗಳು ಇದನ್ನು ರೂಪಿಸಿಕೊಂಡು ಬಂದಿದ್ದಾರೆ. ವಿಶ್ವ ಬಂಧುತ್ವ ಮತ್ತು ವಿಶ್ವಶಾಂತಿಯನ್ನು ಸಾರುವ ಸಂಸ್ಕೃತಿ ನಮ್ಮದು ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ರಾಜೇಂದ್ರ ಶ್ರೀಗಳು ಮಾತೃವಾತ್ಸಲ್ಯದ ಮತ್ತೊಂದು ರೂಪವಾಗಿದ್ದಂತವರು. ಸಾವಿರಾರು ವರ್ಷಗಳ ಭವ್ಯ ಇತಿಹಾಸವಿರುವ ಮಠದ ಗುರುಗಳಾಗಿ ಪರಂಪರೆ ಮತ್ತು ಆಧುನಿಕತೆಗಳನ್ನು ಸಮನ್ವಯಗೊಳಿಸಿ ಸಮಾಜದ ಅಗತ್ಯಗಳನ್ನು ಪೂರೈಸಿದರು. ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆರೋಗ್ಯ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿದರು. ಸಮಾಜದಲ್ಲಿನ ಅಜ್ಞಾನವನ್ನು ಹೋಗಲಾಡಿಸಲು ಅಹರ್ನಿಶಿ ಶ್ರಮಿಸಿದರು. ರಾಜೇಂದ್ರ ಶ್ರೀಗಳು ಮತ್ತು ಸಿದ್ಧಗಂಗೆಯ ಶ್ರೀ ಶಿವಕುಮಾರಸ್ವಾಮಿಗಳು ಸಮಾಜದ ಎರಡು ಕಣ್ಣುಗಳಂತಿದ್ದರು ಎಂದು ತಿಳಿಸಿದರು.

ಶ್ರೀ ಸಿದ್ಧಗಂಗಾ ಕ್ಷೇತ್ರದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ರಾಜೇಂದ್ರ ಶ್ರೀಗಳು ಮಹಾನ್ ತ್ಯಾಗಮಯಿಗಳು. ತ್ಯಾಗದಿಂದಲೇ ಅಮೃತತ್ವವನ್ನು ಸಾಧಿಸಿದವರು. ಸಮಾಜದಲ್ಲಿ ಹೊಸ ಇತಿಹಾಸವನ್ನು ಬರೆದವರು. ಲಿಂಗಪೂಜೆಗಿಂತ ಜಂಗಮ ಸೇವೆ ಶ್ರೇಷ್ಠ ಎಂದು ಶ್ರೀಗಳು ನಂಬಿದ್ದರು. ನಿರಂತರವಾಗಿ ಸೇವಾಕಾರ್ಯಗಳನ್ನು ಮಾಡಿಕೊಂಡು ಬಂದರು. ಶ್ರೀಮಠದ ಕೀರ್ತಿಯನ್ನು ಹಿಮಾಲಯದ ಎತ್ತರಕ್ಕೆ ಬೆಳೆಸುವಲ್ಲಿ ಪೂಜ್ಯರ ಕೊಡುಗೆ ಅಪಾರ. ಸಮಾಜಕ್ಕೆ ಸುತ್ತೂರು ಮತ್ತು ಸಿದ್ಧಗಂಗಾ ಮಠಗಳು ಸ್ಮರಣೀಯ ಸೇವೆಯನ್ನು ಸಲ್ಲಿಸಿವೆ ಎಂದು ತಿಳಿಸಿದರು.

ಸಹಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಸಂದೇಶವನ್ನು ವಾಚಿಸಿದರು. ಮಹಾಪೌರರಾದ ಶ್ರೀಮತಿ ಸುನಂದ ಪಾಲನೇತ್ರ ಉಪಸ್ಥಿತರಿದ್ದರು. ಜೆಎಸ್‌ಎಸ್ ಲಲಿತಕಲಾ ವೃಂದದ ಶ್ರೀಮತಿ ರೂಪ ರವೀಶ್, ಶ್ರೀಮತಿ ರೂಪ ಗುರುಪ್ರಸಾದ್, ಶ್ರೀಮತಿ ವಿನುತ ಕಾಂತರಾಜು ಮತ್ತು ತಂಡದವರು ಪ್ರಾರ್ಥಿಸಿದರು. ಡಾ. ಎಂ.ಎನ್. ನಂದೀಶ್ ಹಂಚೆ ಸ್ವಾಗತಿಸಿದರು. ಶ್ರೀ ಬಿ. ನಿರಂಜನಮೂರ್ತಿ ವಂದಿಸಿದರು.

**ಸ್ವಯಂಪ್ರೇರಿತ ರಕ್ತದಾನ ಶಿಬಿರಕ್ಕೆ ರಾಜ್ಯಪಾಲರಿಂದ ಚಾಲನೆ**

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಆಗಸ್ಟ್ 18ರಂದು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಆಸ್ಪತ್ರೆ ಹಾಗೂ ಜೆಎಸ್‌ಎಸ್ ಎಎಚ್‌ಇಆರ್‌ನ ವತಿಯಿಂದ ಏರ್ಪಡಿಸಿದ್ದ

ಸ್ವಯಂಪ್ರೇರಿತ ರಕ್ತದಾನ ಶಿಬಿರ ಹಾಗೂ ಅಂಗಾಂಗ ದಾನ ನೋಂದಣಿ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಕರ್ನಾಟಕದ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರು ಉದ್ಘಾಟಿಸಿದರು.

50ಕ್ಕೂ ಹೆಚ್ಚು ಜನ ರಕ್ತದಾನ, 14 ಜನ ದೇಹದಾನ ಹಾಗೂ 11 ಜನ ನೇತ್ರದಾನಕ್ಕೆ ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ಮಹಾಪೌರರಾದ ಶ್ರೀಮತಿ ಸುನಂದ ಪಾಲನೇತ್ರ, ಜೆಎಸ್‌ಎಸ್ ಆಸ್ಪತ್ರೆಯ ಪ್ರಭಾರ ನಿರ್ದೇಶಕರಾದ ಡಾ. ಸಿ.ಪಿ. ಮಧು, ರಕ್ತನಿಧಿ ಕೇಂದ್ರದ ಅಧಿಕಾರಿಗಳಾದ ಡಾ. ಪಿ. ಪಲ್ಲವಿ ಮೊದಲಾದವರುಗಳಿದ್ದರು.

**ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳಿ**

ವೃತ್ತಿಯಿಂದ ನಿವೃತ್ತರಾದ ನಂತರ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 18ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ 2021–22ನೇ ಸಾಲಿನಲ್ಲಿ ನಿವೃತ್ತರಾದವರಿಗೆ ಅಭಿನಂದಿಸಿ ಆಶೀರ್ವದಿಸುತ್ತಾ ತಿಳಿಸಿದರು. ಸೇವೆ ಸಲ್ಲಿಸುತ್ತಿರುವಾಗ ಇದ್ದಂತಹ ಉತ್ಸಾಹ ಜೀವನದ ಕೊನೆಯವರೆಗೂ ಇರಬೇಕು. ಕೆಲಸದಿಂದ ನಿವೃತ್ತಿಯಾದರೂ ಪ್ರವೃತ್ತಿಯಿಂದ ನಿವೃತ್ತರಾಗಬಾರದು. ಒಂದು ಸಂಸ್ಥೆ ಬೆಳೆಯಬೇಕಾದರೆ ಅದರ ಹಿಂದೆ ಕರ್ತವ್ಯ ನಿರ್ವಹಿಸುವವರ ಪರಿಶ್ರಮ ಸಾಕಷ್ಟಿರುತ್ತದೆ. ಅವರ ನಿಷ್ಠೆ ಮತ್ತು ಪ್ರಾಮಾಣಿಕತೆಯೂ ಅದರಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಅಂತಹವರನ್ನು ಅಭಿನಂದಿಸುವ ಕಾರ್ಯವನ್ನು ಪೂಜ್ಯ ರಾಜೇಂದ್ರ ಶ್ರೀಗಳು ಪ್ರಾರಂಭಿಸಿದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಂಸ್ಥೆ ಸಾಗುತ್ತಿದೆ ಎಂದು ಹೇಳಿದರು.

ತಮ್ಮ ನೌಕರಿಯ ದಿನಗಳ ಅನುಭವಗಳನ್ನು ಹಂಚಿಕೊಂಡ ಶ್ರೀ ಸಿ.ವಿ. ಬಸವರಾಜು ಮತ್ತು ಶ್ರೀ ವೃಷಭೇಂದ್ರಪ್ಪನವರುಗಳು ಅವರು ವಿದ್ಯಾರ್ಥಿಗಳಾಗಿದ್ದ ಸಂದರ್ಭದಲ್ಲಿ ಬಹಳ ಬಡತನವಿತ್ತು. ಅಂತಹ ಕಷ್ಟದ ಸಂದರ್ಭದಲ್ಲಿ ನಾವು ಮಠದ ಆಶ್ರಯವನ್ನು ಪಡೆದುಕೊಂಡೆವು. ನಂತರ ಬದುಕು ಕಟ್ಟಿಕೊಳ್ಳಲು ಪೂಜ್ಯರು ಉದ್ಯೋಗವನ್ನು ನೀಡಿದರು. ಜೀವನಕ್ಕೆ ದಾರಿಯನ್ನೂ ಮಾಡಿಕೊಟ್ಟರು. ಪೂಜ್ಯರ ಕಷ್ಟದ ದಿನಗಳಲ್ಲಿ ಆತ್ಮವಿಶ್ವಾಸವನ್ನು ತುಂಬಿ ಬದುಕಿಗೆ ಮಾರ್ಗದರ್ಶನ ಮಾಡಿದರು ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥೆಗಳಲ್ಲಿ ಸೇವೆಸಲ್ಲಿಸಿ 2021–ಸೆಪ್ಟೆಂಬರ್‌ನಿಂದ 2022–ಜುಲೈ ಅಂತ್ಯದವರೆಗೆ ನಿವೃತ್ತರಾದ ಒಟ್ಟು 189 ನೌಕರರು ಹಾಗೂ ಅವರ ಕುಟುಂಬವರ್ಗದವರಿಗೆ ಪೂಜ್ಯರು ಆಶೀರ್ವದಿಸಿ

ಸನ್ಮಾನಿಸಿದರು. ನಿವೃತ್ತರಾದವರ ನೌಕರರ ಪರಿಚಯದ 'ತೇರನೆಳೆದವರು' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಜೆಎಸ್‌ಎಸ್ ವಿದ್ಯಾಸಂಸ್ಥೆಗಳಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಿ ಪ್ರೋತ್ಸಾಹಿಸಲಾಯಿತು. ಜೆಎಸ್‌ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಜೆಎಸ್‌ಎಸ್ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 39 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಪ್ರಸಾದ ದ್ವೈಮಾಸಿಕ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮತ್ತು ಸಂಸ್ಥೆಗಳ 2021–22ನೇ ಸಾಲಿನ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ನಿವೃತ್ತರುಗಳ ಪರಿಚಯವನ್ನು ಶ್ರೀ ಗುರುಪ್ರಸಾದ್, ಶ್ರೀಮತಿ ಎಚ್.ಎಸ್. ಅಂಬಿಕಾ, ಡಾ. ಎನ್. ಮಹೇಶ್ವರಿ, ಡಾ. ಬಿ.ಎಸ್. ಸುದೀಪ್, ಶ್ರೀ ಕೆ.ವಿ. ಯೋಗೇಶ, ಡಾ. ಭೀಮರಾಜ್, ಶ್ರೀಮತಿ ಪಿ. ರಶ್ಮಿ, ಡಾ. ಮೀನಾಕ್ಷಿ, ಶ್ರೀಮತಿ ಡಿ.ಎಸ್. ಅಂಬಿಕಾ, ಶ್ರೀಮತಿ ಲತಾ ಸುಬ್ಬಣ್ಣ ಮತ್ತು ಶ್ರೀಮತಿ ಟಿ.ಎಸ್. ಲಕ್ಷ್ಮೀಯವರುಗಳು ನಡೆಸಿಕೊಟ್ಟರು.

ಪ್ರಶಸ್ತಿ ಪುರಸ್ಕಾರ ಹಾಗೂ ಬಹುಮಾನಗಳನ್ನು ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಹಾಗೂ ವಿದ್ಯಾರ್ಥಿ ವೇತನವನ್ನು ಹಿರಿಯ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾದ ಡಾ. ಎಂ. ನಂಜುಂಡಪ್ಪ ನವರು ವಿತರಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಆರ್. ಮೂಗೇಶಪ್ಪ ಸ್ವಾಗತಿಸಿದರು. ಪ್ರಕಟಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ ಪ್ರತಿಭಾ ಪುರಸ್ಕೃತರ ಪಟ್ಟಿಯನ್ನು ಹಾಗೂ ಬಹುಮಾನಿತರ ಪಟ್ಟಿಯನ್ನು ವಾಚಿಸಿದರು. ಶ್ರೀ ಎಂ.ಎಂ. ಸ್ವಾಮಿ ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳ ಹೆಸರನ್ನು ಪ್ರಕಟಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಪಿ. ಶಿವಾನಂದ ಭಾರತಿ ವಂದಿಸಿದರು. ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ನಟರಾಜು ನಿರೂಪಿಸಿದರು.

**ನಿಜವಾದ ಸಾಧಕರಿಗೆ ಪ್ರೋತ್ಸಾಹ**

ನಿಜವಾದ ಸಾಧಕರನ್ನು ಸುತ್ತೂರು ಶ್ರೀಮಠ ಗುರುತಿಸಿ ಗೌರವಿಸುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಷಿ ಆಗಸ್ಟ್ 19ರಂದು ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ನಡೆದ ಕೃತಿಗಳ ಲೋಕಾರ್ಪಣೆ ಮತ್ತು ಪ್ರಶಸ್ತಿಗಳ ಪ್ರದಾನ ಸಮಾರಂಭದಲ್ಲಿ ತಿಳಿಸಿದರು. ಅರ್ಹರಲ್ಲದವರು ಇಂದು ಪ್ರಶಸ್ತಿಗಳನ್ನು ಪಡೆದುಕೊಳ್ಳುತ್ತಿರುವ ಸಂದರ್ಭದಲ್ಲಿ ನಿಜವಾದ

ಕಲಾವಿದರನ್ನು, ಬರಹಗಾರರನ್ನು ಶ್ರೀಮಠ ಗುರುತಿಸಿದೆ. ಜೀವನದಲ್ಲಿ ಆಧ್ಯಾತ್ಮದ ಅನುಭೂತಿಯನ್ನು ಪಡೆದುಕೊಳ್ಳಬೇಕಾದರೆ ಸುತ್ತೂರು ಶ್ರೀಮಠಕ್ಕೆ ಬರಬೇಕು. ಶ್ರೀಮಠ ಸಾಹಿತ್ಯ, ಶೈಕ್ಷಣಿಕ, ಗ್ರಾಮೀಣಾಭಿವೃದ್ಧಿ, ಸಾಮಾಜಿಕ ಕಾರ್ಯಗಳ ಮೂಲಕ ಜನಮಾನಸದ ಸಿಂಹಾಸನವನ್ನು ಏರಿದೆ. ಇಲ್ಲಿನ ಕಾರ್ಯವಿಧಾನಗಳು ನಮ್ಮೆಲ್ಲರಿಗೂ ಮಾದರಿಯಾದವು. ಎಲ್ಲವನ್ನೂ ಶಿಸ್ತುಬದ್ಧವಾಗಿ ನಡೆಸಲಾಗುತ್ತದೆ. ಪೂಜ್ಯರ ಮಾರ್ಗದರ್ಶನದಲ್ಲಿ ಸದಾ ಹಲವಾರು ಆದರ್ಶಯುತ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದು ಅತ್ಯಂತ ಹೆಮ್ಮೆಯ ಮತ್ತು ಗೌರವದಿಂದ ಹೇಳಬೇಕಾದ ಅಂಶ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ಮಂತ್ರಮಹರ್ಷಿಗಳು ಮತ್ತು ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರು ಸೇರಿ ಮೈಸೂರಿನಲ್ಲಿ ಸಂಸ್ಕೃತ ಪಾಠಶಾಲೆಯನ್ನು ಆರಂಭಿಸಿದರು. ನಂತರ ಅದು ರಾಜೇಂದ್ರ ಶ್ರೀಗಳ ನೇತೃತ್ವದಲ್ಲಿ ಮುನ್ನಡೆಯಿತು. ಅದರ ಮಹತ್ತನ್ನು ಗುರುತಿಸಿ ಪ್ರಧಾನಮಂತ್ರಿಗಳು ನೂತನ ಕಟ್ಟಡವನ್ನು ಇತ್ತೀಚೆಗೆ ಉದ್ಘಾಟಿಸಿದರು. ಶ್ರೀ ಡಿ.ವಿ. ಹಾಲಭಾವಿ ಮತ್ತು ಶ್ರೀ ಎಂ. ವೀರಪ್ಪನವರು ತಮ್ಮ ವಿಶಿಷ್ಟ ಪ್ರತಿಭೆಗಳ ಮೂಲಕ ಕಲಾಕ್ಷೇತ್ರದಲ್ಲಿ ಸಾಧನೆಗೈದವರು. ಶ್ರೀ ಎಂ.ಸಿ. ಮಹದೇವಸ್ವಾಮಿಯವರು ನಾಟ್ಯಕಲಾವಿಶಾರದ ಎಂದೇ ಪ್ರಸಿದ್ಧರಾಗಿದ್ದರು. ಹಲವಾರು ಮೌಲ್ಯಯುತ ನಾಟಕಗಳ ಮೂಲಕ ಜನಪ್ರಿಯರಾಗಿದ್ದರು ಎಂದು ತಿಳಿಸಿದರು.

ಗದಗ ಜಗದ್ಗುರು ಶ್ರೀ ಶಿವಾನಂದ ಮಠದ ಜಗದ್ಗುರು ಶ್ರೀ ಸದಾಶಿವಾನಂದ ಮಹಾಸ್ವಾಮಿಗಳು ಜಗತ್ತು ಅತ್ಯಂತ ವೇಗವಾಗಿ ಬದಲಾಗುತ್ತಿದೆ. ಕಾರಣ ಇದು ವೈಜ್ಞಾನಿಕ ಯುಗ. ಹಾಗೆಯೇ ಸುತ್ತೂರು ಶ್ರೀಮಠವು ಕಳೆದ ಐದು ದಶಕಗಳಲ್ಲಿ ಸಾಧಿಸಿದ ಸಾಧನೆ ಅತ್ಯಂತ ಮಹತ್ವವಾದದ್ದು. ಚಿಂತನ ವಿಧಾನವನ್ನು ಬದಲಿಸಿದರೆ ಭವಿಷ್ಯವೂ ಬದಲಾಗುತ್ತದೆ ಎಂದು ಹೇಳಿದರು.

ಪ್ರಶಸ್ತಿ ಪುರಸ್ಕೃತರಾದ ಶ್ರೀ ಪ್ರಭುಚನ್ನಬಸವ ಸ್ವಾಮಿಗಳು, ಶ್ರೀ ಜಿ.ಆರ್. ಗೋವಿಂದರಾಜು ಮತ್ತು ಶ್ರೀ ಕೆ. ಪುರುಷೋತ್ತಮ ನಾಯಕ್ ಹಾಗೂ ಲೇಖಕರಾದ ಶ್ರೀ ಜಿ.ಎಂ. ಶಿವಪ್ರಸಾದ್ ಅನಿಸಿಕೆಗಳನ್ನು ಹಂಚಿಕೊಂಡರು.

ಜೆಎಸ್‌ಎಸ್ ಗ್ರಂಥಮಾಲೆಯಿಂದ ಪ್ರಕಟವಾಗಿರುವ ದಿ ಹೆರಿಟೇಜ್ ಆಫ್ ಸುತ್ತೂರ್ ಮಠ್, ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯ ಹಾಗೂ ನಾಟ್ಯಕಲಾವಿಶಾರದ ಎಂ.ಸಿ. ಮಹದೇವಸ್ವಾಮಿ ಕೃತಿಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಉಪನಿರ್ದೇಶಕರಾದ ಶ್ರೀ ಬಿ. ಮಂಜುನಾಥ್‌ರವರು ಬಿಡುಗಡೆಗೊಳಿಸಿದರು. 2020 ಹಾಗೂ 2021ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಯನ್ನು ಬೆಂಗಳೂರಿನ ಸ್ವಾಮಿ ವಿವೇಕಾನಂದ ಶೈಕ್ಷಣಿಕ ಅನುಸಂಧಾನದ ಶೈಕ್ಷಣಿಕ ನಿರ್ದೇಶಕರಾದ ಡಾ. ಎಚ್.ಎನ್. ಮುರಳೀಧರರವರಿಗೆ ಅನುಪಸ್ಥಿತಿಯಲ್ಲಿ, ಮತ್ತು ಅಥಣಿ ಶ್ರೀ ಮೋಟಗಿಮಠದ ಶ್ರೀ ಪ್ರಭುಚನ್ನಬಸವ ಸ್ವಾಮಿಗಳಿಗೆ ಹಾಗೂ 2021ನೇ ಸಾಲಿನ ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿಯನ್ನು ಹಿರಿಯ ಕಲಾವಿದರಾದ

ಶ್ರೀ ಜಿ.ಆರ್. ಗೋವಿಂದರಾಜುರವರಿಗೆ ಮತ್ತು ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಯನ್ನು ಕಲಾವಿದರಾದ ಶ್ರೀ ಕೆ. ಪುರುಷೋತ್ತಮ ನಾಯಕ್‌ರಿಗೆ ಪ್ರದಾನ ಮಾಡಲಾಯಿತು.

ಜೆಎಸ್‌ಎಸ್ ಲಲಿತಕಲಾ ವೃಂದದ ಶ್ರೀಮತಿ ರೂಪ ರವೀಶ್ ಮತ್ತು ಶ್ರೀಮತಿ ರೂಪ ಗುರುಪ್ರಸಾದ್ ಪ್ರಾರ್ಥಿಸಿದರು. ಶ್ರೀ ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಡಾ. ಎಂ.ಎನ್. ನಂದೀಶ್ ಹಂಚೆ ಪ್ರಶಸ್ತಿ ಪುರಸ್ಕೃತ ಕೃತಿಗಳ ಕುರಿತು ಮಾತನಾಡಿದರು. ಕೃತಿಗಳ ಲೇಖಕರುಗಳಾದ ಪ್ರೊ. ಎಂ. ಚಂದ್ರಶೇಖರಯ್ಯ, ಪ್ರೊ. ಎಂ. ನಟರಾಜ್ ಉಪಸ್ಥಿತರಿದ್ದರು. ಶ್ರೀ ಆರ್.ಎಸ್. ಪೂರ್ಣಾನಂದ, ಶ್ರೀ ಕುಮಾರಸ್ವಾಮಿ ವಿರಕ್ತಮಠ, ಶ್ರೀ ಎನ್.ಆರ್. ಶಿವಕುಮಾರ, ಶ್ರೀ ಎಚ್.ಎಸ್. ನಾಗರಾಜು ಪ್ರಶಸ್ತಿಪುರಸ್ಕೃತರ ಸ್ವಸ್ತಿ ವಾಚನ ಮಾಡಿದರು. ಶ್ರೀ ಬಿ.ಎ. ರಾಜಶೇಖರ ವಂದಿಸಿದರು. ಶ್ರೀ ಆರ್.ಎಸ್. ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಸಜ್ಜನ ರಾಜಕಾರಣಿ**

ಮಾಜಿ ಶಾಸಕರಾಗಿದ್ದ ಸಿ. ಗುರುಸ್ವಾಮಿಯವರು ನೇರ ನಡೆನುಡಿಯ ಸಜ್ಜನ ರಾಜಕಾರಣಿಗಳಾಗಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳು ಆಗಸ್ಟ್ 20ರಂದು ಚಾಮರಾಜನಗರ ತಾಲ್ಲೂಕು ಯಾನಗಹಳ್ಳಿಯಲ್ಲಿ ಏರ್ಪಡಿಸಿದ್ದ ಅವರ ಎರಡನೇ ವರ್ಷದ ಆರಾಧನೆ ಪ್ರಯುಕ್ತ ಸಂಸ್ಮರಣೆ ಹಾಗೂ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಗುರುಸ್ವಾಮಿಯವರು ಜನರ ಮತ್ತು ಸ್ನೇಹಿತರ ಒತ್ತಾಯದ ಮೇರೆಗೆ ರಾಜಕಾರಣ ಪ್ರವೇಶಿಸಿದ್ದರು. ಅಧಿಕಾರದಲ್ಲಿ ಇದ್ದಾಗ ಮತ್ತು ಇಲ್ಲದಿದ್ದಾಗಲೂ ಜನರ ಜೊತೆ ಸುಮಧುರ ಬಾಂಧವ್ಯ ಹೊಂದಿದ್ದರು. ಎಲ್ಲ ಮಠಗಳ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಅವರ ದಾರಿಯಲ್ಲಿಯೇ ಅವರ ಕುಟುಂಬದ ಸದಸ್ಯರು ಸಾಗುತ್ತಿದ್ದಾರೆ. ಅವರಿಗೂ ಒಳ್ಳೆಯ ಭವಿಷ್ಯವಿದೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಗುರುಸ್ವಾಮಿಯವರು ಹೃದಯವಂತಿಕೆಯ ವ್ಯಕ್ತಿತ್ವವುಳ್ಳವರಾಗಿದ್ದರು. ಸದಾ ಜನರೊಂದಿಗೆ ಬೆರೆಯುತ್ತಿದ್ದರು. ಮೌಲ್ಯಯುತ ರಾಜಕಾರಣಿಗಳಾಗಿದ್ದರು. ಅಂಥವರ ಆದರ್ಶಗಳನ್ನು ಇಂದಿನ ಯುವ ರಾಜಕಾರಣಿಗಳು ಪಾಲಿಸಬೇಕು ಎಂದು ತಿಳಿಸಿದರು.

ಮರಿಯಾಲ ಹಾಗೂ ಪಡುಗೂರು ಶ್ರೀಗಳು ಮಾತನಾಡಿದರು. ಸೋಮಹಳ್ಳಿ, ಸಾಲೂರು ಮಠ, ಹರವೆ, ಅರಕಲವಾಡಿ, ಹಂಡರಕಳ್ಳಿ, ಚಾಮರಾಜನಗರ, ಕುದೇರು ಮೊದಲಾದ ಮಠಗಳ ಶ್ರೀಗಳು ಹಾಗೂ ಶ್ರೀಮತಿ ಶೀಲಾ ಗುರುಸ್ವಾಮಿ, ಶ್ರೀಮತಿ ನವ್ಯಶ್ರೀ, ಅವರ ಕುಟುಂಬದ ಸದಸ್ಯರು ಹಾಗೂ ಅವರ ಎಲ್ಲ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ನಾಗಶ್ರೀ ಪ್ರತಾಪ್ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು.

**ಧ್ಯಾನಸ್ಥ ಸ್ಥಿತಿ ಅಗತ್ಯ**

ವನ್ಯಜೀವಿಗಳ ಛಾಯಾಚಿತ್ರ ತೆಗೆಯಲು ಧ್ಯಾನಸ್ಥ ಸ್ಥಿತಿ ಅಗತ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 16ರಂದು ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ವಿಶ್ವನಾಥ್ ಸುವರ್ಣರವರ 'ಕನ್ನಡ ನಾಡಿನ ಬಣ್ಣದ ಬಾನಾಡಿಗಳು' ಪುಸ್ತಕವನ್ನು ಲೋಕಾರ್ಪಣೆಗೊಳಿಸಿ ತಿಳಿಸಿದರು. ಪಕ್ಷಿಗಳು ಹಾಗೂ ಪ್ರಾಣಿಗಳ ಚಿತ್ರಗಳನ್ನು ಸೆರೆಹಿಡಿಯಲು ಬಕಪಕ್ಷಿಯಂತೆ ಕಾಯಬೇಕಾಗುತ್ತದೆ. ಅವುಗಳ ಸಹಜ ಚಿತ್ರಗಳು ಒಂದೇ ಸಲಕ್ಕೆ ಸಿಗುವುದಿಲ್ಲ. ಹಗಲು–ರಾತ್ರಿ ಎನ್ನದೇ ಕಾಯಬೇಕು. ಇಂತಹ ಸವಾಲುಗಳನ್ನು ದಾಟಿ ಉತ್ತಮವಾದಂತಹ ಚಿತ್ರಗಳನ್ನು ಸೆರೆಹಿಡಿಯುವ ಛಾಯಾಚಿತ್ರಗಾರರ ಸಾಹಸ ದೊಡ್ಡದು ಎಂದು ಹೇಳಿದರು.

ಖ್ಯಾತ ವನ್ಯಜೀವಿ ಛಾಯಾಗ್ರಾಹಕರಾದ ಶ್ರೀ ಕೃಪಾಕರರವರು ನಾವು ಇಷ್ಟಪಟ್ಟ ಕೆಲಸವನ್ನು ಮೊದಲು ಮಾಡಬೇಕು. ಆದರೆ ನಾವು ಬೇರೆಲ್ಲವನ್ನು ಸಮರ್ಪಕವಾಗಿ ಮಾಡಿಕೊಂಡು, ನಂತರ ನಮ್ಮ ಇಷ್ಟದ ಕೆಲಸವನ್ನು ಮಾಡುತ್ತೇವೆ. ಪ್ರಯಾಣದ ಅನುಭವ ಜೀವನಕ್ಕೆ ಅವಶ್ಯಕ. ಅನುಭವವಿಲ್ಲದ ಜೀವನ ಆತ್ಮವಿರದ ಶರೀರದಂತೆ ಎಂದರು.

ಪತ್ರಿಕಾ ಲೇಖಕರಾದ ಶ್ರೀ ಕಲ್ಗುಂಡಿ ನವೀನ್ ಮಾತನಾಡಿದರು. ದ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ. ಪಾಟೀಲ್, ಕರ್ನಾಟಕ ಕಾವಲುಪಡೆ ರಾಜ್ಯಾಧ್ಯಕ್ಷರಾದ ಶ್ರೀ ಮೋಹನ್ ಕುಮಾರ್ ಗೌಡ, ಶ್ರೀ ಎಸ್.ಆರ್. ಮಧುಸೂದನ, ಶ್ರೀ ವಿಶ್ವನಾಥ ಸುವರ್ಣ ಉಪಸ್ಥಿತರಿದ್ದರು. ಶ್ರೀ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

**ಕನ್ನಡ ಸರಳ ಸುಂದರ ಭಾಷೆ**

ಕನ್ನಡ ಸರಳ ಮತ್ತು ಸುಂದರವಾದ ಭಾಷೆ ಎಂದು ಪರಮಪೂಜ್ಯ ಜಗದ್ಗುರುಗಳು ಆಗಸ್ಟ್ 26ರಂದು ಅಮೆರಿಕದ ಮೇರಿಲ್ಯಾಂಡ್‌ನಲ್ಲಿ ನಡೆದ ಕಾವೇರಿ ಕನ್ನಡ ಸಂಘದ ಸುವರ್ಣ ಮಹೋತ್ಸವವನ್ನು ಉದ್ಘಾಟಿಸಿ ತಿಳಿಸಿದರು. ಅಮೆರಿಕದಲ್ಲಿ ಈ ಕನ್ನಡ ಸಂಘ ಸ್ಥಾಪನೆಯಾಗಿ 50 ವರ್ಷಗಳನ್ನು ಪೂರೈಸಿರುವುದು ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದ್ದು. ಕನ್ನಡ ಎಂಬುದು ಭಾಷೆಯಷ್ಟೇ ಅಲ್ಲ. ಅದು ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಸಾಹಿತ್ಯಕವಾಗಿಯೂ ಅಪೂರ್ವವಾದ ಶ್ರೀಮಂತಿಕೆಯನ್ನು ಹೊಂದಿದೆ. ಕಾವೇರಿ ನದಿ ತಲಕಾವೇರಿಯಲ್ಲಿ ಸಣ್ಣ ತೊರೆಯಾಗಿ ಉಗಮಿಸಿ ನಂತರ ದೊಡ್ಡ ನದಿಯಾಗಿ ಹರಿದಂತೆ, ಅಮೆರಿಕದಲ್ಲಿ ಚಿಕ್ಕದಾಗಿ ಆರಂಭವಾದ ಈ ಸಂಘ ಇಂದು ಬೃಹತ್ತಾಗಿ ಬೆಳೆಯುವಲ್ಲಿ ಅನೇಕ ಮಹನೀಯರುಗಳ ಕೊಡುಗೆಯಿದೆ. ಕಾವೇರಿ ಕನ್ನಡ ಸಂಘ ಹೀಗೆಯೇ ಯಶಸ್ಸು ಸಾಧಿಸುತ್ತಾ ಶತಮಾನೋತ್ಸವವನ್ನು ಆಚರಿಸುವಂತಾಗಲಿ ಎಂದು ಹಾರೈಸಿದರು.

ಅಮೆರಿಕದ ಮಾಂಟೊಗೊಮರಿಯ ಕೌಂಟಿಯ ಕಾರ್ಯನಿರ್ವಾಹಕರಾದ ಶ್ರೀ

ಮಾರ್ಕ್ ಎನ್ರಿಚ್‌ರವರು ಭಾರತದಲ್ಲಿ ಸಂಸ್ಕೃತದ ನಂತರ ಹೆಚ್ಚು ಬಳಕೆಯಿರುವ ಭಾಷೆಗಳಲ್ಲಿ ಕನ್ನಡವೂ ಒಂದಾಗಿದೆ. ಅಮೆರಿಕದಲ್ಲಿ ಎಲ್ಲ ಕಾರ್ಯಗಳಲ್ಲೂ ಭಾರತೀಯ ಸಮುದಾಯದವರು ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತಾರೆ. ಕಾವೇರಿ ಕನ್ನಡ ಸಂಘ 50 ವರ್ಷಗಳನ್ನು ಪೂರೈಸಿರುವುದು ಸ್ಮರಣೀಯವಾದ ದಿನ ಎಂದರು.

ಭಾರತದ ರಾಯಭಾರ ಕಚೇರಿಯ ಶೈಕ್ಷಣಿಕ ಮತ್ತು ಸಮುದಾಯ ವಿಭಾಗದ ಕೌನ್ಸಿಲರ್ ಆದ ಶ್ರೀ ಅನ್ಸುಲ್ ಶರ್ಮಾರವರು ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಅಮೆರಿಕದ ಕಾವೇರಿ ಕನ್ನಡ ಸಂಘ 50 ವರ್ಷಗಳನ್ನು ಪೂರೈಸಿರುವುದು ಸಂಭ್ರಮದ ಸಂಗತಿ. ಕಾವೇರಿ ಕನ್ನಡ ಸಂಘ ಸಾಂಸ್ಕೃತಿಕ ಮತ್ತು ಸಾಹಿತ್ಯಕವಾಗಿ ಭಾರತ ಮತ್ತು ಅಮೆರಿಕದ ಬಾಂಧವ್ಯವನ್ನು ವೃದ್ಧಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದೆ ಎಂದು ತಿಳಿಸಿದರು.

ರಾಬರ್ಟ್ ಹೆಚ್ ಬ್ಯುಸಿನೆಸ್ ಸ್ಕೂಲ್‌ನ ಡೀನ್‌ರವರಾದ ಶ್ರೀ ಪ್ರಭುದೇವ ಕೊನಾನರವರು ಅಮೆರಿಕದಲ್ಲಿ ಭಾರತೀಯ ಕಲೆ, ಸಂಸ್ಕೃತಿ, ಸಾಹಿತ್ಯ, ಆಹಾರ, ಉಡುಗೆ–ತೊಡುಗೆಗಳನ್ನು ಪರಿಚಯಿಸಿ ಬೆಳೆಸುವಲ್ಲಿ ಕಾವೇರಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಿದೆ. ಮುಂದಿನ ಪೀಳಿಗೆಗೂ ಇದನ್ನು ಉಳಿಸಿಕೊಂಡುಹೋಗುವ ಕಾರ್ಯವನ್ನು ಮಾಡುತ್ತಿದೆ. ಕನ್ನಡ ಮತ್ತು ಕನ್ನಡ ಸಂಸ್ಕೃತಿ ಈ ದೇಶದಲ್ಲಿ ಒಂದು ಘನತೆಯನ್ನು ಹೊಂದಿದೆ. ಇಲ್ಲಿನ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿಯೂ ಕನ್ನಡವನ್ನು ಬೋಧಿಸುವ ಕಾರ್ಯ ಆರಂಭವಾಗಬೇಕು ಆ ನಿಟ್ಟಿನಲ್ಲಿ ನಾವೆಲ್ಲ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಕಾವೇರಿ ಕನ್ನಡ ಸಂಘದ ಸಂಸ್ಥಾಪಕ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ರಾಜಶೇಖರ್ ದೊಡ್ಡಣ್ಣ, ಶ್ರೀ ಕಾವೇರಿ ಕೃಷ್ಣಮೂರ್ತಿ, ಅಧ್ಯಕ್ಷರಾದ ಶ್ರೀ ಸತೀಶ್ ಬೆಳಗುತ್ತಿ ಮತ್ತು ಸಂಘದ ವಿವಿಧ ಸಮಿತಿಗಳ ಸದಸ್ಯರುಗಳು ಉಪಸ್ಥಿತರಿದ್ದರು. ಅಮೆರಿಕದ ಕನ್ನಡಿಗರು ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಶ್ರೀ ಉಷಾ ಝಾ ತಂಡದವರು ರಾಷ್ಟ್ರಗೀತೆ ಹಾಗೂ ಪ್ರಾರ್ಥನೆ ಸಲ್ಲಿಸಿದರು.

**ಮೇರಿಲ್ಯಾಂಡ್‌ನಲ್ಲಿ ಹಿಂದು ದೇವಾಲಯಕ್ಕೆ ಭೂಮಿಪೂಜೆ**

ಅಮೆರಿಕದ ಮೇರಿಲ್ಯಾಂಡ್ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನಲ್ಲಿ ಆಗಸ್ಟ್ 28ರಂದು ಜೆಎಸ್‌ಎಸ್ ಹಿಂದು ದೇವಾಲಯ ಸಂಕೀರ್ಣದ ಭೂಮಿಪೂಜೆ ನೆರವೇರಿತು.

ಭೂಮಿಪೂಜೆ ಹಾಗೂ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮನುಷ್ಯನು

ತನ್ನೆಲ್ಲ ಲೌಕಿಕ ಕಾರ್ಯಚಟುವಟಿಕೆಗಳ ನಡುವೆ ಆಧ್ಯಾತ್ಮಿಕತೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು. ಅಮೆರಿಕದಲ್ಲಿ ನೆಲೆಸಿರುವ ಭಾರತೀಯರ ಸದಾಶಯದಂತೆ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ ಸ್ಥಾಪನೆಯಾಗಿದೆ. ಭಾರತೀಯ ಸಂಸ್ಕೃತಿಯ ಪ್ರಸಾರಕ್ಕಾಗಿ ಎಲ್ಲ ಪ್ರಯತ್ನ ಮಾಡಲಾಗುತ್ತಿದೆ. ಪರಿಶುದ್ಧವಾದ ಮನಸ್ಸಿನಿಂದ ಭಕ್ತಿಯ ಆಚರಣೆ ಮಾಡಿದಾಗ ಫಲ ಸಿಗುತ್ತದೆ. ಭಗವಂತ ಶಕ್ತಿ ನೀಡಿದಾಗ ಅದನ್ನು ಸಮಾಜದ ಒಳಿತಿಗಾಗಿ ಬಳಸಬೇಕು. ಜೀವನದಲ್ಲಿ ಸಂಪಾದನೆ ಮಾಡಿದ್ದನ್ನು ಸತ್ಕಾರ್ಯಗಳಿಗೆ ವಿನಿಯೋಗಿಸುವುದು ಅತಿ ಮುಖ್ಯ. ಏನೇ ನೀಡಿದರೂ ಸದ್ಭಾವನೆಯಿಂದ ನೀಡಬೇಕು. ಜಗತ್ತಿನಾದ್ಯಂತ ಜನರಲ್ಲಿ ಧಾರ್ಮಿಕತೆ ಬೆಳೆಸುತ್ತಿರುವ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು ಈ ಕಾರ್ಯಕ್ರಮಕ್ಕೆ ಆಗಮಿಸಿರುವುದು ಹೆಚ್ಚು ಮಹತ್ವ ನೀಡಿದೆ. ಶ್ರೀಗಳಿಗೂ ರಾಜೇಂದ್ರ ಶ್ರೀಗಳಿಗೂ ಅನ್ಯೋನ್ಯ ಸಂಬಂಧವಿತ್ತು. ಅದರ ಸಂಕೇತವಾಗಿ ರಾಜೇಂದ್ರ ಶ್ರೀಗಳ ಜಯಂತಿಯೊಂದಿಗೆ ಹೊಂದಿಕೊಂಡಿರುವ ಈ ಕಾರ್ಯಕ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು ಭಾಗವಹಿಸಿರುವುದು ಅರ್ಥಪೂರ್ಣವಾಗಿದೆ. ದೇವಾಲಯ ಸಂಕೀರ್ಣ ಎಲ್ಲರ ಸಹಾಯ–ಸಹಕಾರಗಳಿಂದ ಆದಷ್ಟು ಜಾಗ್ರತೆ ನಿರ್ಮಾಣವಾಗುವುದು ಎಂದು ತಿಳಿಸಿದರು.

ಮೈಸೂರು ಶ್ರೀ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದಕ್ಕೆ ಅತ್ಯಂತ ಸಂತಸ ವ್ಯಕ್ತಪಡಿಸಿದರು. ಈ ಸ್ಥಳದಲ್ಲಿ ಆಧ್ಯಾತ್ಮಿಕ ವಾತಾವರಣವಿರುವುದನ್ನು ನಾವೆಲ್ಲರೂ ಗಮನಿಸಬೇಕು. ಶಿಲಾಭಕ್ತಿ, ನರಭಕ್ತಿ ಮತ್ತು ಭೂಭಕ್ತಿಗಳು ಸೇರಿದಾಗ ಮಾತ್ರ ದೇವಸ್ಥಾನದ ನಿರ್ಮಾಣ ಸುಗಮವಾಗಿ ಆಗಲು ಸಾಧ್ಯವಾಗುತ್ತದೆ. ಇಂದು ಈ ಮೂರು ಭಕ್ತಿಗಳ ಸಮ್ಮಿಲನವಾಗಿದ್ದು ದೇವಸ್ಥಾನದ ಭೂಮಿಪೂಜೆಯ ಯೋಗ ಕೂಡಿಬಂದಿದೆ. ಇದೆಲ್ಲದಕ್ಕೂ ಮಕುಟಪ್ರಾಯವಾಗಿ ಗುರುಯೋಗವು ಸೇರಿದೆ. ಶ್ರೀ ಸುತ್ತೂರು ಮಠದ ಮೂರು ತಲೆಮಾರಿನ ಪೂಜ್ಯರುಗಳೊಂದಿಗೆ ಇರುವ ಸಂಬಂಧವನ್ನು ಮೆಲುಕುಹಾಕಿದರು. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಸಂಸ್ಥಾಪಿಸಿದ, ಸಾವಿರ ವರ್ಷಗಳ ಭವ್ಯ ಇತಿಹಾಸವಿರುವ ಶ್ರೀ ಸುತ್ತೂರು ಮಠದ ಸೇವೆಯನ್ನು ಸ್ಮರಿಸುತ್ತ ಮಂತ್ರಮಹರ್ಷಿಗಳ ಭೇಟಿ ಮಾಡಿದ್ದುದನ್ನು ನೆನಪಿಸಿಕೊಂಡರು. ರಾಜೇಂದ್ರ ಶ್ರೀಗಳ ಜೊತೆಗಿನ ನಿಕಟ ಬಾಂಧವ್ಯವನ್ನು ಮೆಲಕುಹಾಕಿದರು. ಅದೇ ಪ್ರೀತಿ ವಿಶ್ವಾಸಗಳು ಈಗಲೂ ಮುಂದುವರೆದಿರುವುದರ ಬಗೆಗೆ ಸಂತಸ ವ್ಯಕ್ತಪಡಿಸಿದರು.

ಮಾಂಟ್ಗೊಮರಿ ಕೌಂಟಿಯ ಕಾರ್ಯನಿರ್ವಾಹಕರಾದ ಶ್ರೀ ಮಾರ್ಕ್ ಎಲ್ರಿಚ್‌ರವರು ದೇವಸ್ಥಾನ ನಿರ್ಮಾಣದ ಸಂಕೀರ್ಣ ನಿರ್ಮಾಣಕ್ಕೆ ಅನುಮತಿ ದೊರೆಯುವುದು ನಿಧಾನವಾಗಿದೆ. ಈ ರೀತಿ ಮುಂದೆ ಆಗದಂತೆ ನೋಡಿಕೊಳ್ಳಲಾಗುವುದು. ಈ ಉತ್ತಮ ಕಾರ್ಯಕ್ಕೆ ಸಹಕರಿಸಿರುವ ಎಲ್ಲ ಸ್ವಯಂಸೇವಕರು ಹಾಗೂ ಸಂಸ್ಥೆಯ ಪದಾಧಿಕಾರಿಗಳ

ಶ್ರಮಕ್ಕೆ ಅಭಿನಂದಿಸಿದರು. ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದು, ಬ್ರಿಟಿಷರ ದಾಸ್ಯದಿಂದ ಮುಕ್ತಿಹೊಂದಿ ಅಭಿವೃದ್ಧಿಯಾಗುತ್ತಿದೆ. ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಮಾಂಟ್ಗೊಮರಿಯ ಕೌಂಟಿಯಲ್ಲಿದ್ದು, ಅವರೆಲ್ಲರ ಭಾವನೆಗಳಿಗೆ ಸಹಕರಿಸುವುದಾಗಿ ತಿಳಿಸಿದರು. ಕೋವಿಡ್ ಸಂದರ್ಭದಲ್ಲಿ ಭಾರತೀಯರ ಕೊಡುಗೆಯನ್ನು ಸ್ಮರಿಸಿ ಅಭಿನಂದಿಸಿದರು.

ಮೇರಿಲ್ಯಾಂಡ್‌ನ ಮಾಜಿ ಡೆಲಿಗೇಟ್‌ರ್‌ದ ಶ್ರೀಮತಿ ಅರುಣಾ ಮಿಲ್ಲರ್‌ರವರು ಜೆಎಸ್‌ಎಸ್ ಮಿಷನ್ ಭಾರತದ ಸಂಸ್ಕೃತಿಯನ್ನು ಇಲ್ಲಿನ ಜನರಿಗೆ ನೀಡುತ್ತಿದೆ. 1999ರಲ್ಲಿ ಸಣ್ಣದಾಗಿ ಆರಂಭವಾಗಿ ಇಂದು ದೊಡ್ಡ ಮಟ್ಟದಲ್ಲಿ ಬೆಳೆಯುತ್ತಿದೆ. ನೀವಿಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿರುವುದೇ ಇದಕ್ಕೆ ಸಾಕ್ಷಿ ಎಂದರು.

ಭಾರತದ ರಾಯಭಾರ ಕಚೇರಿಯ ಶೈಕ್ಷಣಿಕ ಮತ್ತು ಸಮುದಾಯ ವಿಭಾಗದ ಕೌನ್ಸಿಲರ್‌ರಾದ ಶ್ರೀ ಅನ್ಸುಲ್ ಶರ್ಮಾರವರು ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ ಭಾರತೀಯರೆಲ್ಲರನ್ನೂ ತಮ್ಮ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಮೂಲಕ ಒಗ್ಗೂಡಿಸಲು ನೆರವಾಗಿದೆ. ಜೆಎಸ್‌ಎಸ್ ಫಾರ್ಮಸಿ ಕಾಲೇಜು ಹಾಗೂ ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾಲಯಗಳ ನಡುವೆ ಆಗಿರುವ ಪರಸ್ಪರ ಒಡಂಬಡಿಕೆ ಭಾರತ ಮತ್ತು ಅಮೆರಿಕ ದೇಶಗಳ ಶೈಕ್ಷಣಿಕ ಸಂಬಂಧಗಳನ್ನು ಬಲಗೊಳಿಸುತ್ತವೆ. ಇದರಿಂದ ಎರಡು ಸಂಸ್ಥೆಗಳ ವಿದ್ಯಾರ್ಥಿಗಳು ಹಾಗೂ ಬೋಧಕರಿಗೆ ಅನುಕೂಲವಾಗುತ್ತಿದೆ ಎಂದು ಹೇಳಿದರು.

ಮೇರಿಲ್ಯಾಂಡ್ ಪ್ರಾಂತ್ಯದ ಅಂತರ್‌ಧರ್ಮೀಯ ಸಂಬಂಧಗಳ ಮುಖಂಡರಾದ ಶ್ರೀ ಮ್ಯಾನ್ಸ್‌ಫಿಲ್ಡ್ ಕೇಸಿ ಕೆಸ್ಮನ್‌ರವರು ಸತತ ಆರೇಳು ವರ್ಷಗಳಿಂದ ಆರ್ಕಿಟೆಕ್ಚರ್‌ಗಳು ಹಾಗೂ ಇಂಜಿನಿಯರುಗಳ ಶ್ರಮದಿಂದ ಇಂದು ಭೂಮಿಪೂಜೆ ಕಾರ್ಯಕ್ರಮ ನಡೆಯುತ್ತಿದೆ. ಈ ಕಾರ್ಯಕ್ರಮ ನಡೆಯಲು ಶ್ರಮಿಸಿದ ಎಲ್ಲರಿಗೂ ಅಭಿನಂದನೆಗಳು. ಈ ದೇವಸ್ಥಾನ ನಿರ್ಮಾಣದಿಂದ ಎಲ್ಲರಿಗೂ ಆಧ್ಯಾತ್ಮಿಕ ಜ್ಞಾನೋದಯಕ್ಕೆ ನೆರವಾಗಲಿದೆ. ಪವಿತ್ರ ಆಚರಣೆಗಳಿಗೆ ಅನುಕೂಲವಾಗಲಿದೆ. ಮಾಂಟ್ಗೊಮರಿ ಕೌಂಟಿ ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿದೆ ಎಂದರು.

ಮೇರಿಲ್ಯಾಂಡ್‌ನ ಡೆಲಿಗೇಟ್‌ರ್‌ದ ಶ್ರೀಮತಿ ಲಿಲಿ ಕ್ಯುರವರು ದೇವಸ್ಥಾನದ ಭೂಮಿಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಬಹಳ ಸಂತೋಷವಾಗಿದೆ. ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನೊಂದಿಗೆ ಒಂದು ದಶಕದಿಂದ ಆತ್ಮೀಯವಾದ ಸಂಬಂಧವನ್ನು ಹೊಂದಿದ್ದೇನೆ. ನಮ್ಮ ಆಧ್ಯಾತ್ಮಿಕತೆಯ ಬೇರುಗಳು ಗಟ್ಟಿಗೊಳ್ಳಲು ಈ ದೇವಸ್ಥಾನ ಸಹಕಾರಿ ಆಗಲಿದೆ ಎಂದು ತಿಳಿಸಿದರು.

ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಎಂ. ಕೃಷ್ಣೇಗೌಡರವರು ಎರಡು ದಶಕಗಳ ಹಿಂದೆ ಇಲ್ಲಿನ ಭಕ್ತರ ಅಪೇಕ್ಷೆಯಂತೆ ಪೂಜ್ಯರು ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್

ಸ್ಥಾಪಿಸಿದ್ದಾರೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಶ್ರೀಮಠ ಸೇವೆಯೇ ಪರಮಧರ್ಮ ಎಂದು ನಂಬಿದೆ ಎಂದು ತಿಳಿಸಿದರು.

ಹಾನ್ಸೆನ್ ಬೆಂಜಮಿನ್ ಎಲ್ ಕಾರ್ಡಿನ್‌ನ ಸಹಾಯಕರಾದ ಶ್ರೀ ಕೆನ್ ರಿಚರ್ಡ್‌ರವರು ಅಮೆರಿಕ ಸೆನೆಟ್‌ರವರಾದ ಶ್ರೀ ಕ್ರಿಸ್ ವಾನ್ ಹಾಲನ್‌ರವರ ಪ್ರಶಂಸಾ ಹಾಗೂ ಶುಭಾಶಯ ಪತ್ರಗಳನ್ನು ನೀಡಿ ಗೌರವಿಸಿದರು. ಅಕ್ಕ ಅಧ್ಯಕ್ಷರಾದ ಶ್ರೀ ಅಮರನಾಥ್ ಗೌಡರು, ಕೇರಳ ಸಂಘದ ಅಧ್ಯಕ್ಷರಾದ ಶ್ರೀ ಮಧುಸೂದನ್ ನಂಬಿಯಾರ್‌ರವರು, ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು, ಅಮೆರಿಕದ ವಿವಿಧ ರಾಜ್ಯಗಳು ಹಾಗೂ ಭಾರತದಿಂದ ಆಗಮಿಸಿದ್ದವರು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಶ್ರೀ ಸಂಜಾತ ಸೂಲಕುಂಟೆಯವರು ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ ಸ್ಥಾಪನೆ, ದೇವಾಲಯ ನಿರ್ಮಾಣದ ಕಲ್ಪನೆ, ದೇವಾಲಯ ಸಂಕೀರ್ಣದಲ್ಲಿ ಬರುವ ಸೌಲಭ್ಯಗಳು, ದಾನಿಗಳು ನೀಡಬಹುದಾದ ದಾನಗಳ ವಿವರಣೆ ನೀಡಿದರು. ಶ್ರೀ ಕುಮಾರ್ ರಾಜಶೇಖರರವರು ಶ್ರೀ ಸುತ್ತೂರು ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸೇವಾಕಾರ್ಯಗಳ ವಿವರಗಳನ್ನು ನೀಡಿದರು. ಶ್ರೀ ಸುಭಾಷ್ ಮಲ್ಗನ್‌ರವರು ಮಿಷನ್‌ನಲ್ಲಿ ನಡೆಯುತ್ತಿರುವ ಕಾರ್ಯಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾ, ಇದೆಲ್ಲವು ಸ್ವಯಂಸೇವಕರ ಸಹಾಯ ಸಹಕಾರಗಳಿಂದ ಮಾತ್ರ ಸಾಧ್ಯವಾಗುತ್ತಿದೆ ಎಂದು ತಿಳಿಸಿದರು. ಶ್ರೀಮತಿ ಜಯಶ್ರೀ ಜಗದೀಶ್‌ರವರು ದೇವಾಲಯ ನಿರ್ಮಾಣಕ್ಕೆ ಅಗತ್ಯವಿರುವ ಸಂಕೀರ್ಣಕ್ಕೆ ಸಂಪನ್ಮೂಲದ ವಿವರಗಳನ್ನು ತಿಳಿಸಿ ಸ್ವಯಂಪ್ರೇರಿತರಾಗಿ ಕೊಡುಗೆ ನೀಡಲು ಸಮ್ಮತಿಸಿದವರ ವಿವರಗಳನ್ನು ನೀಡಿದರು. ಗ್ಲೋಬಲ್ ಹಿಂದೂ ಹೆರಿಟೇಜ್ ಫೌಂಡೇಷನ್‌ನ ಅಧ್ಯಕ್ಷರಾದ ಶ್ರೀ ಪ್ರಕಾಶ ವೆಲಗಪುಡಿಯವರು ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳವರನ್ನು, ಶ್ರೀ ಉಮೇಶ್‌ಮೂರ್ತಿಯವರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳನ್ನು ಪರಿಚಯಿಸಿದರು. ಡಾ. ಬಾಬು ಕಿಲಾರರವರು ಸ್ವಾಗತಿಸಿದರು. ಶ್ರೀಮತಿ ಉಷಾಚಾರ್ ಮತ್ತು ತಂಡದವರು ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಕು. ಸಾನಿಕ ಮಹಾಶೆಟ್ಟಿ ಪ್ರಾರ್ಥಿಸಿದರು. ಶ್ರೀಮತಿ ರೂಪ ದಾಸರಿ ವಂದನೆ ಸಲ್ಲಿಸಿದರು. ಚಿ. ತ್ರಿಶೂಲ್ ನಾಗೇನಹಳ್ಳಿ ಹಾಗೂ ಶ್ರೀಮತಿ ಜಿಗ್ನಾ ಗೋಯಲ್‌ರವರುಗಳು ಕಾರ್ಯಕ್ರಮ ನಿರೂಪಣೆ ಮಾಡಿದರು. ಕಾರ್ಯಕ್ರಮದ ನಂತರ ಸ್ವಯಂಸೇವಕರ ಮಕ್ಕಳು ಹಾಗೂ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನಲ್ಲಿ ಭಾನುವಾರಗಳಂದು ನಡೆಯುವ ಶಾಲೆಯ ವಿದ್ಯಾರ್ಥಿಗಳು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಶ್ರೀ ಭದ್ರಗಿರಿ ಕೇಶವದಾಸರವರ ಮಕ್ಕಳಾದ ಶ್ರೀ ಮುರುಳಿಧರ್ ಪೈರವರಿಂದ ಕೀರ್ತನೆ ಏರ್ಪಡಿಸಲಾಗಿತ್ತು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಿಷನ್‌ನ ಭಾನುವಾರದ ಶಾಲೆಯ ಸಂಚಾಲಕರಾದ ಶ್ರೀ ಪುಟ್ಟರಾಜು ಎಂ. ಮಾದಯ್ಯ ಹಾಗೂ ಕು. ಸಮೀಕ್ಷಾ ಮಹಾಶೆಟ್ಟಿ ನಿರೂಪಣೆ ಮಾಡಿದರು. ಕಾರ್ಯಕ್ರಮದ ನಂತರ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

□

# ಪ್ರಸಾದ



## ಕೃತಿ-ಸ್ವೀಕೃತಿ

---

**ರಾಯಗಡದ ರಾಣಿ**
ಡಾ. ಬಸವಪ್ರಭು ಪಾಟೀಲ್
ಪ್ರ.: ಕವಿತಾ ಪ್ರಕಾಶನ
ಕೆಹೆಚ್‌ಬಿ ಕಾಲೋನಿ, ಮನವಿ
ರಾಯಚೂರು ಜಿಲ್ಲೆ 584123
ಪು. 146, ಬೆಲೆ: 150/-

**ಮಧುಮೇಹ**
**(ಮನುಕುಲದ ಅಗೋಚರ ಶತ್ರು)**
ಡಾ. ವಿ. ಲಕ್ಷ್ಮಿನಾರಾಯಣ ಮತ್ತು
ಡಾ. ಸೂರಜ್ ತೇಜಸ್ವಿ
ಪ್ರ.: ಸಪ್ನ ಬುಕ್‌ಹೌಸ್ ಪ್ರೈ. ಲಿ.
ಗಾಂಧಿನಗರ, ಬೆಂಗಳೂರು
ಪು. 320, ಬೆಲೆ: 250/-

**ಇರುಳ ಕಳೆದ ಬೆಳಕು (ಡಾ. ಕುರುಂಜಿ ವೆಂಕಟ್ರಮಣ ಗೌಡರ ಒಡನಾಟದ ನೆನಪುಗಳು)**
ಡಾ. ಬಿ. ಪ್ರಭಾಕರ ಶಿಶಿಲ
ಪ್ರ.: ಶರ ಪ್ರಕಾಶನ
ಅಂಬಾಳೆ ಅಡ್ಕ, ಸೂಳ್ಯ
ಬೆಲೆ: 499/-

**Diabetes**
Dr. V. LakshmiNarayana &
Dr. Suraj Tejasvi
Sri Publications Trust
The art of living international centre, Kanakapura Road
Bengaluru
Price: 499/-

**Health Mantras of Diabetes**
Nandini Murthy
Notion Press
MC Nicholas Road Chetpet
Chennai
Price: 199/-

**ಪ್ರಬಂಧ ಸಂಚಯ**
ಹೆಚ್.ವಿ. ಶೇಷಾದ್ರಿ
ಪ್ರ.: ರಾಷ್ಟ್ರೋತ್ಥಾನ ಸಾಹಿತ್ಯ
ಕೇಶವ ಶಿಲ್ಪ, ಕೆಂಪೇಗೌಡನಗರ
ಬೆಂಗಳೂರು
ಪು. 272. ಬೆಲೆ: 225/-

**Dharmapal Classics Series-1 Panchayat Raj As the basis of Indian Polity**
Dharmapal
Rastrothana Sahitya
Keshava Nagar, Bengaluru
Price: 150/-

**Dharmapal Classics Series-2 Indian Science and Technology in the eighteenth centers**
Dharmapal
Rastrothana Sahitya
Keshava Nagar, Bengaluru
Price: 300/-

**Dharmapal Classics Series-3 Civil disobedience and Indian tradition with some early nineteenth century documents**
Dharmapal
Rastrothana Sahitya
Keshava Nagar, Bengaluru
Price: 225/-

**Dharmapal Classics Series-4 The Beautiful Tree Indigenous Indian Education in the Eighteenth Century**
Dharmapal
Rastrothana Sahitya
Keshava Nagar, Bengaluru
Price: 400/-

**Dharmapal Classics Series-5 Bharatiya Chitta Manas and Kala**
Dharmapal
Rastrothana Sahitya
Keshava Nagar, Bengaluru
Price: 150

**ನಾದಸನ್ನಿಧಿ**
ಕೆ.ಎನ್. ರೆಡ್ಡಿ
ಪ್ರ.: ಎಸ್.ಬಿ.ಇ. ಟ್ರಸ್ಟ್
ಜಿಡಿಎ ಲೇಔಟ್, ದರಿಯಾಪುರ
ಕಲಬುರಗಿ
ಪು: 270/- ಬೆಲೆ: 500/-

**ಯೋಗಿಗಳ ಯೋಗಿ ಶಿವಯೋಗಿ ಸಿದ್ಧರಾಮ**
ಮುದ್ದೇನಹಳ್ಳಿ ನಂಜಯ್ಯ
ಪ್ರ.: ರವಿಚಂದ್ರ ಪ್ರಕಾಶನ
ಮುದ್ದೇನಹಳ್ಳಿ, ತುಮಕೂರು
ಪು: 104/- ಬೆಲೆ: 150/-

**ಚನ್ನಕಾಂತ ವಿಚಾರ ಬಿಂದುಗಳು**
ಷ.ಬ್ರ. ಶ್ರೀ ಡಾ. ಚನ್ನವೀರ ಶಿವಾಚಾರ್ಯರು
ಪ್ರ.: ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಸುಕ್ಷೇತ್ರ ಹಾರಕೂಡ
ಬಸವಕಲ್ಯಾಣ ತಾ.,
ಬೀದರ ಜಿಲ್ಲೆ
ಪು: 100/- ಬೆಲೆ: 150/-

**ನೆನಪಿನ ಡಬ್ಬಿ ಬದುಕಿಗೆ ಹೆಗಲಾದ ಅಪ್ಪನ ಚಿತ್ರಣ**
ಮಹೇಶ ಅರಬಳ್ಳಿ
ಪ್ರ.: ಕವಿತಾ ಪ್ರಕಾಶನ
ಚಾಮರಾಜಪುರಂ
ಮೈಸೂರು
ಪು: 136/- ಬೆಲೆ: 130/-

## ಲೇಖಕರ ವಿಳಾಸ

**ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು**
ಜ್ಞಾನಯೋಗಾಶ್ರಮ
ಬಿಎಲ್‌ಡಿಇಎ ರಸ್ತೆ, ಆದರ್ಶನಗರ
ವಿಜಯಪುರ 586103

**ಡಾ. ದೊಡ್ಡರಂಗೇಗೌಡ**
140, ಶ್ರೀಸನ್ನಿಧಿ, 3ನೇ ಮೇನ್
4ನೇ ಹಂತ, ಕತ್ರಿಗುಪ್ಪೆ ಅಂಚೆ, ಬನಶಂಕರಿ
ಬೆಂಗಳೂರು 560 085
ಮೊ: 9900253495

**ಡಾ. ಮೋಹನ್ ಸಿಂಗ್**
ಉಪನ್ಯಾಸಕರು, ಹಿಂದಿ ವಿಭಾಗ
ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು
ನಂಜನಗೂಡು
ಮೊ: 9164338191

**ಪ್ರೊ. ಜಿ.ಎಸ್. ಜಯದೇವ್**
ಕಾರ್ಯದರ್ಶಿಗಳು, ದೀನಬಂಧು ಸಂಸ್ಥೆ
ಅರಣ್ಯ ಇಲಾಖೆ ಹತ್ತಿರ
ಚಾಮರಾಜನಗರ 571 313
ಮೊ: 9449406454

**ಡಾ. ಭ. ನಾಗರಾಜ್**
257, ಯೋಗಕ್ಷೇಮ, ಬಿ. ಬ್ಲಾಕ್
ಜೆ.ಪಿ. ನಗರ, ಪುಟ್ಟಸ್ವಾಮಿ ಸ್ಕೂಲ್ ಹತ್ತಿರ
ಮೈಸೂರು 570 008
ಮೊ: 9845459409

**ಪ್ರೊ. ಎಚ್.ಟಿ. ಶೈಲಜಾ**
223, 12ನೇ ಮೇನ್, 3ನೇ ಕ್ರಾಸ್
ಸರಸ್ವತಿಪುರಂ, ಮೈಸೂರು 570 009
ಮೊ: 9886688255




ಮೈಸೂರು ಶ್ರೀ ಸುತ್ತೂರು ಮಠಕ್ಕೆ ಕೇಂದ್ರದ ಮಾನವ ಸಂಪನ್ಮೂಲ ಹಾಗೂ ಉನ್ನತ ಶಿಕ್ಷಣ ಖಾತೆ ರಾಜ್ಯ ಸಚಿವರಾದ ಡಾ. ಸತ್ಯಪಾಲ್ ಸಿಂಗ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದು ಸಮಾಲೋಚನೆ ನಡೆಸಿದರು (30 ಜೂನ್ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಗೌ.ನ್ಯಾ. ಶ್ರೀ ಎನ್. ಸಂತೋಷ್ ಹೆಗ್ಡೆಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು (30 ಜೂನ್ 2022)



ಪರಮಪೂಜ್ಯ ಜಗದ್ಗುರುಗಳವರು ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಸಿ ನೆಡಲಾಯಿತು. ಚಿತ್ರದಲ್ಲಿ ಶ್ರೀ ಎಲ್.ಆರ್. ಮಹದೇವ ಸ್ವಾಮಿ, ಶ್ರೀ ಅಜಿತ್ ಕುಲಕರ್ಣಿ, ಶ್ರೀ ಬಿ.ಪಿ. ರವಿ ಮೊದಲಾದವರುಗಳಿದ್ದಾರೆ (3 ಜುಲೈ 2022)



ಮೈಸೂರು ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ ನಿರ್ಮಿಸಲಾಗುತ್ತಿರುವ ಸ್ವಾಮಿ ವಿವೇಕಾನಂದ ಸ್ಮಾರಕ ಸಾಂಸ್ಕೃತಿಕ ಯುವ ಕೇಂದ್ರ – ವಿವೇಕ ಸ್ಮಾರಕದ ಭೂಮಿಪೂಜೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶ್ರೀಮತಿ ಸುನಂದಾ ಪಾಲನೇತ್ರ, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಎಸ್.ಎ. ರಾಮದಾಸ್, ಶ್ರೀ ಎಲ್. ನಾಗೇಂದ್ರ, ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್, ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಡಾ. ಶ್ರೀ ಸೋಮೇಶ್ವರನಾಥ ಸ್ವಾಮಿಗಳು, ಶ್ರೀ ಪ್ರತಾಪ ಸಿಂಹ, ಶ್ರೀ ಎಚ್.ವಿ. ರಾಜೀವ್ ಮೊದಲಾದವರುಗಳು (6 ಜುಲೈ 2022)




ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಮತ್ತು ನಗರ ಘಟಕದ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಥಣಿ ಶ್ರೀ ಮೋಟಗಿಮಠದ ಶ್ರೀ ಪ್ರಭುಚನ್ನಬಸವ ಸ್ವಾಮಿಗಳವರು ರಚಿಸಿರುವ "ಮಹಾತ್ಮರ ಚರಿತಾಮೃತ" ಕೃತಿಯನ್ನು ಶ್ರೀ ಕುಂ. ವೀರಭದ್ರಪ್ಪನವರು ಲೋಕಾರ್ಪಣೆಗೊಳಿಸಿದರು. ಡಾ. ನಂದೀಶ್ ಹಂಚೆ, ಶ್ರೀ ಎಸ್. ಷಡಕ್ಷರಿ, ಶ್ರೀ ದೇವನೂರು ಶಂಕರ್, ಶ್ರೀ ಮ.ಗು. ಸದಾನಂದಯ್ಯ, ಶ್ರೀ ಹೆಳವರಹುಂಡಿ ಸಿದ್ದಪ್ಪನವರುಗಳಿದ್ದಾರೆ (9 ಜುಲೈ 2022)



ಮಾಗಡಿ ತಾಲ್ಲೂಕು ಕಂಚುಗಲ್‌ನ ಶ್ರೀ ಬಂಡೇಮಠದಲ್ಲಿ ಶ್ರೀ ಶಿವರುದ್ರ ಸ್ವಾಮಿಗಳ ಸಂಸ್ಮರಣೆ ಹಾಗೂ ಶ್ರೀ ಬಸವಲಿಂಗ ಸ್ವಾಮಿಗಳ ಚರಪಟ್ಟಾಧಿಕಾರದ ರಜತ ಮಹೋತ್ಸವ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಸಿದ್ಧಗಂಗಾ ಶ್ರೀಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎಸ್.ಆರ್. ವಿಶ್ವನಾಥ್, ಶ್ರೀ ಎಂ.ಬಿ. ಪಾಟೀಲ್, ಬೇಲಿಮಠದ ಶ್ರೀಗಳು, ಬಂಡೇಮಠದ ಶ್ರೀಗಳು, ಶ್ರೀ ದೊಡ್ಡಣ್ಣ, ಶ್ರೀ ಬಿ.ಎಸ್. ಪರಮಶಿವಯ್ಯನವರುಗಳಿದ್ದಾರೆ (3 ಜುಲೈ 2022)



ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ 29ನೇ ವಾರ್ಷಿಕೋತ್ಸವ ಹಾಗೂ ‘ಶಿವರಾತ್ರಿ ರಾಜೇಂದ್ರ ವೈಭವ’ ನೃತ್ಯರೂಪಕ ಕೃತಿಯ ಬಿಡುಗಡೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ವಿ. ಮಾಲಿನಿ, ಡಾ. ರತ್ನ ಹಾಲಪ್ಪಗೌಡ, ಶ್ರೀಮತಿ ಸುನಂದ ಪಾಲನೇತ್ರ, ಶ್ರೀ ತೋಂಟದಾರ್ಯ, ಶ್ರೀ ಮಡ್ಡೀಕೆರೆ ಗೋಪಾಲ್ ಮತ್ತು ಡಾ. ಎಂ.ಜಿ.ಆರ್. ಅರಸ್‌ರವರು ಗಳಿದ್ದಾರೆ (9 ಜುಲೈ 2022)



ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿ ಹಾಗೂ ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಗಳನ್ನು ಶ್ರೀ ಪ್ರಭು ಚನ್ನಬಸವ ಸ್ವಾಮಿಗಳು, ಶ್ರೀ ಜಿ.ಆರ್. ಗೋವಿಂದರಾಜು ಮತ್ತು ಶ್ರೀ ಕೆ. ಪುರುಷೋತ್ತಮ ನಾಯಕ್‌ರವರುಗಳಿಗೆ ಪ್ರದಾನ ಮಾಡಲಾಯಿತು. ಶ್ರೀ ಬಿ. ಮಂಜುನಾಥ್, ಶ್ರೀ ಸುರೇಶ್ ಹಾಲಭಾವಿ, ಶ್ರೀಮತಿ ಪಾರ್ವತಿ ಹಾಲಭಾವಿ, ಶ್ರೀ ಚಂದ್ರಕಾಂತ್ ಬೆಲ್ಲದ್, ಗದಗ ಶ್ರೀ ಶಿವಾನಂದ ಮಠದ ಜಗದ್ಗುರು ಶ್ರೀ ಸದಾಶಿವಾನಂದ ಸ್ವಾಮಿಗಳು, ನಾಡೋಜ ಡಾ. ಮಹೇಶ್ ಜೋಷಿ, ಶ್ರೀಮತಿ ಸುಶೀಲ ಸತೀಶ್, ಶ್ರೀ ಸತೀಶ್ ಪ್ರಫುಲ್ಲಚಂದ್ರ, ಪ್ರೊ. ಎಂ.ನಟರಾಜ್‌ರವರುಗಳಿದ್ದಾರೆ (18 ಆಗಸ್ಟ್2022)



ಬೆಂಗಳೂರು ಜಯನಗರ ವಿಧಾನಸಭಾ ಕ್ಷೇತ್ರದ ಶಾಕಾಂಬರಿ ನಗರದ ಉದ್ಯಾನವನದಲ್ಲಿ ಬಸವಣ್ಣನವರ ಪುತ್ಥಳಿ ಅನಾವರಣ ಕಾರ್ಯಕ್ರಮ ಪರಮಪೂಜ್ಯ ಜಗದ್ಗುರುಗಳು ಮತ್ತು ಸಿದ್ಧಗಂಗಾ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆಯಿತು. ಶ್ರೀ ಮಲ್ಲಿಕಾರ್ಜುನ್, ಶ್ರೀ ರಾಮಲಿಂಗಾರೆಡ್ಡಿ, ಶ್ರೀಮತಿ ಸೌಮ್ಯ ರೆಡ್ಡಿ, ಶ್ರೀ ಡಿ.ಕೆ. ಶಿವಕುಮಾರ್, ಶ್ರೀ ಎಂ.ಬಿ. ಪಾಟೀಲ್, ಶ್ರೀಮತಿ ಗಂಗಾಂಬಿಕಾ ಮಲ್ಲಿಕಾರ್ಜುನ್ ಮೊದಲಾದವರುಗಳಿದ್ದಾರೆ (10 ಜುಲೈ 2022)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆದ ಗುರುಪೂರ್ಣಿಮಾ ಹಾಗೂ 244ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ರವರು ಉಪನ್ಯಾಸ ನೀಡಿದರು. ವಿದ್ವಾನ್ ಗಾನಪ್ರವೀಣ ಯೋಗೀಶ ಶರ್ಮ ಬಳ್ಳಪದವು ಗಾಯನ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ಕೇಶವ್ ಮೋಹನ್‌ಕುಮಾರ್ ಹಾಗೂ ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿಯವರುಗಳು (13 ಜುಲೈ 2022)



ವೀರಶೈವ ಲಿಂಗಾಯತ ಮಹಾಸಭಾ ಮತ್ತು ಬಸವ ಸಮಿತಿ ವತಿಯಿಂದ ಹುಣಸೂರಿನಲ್ಲಿ ಆಯೋಜಿಸಿದ್ದ ಬಸವ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಬಿ.ವೈ. ವಿಜಯೇಂದ್ರರವರು ಉದ್ಘಾಟಿಸಿದರು. ಶ್ರೀಮತಿ ಶಮೀನಾ, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಸಿ.ಎಚ್. ವಿಜಯಶಂಕರ್, ಶ್ರೀ ಎಚ್.ಪಿ. ಮಂಜುನಾಥ್, ಗಾವಡಗೆರೆ ಶ್ರೀಗಳು, ಶ್ರೀ ಎ.ಹೆಚ್. ವಿಶ್ವನಾಥ್, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಎಂ. ರುದ್ರೇಶ್ ಹಾಗೂ ಡಾ. ನಂದೀಶ್ ಹಂಚೆ ಮೊದಲಾದವರುಗಳಿದ್ದಾರೆ (14 ಜುಲೈ 2022)




ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ಹಾಗೂ ಎಚ್.ವಿ. ರಾಜೀವ್ ಸ್ನೇಹ ಬಳಗದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ "ವನಸಿರಿ" ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಿದರು. ಶ್ರೀಮತಿ ಮಂಗಳ ಸೋಮಶೇಖರ್, ಶ್ರೀ ಎಲ್. ನಾಗೇಂದ್ರ, ಸಚಿವ ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಪ್ರತಾಪ ಸಿಂಹ, ಶ್ರೀ ಎಚ್.ವಿ. ರಾಜೀವ್, ಶ್ರೀ ಸಿ.ಎನ್. ಮಂಜೇಗೌಡ ಹಾಗೂ ಶ್ರೀ ಜಿ.ಟಿ. ದೇವೇಗೌಡರವರುಗಳಿದ್ದಾರೆ (13 ಜುಲೈ 2022)




ಮೈಸೂರು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಪೌಂಡರೀಕ ಸಭಾಂಗಣದಲ್ಲಿ ಯೋಗ ಶಿಕ್ಷಕರಾದ ಶ್ರೀ ಎನ್. ಅನಂತರವರು ರಚಿಸಿರುವ 'ಯೋಗಿರಾಜ ಶ್ರೀ ತಿರುಮಲೆ ಕೃಷ್ಣಮಾಚಾರ್ಯ' ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಶ್ರೀ ಎಚ್.ವಿ. ರಾಜೀವ್, ಶ್ರೀ ಮಡ್ಡೀಕೆರೆ ಗೋಪಾಲ್, ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮಿಗಳು, ಸಚಿವ ಶ್ರೀ ಎಸ್.ಟಿ. ಸೋಮಶೇಖರ್, ಡಾ. ಎಸ್.ಪಿ. ಯೋಗಣ್ಣ ಹಾಗೂ ಶ್ರೀ ಎನ್. ಅನಂತುರವರುಗಳಿದ್ದಾರೆ (12 ಜುಲೈ 2022)



ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ 133ನೇ ಸಂಸ್ಥಾಪನಾ ದಿನಾಚರಣೆ ಹಾಗೂ 'ನೆನೆ ನೆನೆ ಆ ದಿನ' ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸರಾದ ಡಾ. ಗುರುಲಿಂಗ ಕಾಪಸೆಯವರಿಗೆ 'ಸಿರಿಗನ್ನಡಂ ಗೆಲ್ಗೆ ರಾ.ಹ. ದೇಶಪಾಂಡೆ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಶ್ರೀ ಶಿವಾನಂದ ಭಾವಿಕಟ್ಟಿ, ಶ್ರೀ ಶಂಕರ್ ಹಲಗತ್ತಿ, ಶ್ರೀ ವೀರಣ್ಣ ಒಡ್ಡಿನ, ಶ್ರೀಮತಿ ಶೈಲಜಾ ಅಮರಶೆಟ್ಟಿ, ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಡಾ. ಸಂಜೀವ್ ಕುಲಕರ್ಣಿ, ಶ್ರೀ ಬಸವಪ್ರಭು ಹೊಸಕೇರಿ, ಶ್ರೀ ಚಂದ್ರಕಾಂತ್ ಬೆಲ್ಲದ್, ಶ್ರೀ ವೀರಣ್ಣ ಮತ್ತಿಕಟ್ಟಿ, ಡಾ. ಮಲ್ಲಿಕಾ ಘಂಟಿ ಮತ್ತು ಪಂ. ಎಂ. ವೆಂಕಟೇಶಕುಮಾರ್‌ವರುಗಳಿದ್ದಾರೆ (20 ಜುಲೈ 2022)




ಬೆಂಗಳೂರು ಜಯನಗರದ ಯುವಪಥ ವಿವೇಕ ಸಭಾಂಗಣದಲ್ಲಿ ವಿಕಿ ಬುಕ್ಸ್ – ಸ್ಮಾರ್ಟ್ ಕೀ ಹಾಗೂ ವಿಶ್ವವಾಣಿ ಪುಸ್ತಕದ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಕಿರಣ್ ಉಪಾಧ್ಯಾಯರವರ 'ವಿಶ್ವತೋಮುಖ' ಹಾಗೂ ಶ್ರೀ ವಿಶ್ವೇಶ್ವರ ಭಟ್‌ರವರ 'ಸುದ್ದಿಮನೆ ಕತೆ', 'ಇದೇ ಅಂತರಂಗ ಸುದ್ದಿ' ಹಾಗೂ 'ನೂರೆಂಟು ವಿಶ್ವ' ಕೃತಿಗಳನ್ನು ಹಿರಿಯ ಸಾಹಿತಿ ಶ್ರೀ ಎಸ್.ಎಲ್. ಭೈರಪ್ಪನವರು ಬಿಡುಗಡೆಗೊಳಿಸಿದರು. ಶ್ರೀ ವಿಶ್ವೇಶ್ವರ ಭಟ್, ಶ್ರೀ ಪ್ರತಾಪ ಸಿಂಹ, ಶ್ರೀ ನಾಗೇಶ್ ಹೆಗಡೆ ಮತ್ತು ಶ್ರೀ ಕಿರಣ್ ಉಪಾಧ್ಯಾಯರವರುಗಳಿದ್ದಾರೆ (22 ಜುಲೈ 2022)




ಮೈಸೂರು ಕಲಾಮಂದಿರದಲ್ಲಿ ಬೆಂಗಳೂರು ಜನಮನ ಪ್ರತಿಷ್ಠಾನದಿಂದ ಆಯೋಜಿಸಿದ್ದ 'ಸಿದ್ದರಾಮಯ್ಯ ಆಡಳಿತ : ನೀತಿ ನಿರ್ಧಾರ, ತಾತ್ವಿಕ ವಿವೇಚನೆ' ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರು ಮತ್ತು ಶ್ರೀ ಆದಿಚುಂಚನಗಿರಿ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಎಚ್.ಸಿ. ಮಹದೇವಪ್ಪ, ಶ್ರೀ ಬಿ.ಎಲ್. ಶಂಕರ್, ಶ್ರೀ ಸಿದ್ದರಾಮಯ್ಯ, ಶ್ರೀ ಮಲ್ಲಿಕಾರ್ಜುನ ಖರ್ಗೆ, ಡಾ. ಶ್ರೀ ಸೋಮನಾಥ ಸ್ವಾಮಿಗಳು, ಶ್ರೀ ಶಿವಾನಂದಪುರಿ ಸ್ವಾಮಿಗಳು. ಶ್ರೀ ಚಿಕ್ಕಣ್ಣ, ಶ್ರೀ ಕೆ. ರಾಮಯ್ಯ, ಶ್ರೀ ಕೆ.ಎಸ್. ಶಿವರಾಂ ಮೊದಲಾದವರುಗಳಿದ್ದಾರೆ (23 ಜುಲೈ 2022)



ಮೈಸೂರು ವಿ. ಸೋಮಣ್ಣ ಅಭಿಮಾನಿ ಬಳಗದ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ 'ಶ್ರೀ ವಿ. ಸೋಮಣ್ಣ ವನಸಿರಿ ಪ್ರಶಸ್ತಿ' ಪ್ರದಾನ ಹಾಗೂ ಜನ್ಮದಿನದ ಸಂಭ್ರಮ ಕಾರ್ಯಕ್ರಮವನ್ನು ಸಂಸದರಾದ ಶ್ರೀ ಪ್ರತಾಪ ಸಿಂಹ ಉದ್ಘಾಟಿಸುತ್ತಿರುವುದು. ಶ್ರೀ ಚಿನ್ನಸ್ವಾಮಿ ವಡ್ಡಗೆರೆ, ಶ್ರೀಮತಿ ಸುನಂದ ಪಾಲನೇತ್ರ, ಶ್ರೀಮತಿ ಶೈಲಜಾ ಸೋಮಣ್ಣ, ಸಚಿವರಾದ ಶ್ರೀ ವಿ. ಸೋಮಣ್ಣ, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಸಿ.ಎನ್. ಮಂಜೇಗೌಡರವರುಗಳಿದ್ದಾರೆ (23 ಜುಲೈ 2022)



ದೊಡ್ಡಬಳ್ಳಾಪುರ ಶ್ರೀ ಬಸವೇಶ್ವರ ಮಠದ ಶ್ರೀ ಮಲ್ಲಿಕಾರ್ಜುನ ದೇಶಿಕೇಂದ್ರ ಮಹಾಸ್ವಾಮಿಗಳವರ 25ನೇ ಸಂಸ್ಮರಣೋತ್ಸವ ಹಾಗೂ ಶ್ರೀ ನಿರಂಜನ ದೇಶಿಕೇಂದ್ರ ಸ್ವಾಮಿಗಳವರ ಪಟ್ಟಾಧಿಕಾರದ ವಾರ್ಷಿಕ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರು ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ವಿಜಯಪುರ ಶ್ರೀಗಳು, ಅವಧೂತ ಶ್ರೀ ವಿನಯ್ ಗುರೂಜಿ, ಶ್ರೀ ಹೊನ್ನಮ್ಮ ಗವಿಮಠದ ಶ್ರೀಗಳು ಮೊದಲಾದವರುಗಳಿದ್ದಾರೆ (24 ಜುಲೈ 2022)



ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಮೈಸೂರು–ಚಾಮರಾಜನಗರ ವಿ. ಸೋಮಣ್ಣ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ವಿಜ್ಞಾನ ಮತ್ತು ರೊಬೋಟಿಕ್ ಪ್ರಯೋಗಾಲಯವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಸಿ.ಎಸ್. ನಿರಂಜನಕುಮಾರ್, ಡಾ. ಸಿ. ಸೋಮಶೇಖರ್, ಸಚಿವರಾದ ಶ್ರೀ ವಿ. ಸೋಮಣ್ಣ ಮೊದಲಾದವರುಗಳಿದ್ದಾರೆ (26 ಜುಲೈ 2022)



ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಮೈಸೂರಿನ ಅಪರ ಜಿಲ್ಲಾಧಿಕಾರಿಗಳಾದ ಡಾ. ಬಿ.ಎಸ್. ಮಂಜುನಾಥಸ್ವಾಮಿಯವರು ಉದ್ಘಾಟಿಸಿದರು. ಶ್ರೀಮತಿ ವರ್ಷ ಶಿವಕುಮಾರ್, ಶ್ರೀಮತಿ ಪ್ರಿಯದರ್ಶಿನಿ ಸಾಣೇಕೊಪ್ಪ, ಶ್ರೀ ಸಾಂಬಸದಾಶಿವ ಸ್ವಾಮಿಗಳು, ಚಾಮರಾಜನಗರ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಟಿ.ಪಿ. ಶಿವಕುಮಾರ್, ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿ ಹಾಗೂ ಪ್ರೊ ಎಚ್.ಬಿ. ದೇವಣ್ಣರವರುಗಳಿದ್ದಾರೆ (28 ಜುಲೈ 2022)



ಬೆಂಗಳೂರು ಜಯನಗರದ ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ಜೆಎಸ್‌ಎಸ್ ವಿದ್ಯಾರ್ಥಿಗಳ ಒಕ್ಕೂಟವು ಆಯೋಜಿಸಿದ್ದ 'ಗುರುವಂದನಾ' ಕಾರ್ಯಕ್ರಮವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶಿಕ್ಷಕರುಗಳು ಮತ್ತು ಒಕ್ಕೂಟದ ಹಿರಿಯ ವಿದ್ಯಾರ್ಥಿಗಳಿದ್ದಾರೆ (31 ಜುಲೈ 2022)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜಿಲ್ಲಾಧಿಕಾರಿಗಳಾದ ಡಾ. ಬಗಾದಿ ಗೌತಮ್‌ರವರು ಉದ್ಘಾಟಿಸಿದರು. ಸಾಲೂರು ಬೃಹನ್ಮಠದ ಶ್ರೀಗಳು, ಶ್ರೀಮತಿ ಬಿ.ಆರ್. ಪೂರ್ಣಿಮ, ಡಾ. ಚಂದ್ರಗುಪ್ತ ಹಾಗೂ ಡಾ. ಕೆ. ಅನಂತರಾಮುರವರುಗಳಿದ್ದಾರೆ (29 ಜುಲೈ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಉತ್ತರಪ್ರದೇಶದ ಉನ್ನತ ಶಿಕ್ಷಣ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಶ್ರೀ ಯೋಗೇಂದ್ರ ಉಪಾಧ್ಯಾಯರವರು, ಅವರ ಧರ್ಮಪತ್ನಿ ಶ್ರೀಮತಿ ಪ್ರೀತಿ ಉಪಾಧ್ಯಾಯ ಹಾಗೂ ಕುಟುಂಬ ಸದಸ್ಯರುಗಳ ಸಮೇತ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು (3ಆಗಸ್ಟ್ 2022)



ಶ್ರೀ ಸಾಲೂರು ಮಠ ಹಾಗೂ ಶ್ರೀ ಸಾಲೂರುಸ್ವಾಮಿ ಕೃಪಾ ಎಜುಕೇಷನ್ ಟ್ರಸ್ಟ್ ವತಿಯಿಂದ ಪೊನ್ನಾಚಿಯಲ್ಲಿ ಆಯೋಜಿಸಿದ್ದ ಆಲಂಬಾಡಿ ಮಠದ ಕಟ್ಟಡದ ಭೂಮಿಪೂಜೆ ಹಾಗೂ ಬಾಲಕರ ವಸತಿನಿಲಯವನ್ನು ಪರಮಪೂಜ್ಯ ಜಗದ್ಗುರುಗಳವರು ಮತ್ತು ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ವಿ. ಸೋಮಣ್ಣನವರು ಉದ್ಘಾಟಿಸಿದರು. ಶಾಸಕರಾದ ಶ್ರೀ ಆರ್. ನರೇಂದ್ರ, ಸಾಲೂರು, ಕುಂದೂರು ಮಠಗಳ ಶ್ರೀಗಳು ಹಾಗೂ ಶ್ರೀಮತಿ ಪರಿಮಳ ನಾಗಪ್ಪನವರುಗಳಿದ್ದಾರೆ (2 ಆಗಸ್ಟ್ 2022)




ದೊಡ್ಡಬಳ್ಳಾಪುರದಲ್ಲಿ ತಾಲ್ಲೂಕು ವೀರಶೈವ ಲಿಂಗಾಯತ ಸಮಾಜದಿಂದ ಆಯೋಜಿಸಿದ್ದ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಗುರುವಂದನಾ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಬಸವೇಶ್ವರ ಮಠದ ಶ್ರೀಗಳು, ಸಿದ್ಧಗಂಗಾ ಶ್ರೀಗಳು, ಶ್ರೀ ಬಿ.ವೈ. ವಿಜಯೇಂದ್ರ, ಶ್ರೀ ಮೇಲಣಗವಿ ಮಠದ ಶ್ರೀಗಳು ಹಾಗೂ ಶ್ರೀ ಮರಿಸ್ವಾಮಿಯವರುಗಳಿದ್ದಾರೆ (30 ಜುಲೈ 2022)



ಚಾಮರಾಜನಗರ ತಾಲ್ಲೂಕು ಯಾನಗಹಳ್ಳಿಯಲ್ಲಿ ಮಾಜಿ ಶಾಸಕರಾದ ಶ್ರೀ ಸಿ. ಗುರುಸ್ವಾಮಿಯವರ ಎರಡನೇ ವರ್ಷದ ಆರಾಧನೆಯ ಪ್ರಯುಕ್ತ ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ನವ್ಯಶ್ರೀ, ಶ್ರೀಮತಿ ನಾಗಶ್ರೀ ಪ್ರತಾಪ್, ಶ್ರೀಮತಿ ಶೀಲಾ ಗುರುಸ್ವಾಮಿ, ಪಡುಗೂರು, ಸೋಮಹಳ್ಳಿ, ಹಂಡರಕಳ್ಳಿ ಮತ್ತು ಅರಕಲವಾಡಿ ಮಠಗಳ ಶ್ರೀಗಳವರುಗಳಿದ್ದಾರೆ (20 ಆಗಸ್ಟ್ 2022)




ಮೈಸೂರು ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದ ಆವರಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಮೈಸೂರು ನವೋದ್ಯಮ ಉತ್ಸವದಲ್ಲಿ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಸುಧನ್ವ ಧನಂಜಯ, ಪ್ರೊ. ಜಿ. ಹೇಮಂತಕುಮಾರ್, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಸುರೇಶ್ ಸೇಥಿ, ಶ್ರೀ ವಿಶ್ವಪ್ರಸಾದ್ ಆಳ್ವ, ಶ್ರೀ ರಾಜೇಂದ್ರ ಕುಮಾರ್ ಹಾಗೂ ಶ್ರೀ ಸ್ವಾಮಿ ವಿಜ್ಞಾನಾನಂದರವರುಗಳಿದ್ದಾರೆ (5 ಆಗಸ್ಟ್ 2022)



ಮೈಸೂರು ಜೆಎಸ್‌ಎಸ್ ಕಾಲೇಜಿನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಆಯೋಜಿಸಿದ್ದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಾಗೂ ಸ್ಪರ್ಧೆಗಳ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಸಿ.ಟಿ. ರವಿಯವರು ರಾಷ್ಟ್ರಧ್ವಜವನ್ನು ಪ್ರದರ್ಶಿಸುವ ಮೂಲಕ ಉದ್ಘಾಟಿಸಿದರು. ಶ್ರೀ ವೈ.ಸಿ. ರೇವಣ್ಣ, ಶ್ರೀ ಎಚ್.ವಿ. ರಾಜೀವ್, ಶ್ರೀ ರಾಜೇಂದ್ರ, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಲೋಕನಾಥ್, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್.ಪಿ. ಮಂಜುನಾಥ್, ಪ್ರೊ. ಬಿ.ವಿ. ಸಾಂಬಶಿವಯ್ಯನವರುಗಳಿದ್ದಾರೆ (15 ಆಗಸ್ಟ್ 2022)




ಅಮೆರಿಕದ ಮೇರಿಲ್ಯಾಂಡ್‌ನಲ್ಲಿ ನಡೆದ ಕಾವೇರಿ ಕನ್ನಡ ಸಂಘದ ಸುವರ್ಣ ಮಹೋತ್ಸವವನ್ನು ಶ್ರೀ ಸುತ್ತೂರು ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಉದ್ಘಾಟಿಸಿ ಆಶೀರ್ವಚನ ನೀಡುತ್ತಿರುವುದು. ಶ್ರೀ ಕಾವೇರಿ ಕೃಷ್ಣಮೂರ್ತಿ, ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ಮಾರ್ಕ್ ಎನ್ರಿಚ್, ಶ್ರೀ ಪ್ರಭುದೇವ ಕೊನಾನ, ಶ್ರೀ ಅನ್ಮೂಲ್ ಶರ್ಮಾ ಮತ್ತು ಶ್ರೀ ಸತೀಶ್ ಬೆಳಗುತ್ತಿಯವರುಗಳಿದ್ದಾರೆ (26 ಆಗಸ್ಟ್ 2022)




ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ವಿಶ್ವನಾಥ್ ಸುವರ್ಣರವರ "ಕನ್ನಡ ನಾಡಿನ ಬಣ್ಣದ ಬಾನಾಡಿಗಳು' ಪುಸ್ತಕವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಶ್ರೀ ಎಸ್.ಆರ್. ಮಧುಸೂದನ, ಶ್ರೀ ಮಡ್ಡೀಕೆರೆ ಗೋಪಾಲ್, ಶ್ರೀ ಮೋಹನ್ ಕುಮಾರ್ ಗೌಡ, ಶ್ರೀ ವಿಶ್ವನಾಥ್ ಸುವರ್ಣ, ಶ್ರೀ ಕೃಪಾಕರ, ಡಾ. ಸಂತೃಪ್ತ್, ಶ್ರೀ ಕಲ್ಗುಂಡಿ ನವೀನ್ ಹಾಗೂ ಶ್ರೀ ಬಿ.ಸಿ. ಪಾಟೀಲ್‌ರವರುಗಳಿದ್ದಾರೆ (16 ಆಗಸ್ಟ್ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ತಮಿಳುನಾಡು ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಆರ್.ಎನ್. ರವಿಯವರು, ಅವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮೀ ರವಿಯವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (27 ಜುಲೈ 2022)



ಬೆಂಗಳೂರು ಕೈಲಾಸಾಶ್ರಮದ ಶ್ರೀ ಜ್ಞಾನಾಕ್ಷಿ ರಾಜರಾಜೇಶ್ವರಿ ದೇವಸ್ಥಾನದ 44ನೇ ವಾರ್ಷಿಕೋತ್ಸವ, ಮಹಾಶಕ್ತಿದ್ವಾರದ ಉದ್ಘಾಟನೆ ಹಾಗೂ ಪಿರಮಿಡ್ ಆಕಾರದ ಶ್ರೀ ಶಿವರತ್ನಪುರಿ ಟೆಂಪಲ್ ಆಫ್ ಹೆಲ್ತ್‌ನ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಪ್ರಣವಾನಂದ ಪುರಿ ಸ್ವಾಮಿಗಳು, ಶ್ರೀ ಪೂರ್ಣಾನಂದ ಪುರಿ ಸ್ವಾಮಿಗಳು, ಶ್ರೀ ಸ್ವಾಮಿ ನಿರ್ಭಯಾನಂದಜಿ, ಶ್ರೀ ರಾಜರಾಜೇಶ್ವರ ಆಶ್ರಮಜಿ ಮಹಾರಾಜ್, ಶ್ರೀ ಮಧುಸೂದನಾನಂದ ಪುರಿ ಸ್ವಾಮಿಗಳು, ಸಿರಿಗೆರೆ ಜಗದ್ಗುರುಗಳು, ಶ್ರೀ ಜಯೇಂದ್ರ ಪುರಿ ಮಹಾಸ್ವಾಮಿಗಳು, ಪರಮಪೂಜ್ಯ ಜಗದ್ಗುರುಗಳು, ಪುತ್ತಿಗೆ ಶ್ರೀಪಾದಂಗಳು, ಶ್ರೀ ಚಂದ್ರಶೇಖರನಾಥ ಸ್ವಾಮಿಗಳು, ಶ್ರೀ ಷಣ್ಮುಖಾನಂದ ಪುರಿ ಸ್ವಾಮಿಗಳು, ಶ್ರೀ ಬ್ರಹ್ಮಾನಂದ ಸ್ವಾಮಿಗಳು ಮೊದಲಾದವರುಗಳಿದ್ದಾರೆ (8 ಜುಲೈ 2022)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಪರಮಪೂಜ್ಯ ಜಗದ್ಗುರುಗಳವರು ಅಭಿನಂದಿಸಿ ಆಶೀರ್ವದಿಸಿದರು (18 ಆಗಸ್ಟ್ 2022)



ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ನಗರ ಮತ್ತು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಆಯೋಜಿಸಿದ್ದ ನಾಡೋಜ ಕೋ. ಚೆನ್ನಬಸಪ್ಪನವರ ಜನ್ಮಶತಮಾನೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಮ.ಗು. ಸದಾನಂದಯ್ಯ, ಶ್ರೀ ಕೆ.ವಿ. ನಾಗರಾಜಮೂರ್ತಿ, ಡಾ. ಕೆ.ಸಿ. ಗುರುದೇವ, ಪ್ರೊ. ಮಲೆಯೂರು ಗುರುಸ್ವಾಮಿ, ಶ್ರೀ ದೇವರಾಜ ಭೂತೆ, ಪ್ರೊ. ಎಂ.ಎನ್. ತಳವಾರ್, ಡಾ. ಗೊರುಚ, ಶ್ರೀ ಕೆ.ಐ. ಗುದಗಿ, ಡಾ. ಬಸವರಾಜ ಸಾದರ ಮೊದಲಾದವರುಗಳಿದ್ದಾರೆ (27 ಜುಲೈ 2022)



ಸುತ್ತೂರು ಶ್ರೀಕ್ಷೇತ್ರದಲ್ಲಿ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀಮತಿ ಸುಧಾಮೂರ್ತಿಯವರು ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವುದು (26 ಜುಲೈ 2022)

Registered with the Registrar of Newspapers in India Under No. 50622/86
'Prasada' Bi-Monthly, Vol. 37 Issue No. 4, July-August 2022




ಮೇರಿಲ್ಯಾಂಡ್‌ನ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನಲ್ಲಿ ಆಗಸ್ಟ್ 28ರಂದು ಜೆಎಸ್‌ಎಸ್ ಹಿಂದೂ ದೇವಾಲಯದ ಭೂಮಿಪೂಜೆ ಕಾರ್ಯಕ್ರಮವು ಶ್ರೀ ಸುತ್ತೂರು ಮಠ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶ್ರೀ ಕೆಸ್‌ಮನ್, ಶ್ರೀ ಕೆನ್ ರಿಚರ್ಡ್, ಶ್ರೀಮತಿ ಲಿಲಿ ಕ್ಯೂ, ಶ್ರೀಮತಿ ಅರುಣಾ ಮಿಲ್ಲರ್, ಶ್ರೀ ಮಾರ್ಕ್ ಎಲ್ರಿಚ್, ಶ್ರೀ ಅನ್ಮೋಲ್ ಶರ್ಮಾ, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಅಮರನಾಥ ಗೌಡ, ಶ್ರೀ ಮಧುಸೂದನ ನಂಬಿಯಾರ್ ಮತ್ತು ಶ್ರೀ ಪ್ರಕಾಶ್ ವೆಲಗಪುಡಿಯವರುಗಳಿದ್ದಾರೆ.